www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಲಾಜಿಕಲ್ ರೀಸನಿಂಗ್ ಆಪ್ಟಿಟ್ಯೂಡ್ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಒಂದು ಸರಿಯಾದ ಉತ್ತರ ಅಥವಾ ಪರಿಹಾರಕ್ಕೆ ಬರಬೇಕಾದರೆ ತಾತ್ವಿಕ ಮಟ್ಟದ ವಿಶ್ಲೇಷಣೆ ಇರಬೇಕಾಗುತ್ತದೆ.



ನುಡಿನಮನ
ಹೋರಾಟನಿರತರ ಬೆಸೆಯುವ ಚುಂಬಕ ಶಕ್ತಿ 7

ಮಾರ್ಗಸೂಚಿ ಜಾರಿಗೆ ಎನ್‌ಜಿಟಿ ಸೂಚನೆ 8

ಪ್ರಾಣ ಹಿಂಡುವ ಹೊಸ ಮಾರಿ 9

ಸೆನ್ಸೆಕ್ಸ್ 51,017 ▼ | ನಿಫ್ಟಿ 15,301 ▲

ಕನಿಷ್ಠ ಬೆಂಬಲ ಬೆಲೆಯಡಿ ಖರೀದಿಸಿದ ಆಹಾರ ಧಾನ್ಯದ ಬಾಬ್ತು ಪಾವತಿಸದ ಸರ್ಕಾರ

ರೈತರಿಗೆ ₹ 1,066 ಕೋಟಿ ಬಾಕಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದ ರೈತ ಸಮುದಾಯ ಸಂಕಷ್ಟಕ್ಕೆ ಸಿಲುಕಿರುವ ಬೆನ್ನಲ್ಲೇ, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕಳೆದ ವರ್ಷ ರಾಜ್ಯ ಸರ್ಕಾರ ಖರೀದಿಸಿದ ಆಹಾರ ಧಾನ್ಯದ ಬಾಬ್ತು ₹ 1,065.92 ಕೋಟಿಯನ್ನು ರೈತರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದೆ.

2020–21ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ ದಾಖಲೆ ಪ್ರಮಾಣದಲ್ಲಿ ಭತ್ತ, ರಾಗಿ ಮತ್ತು ಬಿಳಿಜೋಳ ಖರೀದಿಸಲಾಗಿತ್ತು. 2,74,036 ರೈತರಿಂದ ಖರೀದಿಸಿದ ಈ ಉತ್ಪನ್ನಗಳಿಗೆ ₹ 2,184.38 ಕೋಟಿ ಪಾವತಿಸಬೇಕಿತ್ತು. ಅದರಲ್ಲಿ 1,53,049 ರೈತರಿಗೆ ₹ 1,116.73 ಕೋಟಿ ಪಾವತಿಸಲಾಗಿದೆ. 1,20,987 ರೈತರ ಖಾತೆಗಳಿಗೆ ಇನ್ನೂ ಹಣ ಪಾವತಿ ಆಗಿಲ್ಲ.

ಒಂದೆಡೆ ಬೆಳೆದ ಉತ್ಪನ್ನಕ್ಕೆ ಸೂಕ್ತ ಬೆಲೆ ಇಲ್ಲದೆ ಮಾರಾಟ ಮಾಡಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ರೈತರಿದ್ದರೆ, ಮಾರಾಟ ಮಾಡಿದ ಉತ್ಪನ್ನದ ಹಣ ಕೈ ಸೇರದೆ ಮತ್ತಷ್ಟು ಕಂಗಾಲಾಗಿದ್ದಾರೆ.



ಕನಿಷ್ಠ ಬೆಂಬಲ ಬೆಲೆ ನೀಡಿ ರಾಜ್ಯ ಸರ್ಕಾರ ಖರೀದಿಸಿದ ಆಹಾರಧಾನ್ಯಗಳ ಮೊತ್ತ ₹ 1,065.92 ಕೋಟಿ ರೈತರಿಗೆ ಪಾವತಿಸಲು ಬಾಕಿ ಇದೆ. ಸಂಪುಟ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸುತ್ತೇನೆ

ಉಮೇಶ ಕತ್ತಿ, ಆಹಾರ ಸಚಿವ



ಸಾಲ ಕಟ್ಟದಿದ್ದರೆ ಬಡ್ಡಿ ವಸೂಲಿ ಮಾಡುವುದಿಲ್ಲವೇ? ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸಿದ ಉತ್ಪನ್ನದ ಬಾಕಿಯನ್ನು ತಕ್ಷಣ ಪಾವತಿಸಬೇಕು

ಬಡಗಲಪುರ ನಾಗೇಂದ್ರ

ಅಧ್ಯಕ್ಷ, ರಾಜ್ಯ ರೈತ ಸಂಘ

ಪ್ರಜಾವಾಣಿ ವಿಶೇಷ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ (ಕೆಎಫ್‌ಸಿಎಸ್‌ಸಿ) ಮತ್ತು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ (ಕೆಎಸ್‌ಸಿಎಂಎಫ್) ಮೂಲಕ ಬೆಂಬಲ ಬೆಲೆಯಲ್ಲಿ ಈ ಧಾನ್ಯಗಳನ್ನು ಖರೀದಿಸಲಾಗಿದೆ. ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡದೇ ಇರುವುದರಿಂದ ಉತ್ಪನ್ನಗಳನ್ನು ಮಾರಾಟ ಮಾಡಿದ ಎಲ್ಲ ರೈತರ ಖಾತೆಗಳಿಗೆ ಹಣ ಜಮೆ ಆಗಿಲ್ಲ ಎಂದು ಈ ಸಂಸ್ಥೆಗಳ ಮೂಲಗಳು ತಿಳಿಸಿವೆ.

ಎಲ್ಲಿ, ಎಷ್ಟು ಬಾಕಿ: ಕೆಎಫ್‌ಸಿಎಸ್‌ಸಿಗೆ ಸರ್ಕಾರ ₹ 581.74 ಕೋಟಿ ಬಿಡುಗಡೆ ಮಾಡಿದೆ. ಅದರಲ್ಲಿ ರೈತರ ಖಾತೆಗಳಿಗೆ ₹ 580.54 ಕೋಟಿ ವರ್ಗಾವಣೆ ಮಾಡಲಾಗಿದೆ. ಇನ್ನೂ 571.52 ಕೋಟಿ ಬಿಡುಗಡೆ ಮಾಡಬೇಕಿದೆ. ಕೆಎಸ್‌ಸಿಎಂಎಫ್ ಸಂಸ್ಥೆಗೆ ₹ 541.74 ಕೋಟಿ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ₹ 536.19 ಕೋಟಿ ರೈತರಿಗೆ ಪಾವತಿಸಲಾಗಿದೆ. ಇನ್ನೂ ₹ 493.21 ಕೋಟಿ ಪಾವತಿಸಲು ಬಾಕಿ ಇದೆ.

ನಿಯಮ ಸಡಿಲು: ಖರೀದಿಸಿದ ಭತ್ತ, ರಾಗಿ, ಜೋಳವನ್ನು ರಾಜ್ಯದ ಪಡಿತರ ಚೀಟಿದಾರರಿಗೆ ವಿತರಿಸುವ ಷರತ್ತಿಗೆ ಒಳಪಟ್ಟು ಕೇಂದ್ರ ಸರ್ಕಾರ ಆಹಾರಧಾನ್ಯ ಖರೀದಿ ಪ್ರಮಾಣದ ಗುರಿ ನಿಗದಿಪಡಿಸಿದೆ. ಅದರನ್ವಯ ಪ್ರತಿ ರೈತರಿಂದ ಇಂತಿಷ್ಟೆ ಖರೀದಿಸಬೇಕೆಂಬ ನಿಯಮ ಸಡಿಲಿಸಿ, ಜಮೀನಿಗೆ ಅನುಗುಣವಾಗಿ ಖರೀದಿಸಲಾಗಿದೆ. ಹೀಗಾಗಿ, ರೈತರು ತಾವು ಬೆಳೆದ ಉತ್ಪನ್ನದ ಪ್ರಮಾಣಕ್ಕೆ ಅನುಗುಣವಾಗಿ ಮಾರಾಟ ಮಾಡಲು ಸಾಧ್ಯವಾಗಿದ್ದು, ದಾಖಲೆ ಪ್ರಮಾಣದಲ್ಲಿ ಖರೀದಿ ಆಗಿದೆ.

ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ರಾಜ್ಯಕ್ಕೆ ಹಂಚಿಕೆ ಮಾಡುವ ಆಹಾರಧಾನ್ಯದ ಪ್ರಮಾಣದಲ್ಲಿ ಕೇಂದ್ರ ಸರ್ಕಾರ, ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿರುವ ಪ್ರಮಾಣದ ಭತ್ತವನ್ನು (ಪ್ರತಿ ಕ್ವಿಂಟಲ್ ಭತ್ತಕ್ಕೆ 67 ಕಿಲೋ ಅಕ್ಕಿಯಂತೆ ಪರಿವರ್ತಿಸಿ) ಹಾಗೂ ರಾಗಿ ಮತ್ತು ಜೋಳದ ಪ್ರಮಾಣವನ್ನು ಕಡಿತಗೊಳಿಸಿ ಹಂಚಿಕೆ ಮಾಡುತ್ತದೆ. ರಾಜ್ಯದಲ್ಲಿ ಖರೀದಿಸಿದ ರಾಗಿ ಮತ್ತು ಜೋಳವನ್ನು ಅವುಗಳನ್ನು ಬೆಳೆಯುವ ಮತ್ತು ಉಪಯೋಗಿಸುವ ಜಿಲ್ಲೆಗಳ ಪಡಿತರಚೀಟಿದಾರರಿಗೆ ಹಂಚಿಕೆ ಮಾಡಲಾಗುತ್ತಿದೆ.

ಕೆಎಫ್‌ಸಿಎಸ್‌ಸಿ ಮತ್ತು ಕೆಎಸ್‌ಸಿಎಂಎಫ್‌ನಲ್ಲಿ ಒಟ್ಟು ಖರೀದಿ


ಉತ್ಪನ್ನ	ರೈತರ ಸಂಖ್ಯೆ	ಪ್ರಮಾಣ (ಟನ್‌ಗಳಲ್ಲಿ)	ಮೊತ್ತ (₹ ಕೋಟಿಗಳಲ್ಲಿ)
ಭತ್ತ	54,319	2.06 ಲಕ್ಷ	386.43
ರಾಗಿ	2,06,269	4.74 ಲಕ್ಷ	1,583.01
ಜೋಳ	13,448	80,683	214.94
ಒಟ್ಟು	2,74,036	-	2,18,438

ಧರೆಯ ಮಡಿಲಿಗೆ ಹೋರಾಟದ ದೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಿನ ಶತಮಾನದ ಸಾಕ್ಷಿಪ್ರಜ್ಞೆಯಂತಿದ್ದ, ಅನ್ಯಾಯ ಹಾಗೂ ಅಕ್ರಮಗಳ ವಿರುದ್ಧ ಸದಾ ಪ್ರತಿರೋಧ ತೋರುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ (103) ಅವರು ಹೃದಯಾಘಾತದಿಂದ ಬುಧವಾರ ನಿಧನರಾದರು.

ಶಾಲಾದಿನಗಳಲ್ಲಿ ಗಾಂಧಿಯ ಪ್ರಭಾವಕ್ಕೆ ಒಳಗಾದ ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ, ಪತ್ರಕರ್ತರಾಗಿ, ಸಾಮಾಜಿಕ ಕಾರ್ಯಕರ್ತರಾಗಿ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿದ್ದರು. ಗಣಿಲೂಟಿ ವಿರೋಧಿಸುವುದರಿಂದ ಹಿಡಿದು ಭೂರಹಿತರಿಗೆ ಭೂಮಿ ದೊರಕಿಸಿಕೊಡುವ ಹೋರಾಟದವರೆಗೆ, ದಲಿತರ ದೇವಾಲಯ ಪ್ರವೇಶದಿಂದ ಕೋಮುಸಂಘರ್ಷದ ಬೆಂಕಿ ಆರಿಸಿ ಶಾಂತಿ ನೆಲೆಸುವ ಪ್ರಯತ್ನಗಳವರೆಗೆ – ಎಲ್ಲ ಜನಪರ ಚಳವಳಿಗಳಲ್ಲಿ ಮುಂಚೂಣಿಯಲ್ಲಿ ಇದ್ದರು.



ಎಚ್.ಎಸ್. ದೊರೆಸ್ವಾಮಿ
10-4-1918 - 26-5-2021

ಎಂಟು ದಶಕಗಳ ಸುದೀರ್ಘ ಅವಧಿಯಲ್ಲಿ ಕಿಂಚಿತ್ತೂ ರಾಜಿಗೆ ಒಪ್ಪದೆ ಹೋರಾಟದಲ್ಲಿ ತೊಡಗಿದ್ದ ಅವರು, ಜನಸಾಮಾನ್ಯರ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಿರಂತರವಾಗಿ ಧ್ವನಿ ಎತ್ತಿದ್ದರು.

ರಾಜ್ಯದ ಹಿತಕ್ಕೆ ಮಾರಕವಾಗುವ ಯೋಜನೆಗಳು, ನೀತಿಗಳನ್ನು ನಿಷ್ಠುರವಾಗಿ ಯಾರ ಹಂಗಿಗೂ ಒಳಗಾಗದಂತೆ ಟೀಕಿಸುತ್ತಿದ್ದ ಅವರು, ತಮ್ಮ ಪ್ರತಿಭಟನೆಯ ಮೂಲಕ ಸರ್ಕಾರವನ್ನು ಜಾಗೃತಗೊಳಿಸುತ್ತಿದ್ದರು. ತಮ್ಮ 98ನೇ ವಯಸ್ಸಿನಲ್ಲಿ 'ಭೂಗಳ್ಳರು ಕಬಳಿಸಿದ ಸರ್ಕಾರಿ ಜಮೀನನ್ನು ಉಳಿಸಿದ ಹೋರಾಟ' ಎಂಬ ಪುಸ್ತಕ ಬರೆದಿದ್ದರು.

7ನೇ ಪುಟ ನೋಡಿ

ನಾಯಕತ್ವ ಬದಲಾವಣೆಯ 'ಸಂಚಲನ'

ಬೆಂಗಳೂರು: ಮುಖ್ಯಮಂತ್ರಿ ಬದಲಾವಣೆ ಕುರಿತು ಬಿಜೆಪಿ ಪಾಳೆಯದಲ್ಲಿ 'ಬಹಿರಂಗ' ಚರ್ಚೆಗೆ ಚಾಲನೆ ಸಿಕ್ಕಿರುವ ಬೆನ್ನಲ್ಲೇ, 'ನಾಯಕತ್ವ ಬದಲಾವಣೆಯ ಚಟುವಟಿಕೆ ನಡೆದಿರುವುದು ಶೇ 100 ರಷ್ಟು ನಿಜ' ಎಂದು ಕಂದಾಯ ಸಚಿವ ಆರ್. ಅಶೋಕ ಪ್ರತಿಪಾದಿಸಿರುವುದು ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ.

ಆದರೆ, ಇಬ್ಬರು ಉಪಮುಖ್ಯಮಂತ್ರಿ ಮತ್ತು ಸಚಿವರು ಯಡಿಯೂರಪ್ಪ ಅವರ ಪರ ಹೇಳಿಕೆ ನೀಡಿದ್ದಲ್ಲದೇ, 'ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ನಾಯಕತ್ವದ ಬದಲಾವಣೆ ಊಹಾಪೋಹ' ಎಂದೂ ಪ್ರತಿಪಾದಿಸಿದ್ದಾರೆ.

'ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅವಧಿಯನ್ನು ಪೂರ್ಣಗೊಳಿಸಲಿದ್ದಾರೆ' ಎಂದು ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಶಾಸಕರು ಹೇಳಿದ್ದಾರೆ.

9ನೇ ಪುಟ ನೋಡಿ

ಕೇಂದ್ರ ಸರ್ಕಾರದ ವಿರುದ್ಧ ವಾಟ್ಸ್‌ಆ್ಯಪ್ ದಾವೆ

ನವದೆಹಲಿ (ಪಿಟಿಐ/ರಾಯಿಟರ್ಸ್): ಕೇಂದ್ರ ಸರ್ಕಾರ ಹೊಸದಾಗಿ ಜಾರಿಗೆ ತಂದಿರುವ ಡಿಜಿಟಲ್ ಕಾಯ್ದೆಗಳನ್ನು ಪ್ರಶ್ನಿಸಿ ಪ್ರಮುಖ ಸಾಮಾಜಿಕ ಜಾಲತಾಣ ಕಂಪನಿ ವಾಟ್ಸ್‌ಆ್ಯಪ್ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಸರ್ಕಾರದ ಹೊಸ ಕಾಯ್ದೆಗಳ ಪ್ರಕಾರ ಗೂಢಲಿಪೀಕರಿಸಿದ ಸಂದೇಶಗಳ (ಎನ್‌ಕ್ರಿಪ್ಟೆಡ್) ಮಾಹಿತಿ ಹಂಚಿಕೊಳ್ಳುವುದರಿಂದ ಬಳಕೆದಾರರ ಗೌಪ್ಯತೆಯ ಉಲ್ಲಂಘನೆಯಾಗುತ್ತದೆ ಎಂದು ಕಂಪನಿ ವಾದಿಸಿದೆ.


ಪೋಸ್ಟ್ ಮಾಡಲಾದ ಯಾವುದೇ ಸಂದೇಶದ 'ಮೂಲ'ವನ್ನು ಗುರುತಿಸುವುದು ಸಂವಿಧಾನ ಒದಗಿಸಿದ ಖಾಸಗಿತನದ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಮಂಗಳವಾರ ಸಂಜೆ ಸಲ್ಲಿಸಲಾದ ಅರ್ಜಿಯಲ್ಲಿ ತಿಳಿಸಲಾಗಿದೆ.

'ವಾಟ್ಸ್‌ಆ್ಯಪ್ ಮೂಲಕ ಕಳುಹಿಸಲಾದ ಪ್ರತಿಯೊಂದು ಸಂದೇಶದ ಮೇಲೆ ನಿಗಾ ವಹಿಸುವುದು ಎಂದರೆ, ಪ್ರತಿಯೊಂದು ಸಂದೇಶದ ಬೆರಳಚ್ಚು ಇಟ್ಟುಕೊಳ್ಳಿ ಎಂದು ಹೇಳುವುದಕ್ಕೆ ಸಮ. ಇದರಿಂದ ಗೂಢಲಿಪೀಕರಣವು ಅರ್ಥ ಕಳೆದುಕೊಂಡು, ಜನರ ಮೂಲಭೂತ ಖಾಸಗಿತನದ ಹಕ್ಕು ಕೊನೆಯಾಗುತ್ತದೆ' ಎಂದು ಕಂಪನಿ ವಕ್ತಾರರು ಬುಧವಾರ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಸೂಕ್ತ ಪರಿಹಾರಕ್ಕಾಗಿ ಭಾರತ ಸರ್ಕಾರದ ಜೊತೆ ನಾವು ನಿರಂತರವಾಗಿ ಸಂಪರ್ಕದಲ್ಲಿರುತ್ತೇವೆ. ಕಾನೂನಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಹಂಚಿಕೊಳ್ಳುತ್ತೇವೆ' ಎಂದು ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

8ನೇ ಪುಟ ನೋಡಿ

ಭಾರತದಲ್ಲಿ ಬಳಕೆದಾರರ ಸಂಖ್ಯೆ



ಒಳ ಪುಟಗಳು

ಸಕ್ರಿಯ ಪ್ರಕರಣ 4.09 ಲಕ್ಷಕ್ಕೆ ಇಳಿಕೆ 5

ಕಡಿಮೆಯಾದರೂ ಕೊರೊನಾ– ಏರಲಿದೆ ಮರಣ ಪ್ರಮಾಣ 9

ಆಮ್ಲಜನಕ ಕೇಂದ್ರ ಆರಂಭಿಸಿದ ನಟ ಸೂದ್ 5

ನಾಲ್ಕರ ಘಟ್ಟಕ್ಕೆ ಸಿಮ್ರನ್‌ಜೀತ್ 10

ಡೊಮಿನಿಕಾದಲ್ಲಿ ಮೆಹುಲ್ ಚೋಕ್ಸಿ ಬಂಧನ

ನವದೆಹಲಿ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ವಂಚಿಸಿ ಭಾರತದಿಂದ ಪರಾರಿಯಾಗಿರುವ ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿಯನ್ನು ಡೊಮಿನಿಕಾದಲ್ಲಿ ಬಂಧಿಸಲಾಗಿದೆ ಎಂದು ಸ್ಥಳೀಯ ಮಾಧ್ಯಮ ಬುಧವಾರ ವರದಿ ಮಾಡಿದೆ.

3ನೇ ಪುಟ ನೋಡಿ



ಚಂಡಮಾರುತದ ಕಾರಣ ಸುರಿದ ಭಾರಿ ಮಳೆಯಿಂದಾಗಿ ಕೋಲ್ಕತ್ತದ ಬೀದಿಗಳು ಬುಧವಾರ ಜಲಾವೃತಗೊಂಡಿದ್ದವು – ಪಿಟಿಐ ಚಿತ್ರ

ರಾಜ್ಯ ಕೋವಿಡ್ ಅಂಕಿ–ಅಂಶ

24,99,784 ▲	ಒಟ್ಟು ಸೋಂಕಿತರು (24,72,973 ನಿನ್ನೆಯ ವಿವರ)
4,09,924 ▼	ಸಕ್ರಿಯ ಪ್ರಕರಣಗಳು
20,62,910 ▲	ಗುಣಮುಖರಾದವರು
26,929 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	26,811	▲
ಗುಣಮುಖ	40,741	▲
ಸಾವು	530	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ

ಆಟ-ನೋಟ
ವನಿತಾ ಧ್ವನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಕೋಟಿ ಜನರ ಕಾಡಿದ 'ಯಸ್'

ಒಡಿಶಾ, ಪಶ್ಚಿಮ ಬಂಗಾಳದಲ್ಲಿ ಚಂಡಮಾರುತದ ಅಬ್ಬರ

ಬಾಲಸೋರ್/ಕೋಲ್ಕತ್ತ/ರಾಂಚಿ (ಪಿಟಿಐ): ಗಂಟೆಗೆ 130ರಿಂದ 145 ಕಿ.ಮೀ. ವೇಗದ ಗಾಳಿಯೊಂದಿಗೆ ಒಡಿಶಾ ಕರಾವಳಿಗೆ ಬುಧವಾರ ಬೆಳಿಗ್ಗೆ ಅಪ್ಪಳಿಸಿದ 'ಯಸ್' ಚಂಡಮಾರುತವು, ಒಡಿಶಾ ಮತ್ತು ಪಶ್ಚಿಮ ಬಂಗಾಳದಲ್ಲಿ ಅಪಾರ ಹಾನಿಗೆ ಕಾರಣವಾಗಿದೆ. ಎರಡೂ ರಾಜ್ಯಗಳಲ್ಲಿ ಭಾರಿ ಮಳೆ ಸುರಿದಿದೆ. ಮನೆಗಳು ಮತ್ತು ಹೊಲಗಳು ಹಾನಿಯಾಗಿವೆ. ಒಡಿಶಾದಲ್ಲಿ ಮೂವರು ಮತ್ತು ಪಶ್ಚಿಮ ಬಂಗಾಳದಲ್ಲಿ ಒಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಒಂದು ಕೋಟಿಗೂ ಹೆಚ್ಚು ಜನರು ತೊಂದರೆಗೆ ಒಳಗಾಗಿದ್ದಾರೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಒಡಿಶಾದ ಧಾಮ್ರ ಬಂದರು ಸಮೀಪ ಚಂಡಮಾರುತವು ಬುಧವಾರ ಬೆಳಿಗ್ಗೆ 9 ಗಂಟೆಯ ಹೊತ್ತಿಗೆ ಭೂಪ್ರವೇಶ ನಡೆಸಿತು. ಆ ಹೊತ್ತಿಗೆ ವಿಸ್ತಾರವಾದ ಕರಾವಳಿ ಪ್ರವೇಶದಲ್ಲಿ ಭಾರಿ ಮಳೆ ಸುರಿಯುತ್ತಿತ್ತು. ತಗ್ಗು ಪ್ರದೇಶಗಳಲ್ಲಿ ಏರುತ್ತಲೇ ಇದ್ದ ನೀರಿನ ಮಟ್ಟವು ಮಣ್ಣು ಮತ್ತು ಹುಲ್ಲಿನ ಚಾವಣಿಯ ಹಲವು ಮನೆಗಳನ್ನು ನೆಲಕ್ಕೆ ಉರುಳಿಸಿದೆ.

ಚಂಡಮಾರುತದ ಬಗೆಗಿನ ಮುನ್ಸೂಚನೆಯಿಂದಾಗಿ 20 ಲಕ್ಷಕ್ಕೂ ಹೆಚ್ಚು ಜನರನ್ನು ಮಂಗಳವಾರ ರಾತ್ರಿಯೊಳಗೇ ಸ್ಥಳಾಂತರಿಸಲಾಗಿತ್ತು. ಕೋವಿಡ್ ಸಾಂಕ್ರಾಮಿಕದಿಂದಾಗಿ ಜನರನ್ನು ಒಂದೇ ಕಡೆ ಇರಿಸುವುದು ಕೂಡ ದೊಡ್ಡ ಸವಾಲೇ ಆಗಿದೆ.

ಬುಧವಾರ ಸಂಜೆಯ ಹೊತ್ತಿಗೆ ಚಂಡಮಾರುತದ ವೇಗವು ಅಲ್ಪ ಕುಂದಿದೆ. ಆದರೆ, ಅದಕ್ಕೂ ಮೊದಲಿನ ಅವಧಿಯಲ್ಲಿ ಒಡಿಶಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ತತ್ತರಿಸುವಂತೆ ಮಾಡಿತ್ತು. ಈಗ ಮಾರುತವು ಜಾರ್ಖಂಡ್‌ನತ್ತ ಮುಖ ಮಾಡಿದೆ.

ಒಂದು ವಾರದಲ್ಲಿ ಭಾರತಕ್ಕೆ ಅಪ್ಪಳಿಸಿದ ಎರಡನೇ ಚಂಡಮಾರುತ ಇದು. ತೌತೆ ಚಂಡಮಾರುತವು ಪಶ್ಚಿಮ ಕರಾವಳಿಗೆ ಕಳೆದ ವಾರ ಅಪ್ಪಳಿಸಿತ್ತು. ಮಹಾರಾಷ್ಟ್ರ, ಗುಜರಾತ್ ಸೇರಿ ಐದು ರಾಜ್ಯಗಳಲ್ಲಿ ಭಾರಿ ನಾಶಕ್ಕೆ ಕಾರಣವಾಗಿತ್ತು.

ಮುಖ್ಯಾಂಶಗಳು

- ಪ. ಬಂಗಾಳದಲ್ಲಿ 3 ಲಕ್ಷ ಮನೆಗಳಿಗೆ ಹಾನಿ: ಮಮತಾ
- ಮೀನುಗಾರಿಕೆಯ ಹಲವು ದೋಣಿಗಳು ನಾಶವಾಗಿವೆ
- ನದಿ ಪ್ರವಾಹ: ತಗ್ಗು ಪ್ರದೇಶದ ನಿವಾಸಿಗಳಿಗೆ ಎಚ್ಚರಿಕೆ

ಇನ್ನೊಂದು ಸುದ್ದಿ 9

ರೈತರ ಪ್ರತಿಭಟನೆಗೆ 6 ತಿಂಗಳು: ಕರಾಳ ದಿನ ಆಚರಣೆ

'ಬೇಡಿಕೆ ಈಡೇರದೆ ಕದಲುವುದಿಲ್ಲ'

ನವದೆಹಲಿ (ಪಿಟಿಐ): ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯ ಮೂರು ಗಡಿಗಳಲ್ಲಿ (ಸಿಂಘು, ಗಾಜಿಪುರ ಮತ್ತು ಟಿಕ್ರಿ) ನಡೆಯುತ್ತಿರುವ ಪ್ರತಿಭಟನೆಯು ಆರು ತಿಂಗಳು ಪೂರ್ಣಗೊಳಿಸಿದ ಸಂದರ್ಭದಲ್ಲಿ ರೈತರು ಬುಧವಾರ ಕರಾಳ ದಿನ ಆಚರಿಸಿದ್ದಾರೆ. ಪ್ರತಿಭಟನಾ ಸ್ಥಳಗಳಲ್ಲಿ ಕಪ್ಪು ಬಾವುಟ ಹಾರಿಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದ್ದಾರೆ. ಪ್ರತಿಕೃತಿ ಸುಟ್ಟು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಸಾಂಕ್ರಾಮಿಕದ ಸಂದರ್ಭದಲ್ಲಿ ಸರ್ಕಾರವು ಈ ಕಾನೂನುಗಳನ್ನು ಜಾರಿಗೆ ತರಬಾರದಿತ್ತು. ಈಗ ನಾವು ಹಿಂದಿರುಗಬೇಕು ಎಂದು ಸರ್ಕಾರವು ಬಯಸುವುದಾದರೆ ನಮ್ಮ ಮಾತು ಕೇಳಲಿ. ಕಾಯ್ದೆಗಳನ್ನು ರದ್ದುಪಡಿಸಲಿ. ನಮ್ಮ ಬೇಡಿಕೆ ಈಡೇರುವವರೆಗೆ ಇಲ್ಲಿಂದ ಹೋಗುವುದಿಲ್ಲ' ಎಂದು ರೈತ ಮುಖಂಡ ಅವತಾರ್ ಸಿಂಗ್ ಮೆಹ್ಮಾ ಅವರು ಈ ಸಂದರ್ಭದಲ್ಲಿ ಹೇಳಿದ್ದಾರೆ.

ಪ್ರತಿಭಟನೆ ಸ್ಥಳಗಳಲ್ಲಿ ಭಾರಿ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಕೋವಿಡ್–19 ಮತ್ತು ಲಾಕ್‌ಡೌನ್ ಕಾರಣದಿಂದಾಗಿ ಜನರು ಒಟ್ಟು ಸೇರಬಾರದು ಎಂದು ದೆಹಲಿ ಪೊಲೀಸರು ಮನವಿ ಮಾಡಿದ್ದರು. ಜತೆಗೆ, ಯಾವುದೇ ಪರಿಸ್ಥಿತಿ ಎದುರಿಸಲು ಪೊಲೀಸರು ಸನ್ನದ್ಧರಾಗಿ ಇದ್ದರು.

ಪ್ರತಿಭಟನೆಯ ಸ್ಥಳಗಳಲ್ಲಿ ಮಾತ್ರವಲ್ಲ, ಹರಿಯಾಣ, ಪಂಜಾಬ್ ಮತ್ತು ಉತ್ತರ ಪ್ರದೇಶದ ಗ್ರಾಮಗಳಲ್ಲಿಯೂ ಕಪ್ಪು ಬಾವುಟ ಹಾರಿಸಲಾಗಿದೆ ಎಂದು ಮೆಹ್ಮಾ ಹೇಳಿದ್ದಾರೆ. ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ನೇತೃತ್ವದಲ್ಲಿ ಗಾಜಿಪುರ ಗಡಿಯಲ್ಲಿ ಕರಾಳ ದಿನ ಆಚರಿಸಲಾಯಿತು. ಪ್ರಧಾನಿ ನರೇಂದ್ರ ಮೋದಿ ಮತ್ತು ಇತರ ನಾಯಕರ ಪ್ರತಿಕೃತಿ ಸುಡಲಾಯಿತು.



ಪ್ರಧಾನಿ ಮೋದಿಯವರ ಪ್ರತಿಕೃತಿಯನ್ನು ವಾಹನದಲ್ಲಿ ಇರಿಸಿ, ಕಪ್ಪು ಬಾವುಟ ಪ್ರದರ್ಶಿಸಿ ರೈತರು ಅಮೃತಸರದಲ್ಲಿ ಪ್ರತಿಭಟನೆ ನಡೆಸಿದರು – ಎಎಫ್‌ಪಿ ಚಿತ್ರ

ಕಾಯ್ದೆಗಳ ವಿರುದ್ಧ ನಿರ್ಣಯ: ಸ್ಟಾಲಿನ್

ಸಂಸತ್ತು ಅನುಮೋದನೆ ಕೊಟ್ಟಿರುವ ಮೂರುಕೃಷಿ ಕಾಯ್ದೆಗಳ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗುವುದು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಬುಧವಾರ ಹೇಳಿದ್ದಾರೆ.

ಮೂರೂ ಕಾಯ್ದೆಗಳನ್ನು ತಕ್ಷಣವೇ ರದ್ದುಪಡಿಸಬೇಕು ಎಂದು ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬಿಜೆಪಿ ಸರ್ಕಾರವು ತನ್ನ ಅಹಂನಿಂದಾಗಿ ರೈತರ ಜತೆ ನಡೆದುಕೊಂಡ ರೀತಿಯು ದೇಶದ ಪ್ರತಿ ಪೌರನಲ್ಲಿಯೂ ಆಕ್ರೋಶ ಮೂಡಿಸಿದೆ

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಆರು ತಿಂಗಳಲ್ಲಿ ರೈತರು ದಣಿದು ಪ್ರತಿಭಟನೆ ನಿಲ್ಲಿಸುತ್ತಾರೆ ಎಂದು ಸರ್ಕಾರ ಭಾವಿಸಿತ್ತು. ಪ್ರತಿಭಟನೆ ನಡೆಸುತ್ತಿರುವ ರೈತರ ಜತೆ ಮಾತುಕತೆ ನಡೆಸುವುದು ಸರ್ಕಾರದ ಕರ್ತವ್ಯ

ನವಾಬ್ ಮಲಿಕ್, ಎನ್‌ಸಿಪಿ ವಕ್ತಾರ

ಇನ್ನಷ್ಟು ಸುದ್ದಿಗಳು 3B

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-4

ಚಿನಕುರಳಿ

ಪ್ರಕಾಶ್ ಶೆಟ್ಟಿ



ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿ ವಿವಿಧ ಕೋರ್ಸ್‌ಗಳಲ್ಲಿ ಮೂರು ತಿಂಗಳ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಮೇ 31ರೊಳಗೆ dsdoblr.urban@gmail.com ವಿಳಾಸಕ್ಕೆ ತಮ್ಮ ಸ್ವವಿವರ ಕಳುಹಿಸುವಂತೆ ಪ್ರಕಟಣೆ ತಿಳಿಸಿದೆ. ಸಂಪರ್ಕ:9731124693, 9945817237

ಕಣ್ಣೂರು: ಬಿಸಿ ಡಾಂಬರು ಮಿಶ್ರಣ ಘಟಕ ನಿರ್ವಹಣೆ

ಟೆಂಡರ್ ಪ್ರಕ್ರಿಯೆ: ಅಕ್ರಮದ ವಾಸನೆ

• ಮಂಜುನಾಥ ಹೆಬ್ಬಾರ್/ ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಯು ಕಣ್ಣೂರಿನಲ್ಲಿ ಸ್ಥಾಪಿಸಿರುವ ಜಲ್ಲಿ– ಬಿಸಿ ಡಾಂಬರು ಮಿಶ್ರಣ (ಹಾಟ್ ಮಿಕ್ಸ್) ಘಟಕದ ನಿರ್ವಹಣೆಯ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಅನುಮಾನ ಮೂಡಿದೆ.

ಈ ಘಟಕದ ನಿರ್ವಹಣೆಗೆ ಮತ್ತು ಬಿಬಿಎಂಪಿಯ ಸಂಪನ್ಮೂಲ ಬಳಸಿ ಬಿಸಿ ಡಾಂಬರು ಮಿಶ್ರಣ ತಯಾರಿಸುವ ಸಲುವಾಗಿ ಪಾಲಿಕೆ 2021ರ ಮಾರ್ಚ್ 20ರಂದು ಟೆಂಡರ್ ಕರೆದಿತ್ತು. ಇದರಲ್ಲಿ ಐವರು ಗುತ್ತಿಗೆದಾರರು ಭಾಗವಹಿಸಿದ್ದರು. ಇವರಲ್ಲಿ ಮೂವರು ಗುತ್ತಿಗೆದಾರರಿಗೆ ತಾಂತ್ರಿಕ ಪರಿಶೀಲನೆ ಸಂದರ್ಭದಲ್ಲಿ ಕೆಲವೊಂದು ಮಾನದಂಡಗಳಿಗೆ ಸೊನ್ನೆ ಅಂಕ ನೀಡಲಾಗಿದ್ದು, ಇದು ಇಡೀ ಟೆಂಡರ್ ಪ್ರಕ್ರಿಯೆಯ ಪಾರದರ್ಶಕತೆಯೇ ಬಗ್ಗೆಯೇ ಸಂದೇಹ ಮೂಡಿಸಿದೆ.

ನಾಲ್ಕು ಪ್ರಮುಖ ಮಾನದಂಡಗಳ ಆಧಾರದಲ್ಲಿ ಗುತ್ತಿಗೆದಾರರ ತಾಂತ್ರಿಕ ಅರ್ಹತೆಯ ಪರಿಶೀಲನೆ ನಡೆಸಲಾಗಿತ್ತು. ಒಟ್ಟು 100 ಅಂಕಗಳಲ್ಲಿ 70 ಅಂಕ ಗಳಿಸುವ ಸಂಸ್ಥೆಗಳು ಗುತ್ತಿಗೆ ಪ್ರಕ್ರಿಯೆಯಲ್ಲಿ ಮುಂದುವರಿಯುವ ಅರ್ಹತೆ ಪಡೆಯುತ್ತವೆ. ಗುತ್ತಿಗೆದಾರರ ನಿರ್ದಿಷ್ಟ ಅನುಭವದ ವಿಚಾರದಲ್ಲಿ ಎಲ್ಲ ಐವರು ಗುತ್ತಿಗೆದಾರರಿಗೆ ಪೂರ್ತಿ 60 ಅಂಕಗಳನ್ನು ನೀಡಲಾಗಿದೆ. ಅರ್ಹತೆ, ಕಾರ್ಯಯೋಜನೆ ಮತ್ತು ಕಾರ್ಯವಿಧಾನಗಳ ಪ್ರಸ್ತಾವಗಳಿಗೆ ಗರಿಷ್ಠ 15 ಅಂಕ ನಿಗದಿಮಾಡಲಾಗಿತ್ತು. ಗುತ್ತಿಗೆದಾರ ಬಿ.ಎಸ್.ಧನಂಜಯ ಅವರಿಗೆ 2 ಅಂಕ ನೀಡಲಾಗಿದೆ. ಉಳಿದ ನಾಲ್ವರಿಗೂ ಸೊನ್ನೆ ಅಂಕಗಳನ್ನು ನೀಡಲಾಗಿದೆ. ಧನಂಜಯ ಅವರು ನಗರದ ಸಚಿವರೊಬ್ಬರಿಗೆ ಪರಮಾಪ್ತರು.

ಗುತ್ತಿಗೆದಾರರು ಹೊಂದಿರುವ ಉಪಕರಣ ಹಾಗೂ ಜ್ಞಾನ ಹಸ್ತಾಂತರ ವಿಚಾರಕ್ಕೆ ಸಂಬಂಧಿಸಿ 10 ಅಂಕ ನಿಗದಿಪಡಿಸಲಾಗಿತ್ತು. ಬಿ.ಬಿ.ಉಮೇಶ, ಎಂ.ವೆಂಕಟಾಚಲಪತಿ ಹಾಗೂ ಎಸ್.ಸತೀಶ ಅವರಿಗೆ ತಲಾ 8 ಅಂಕ, ಬಿ.ಎಸ್. ಧನಂಜಯ ಮತ್ತು ಜೆಎಂಸಿ ಕನ್‌ಸ್ಟ್ರಕ್ಷನ್ಸ್‌ಗೆ ತಲಾ 10 ಅಂಕ ನೀಡಲಾಗಿದೆ. ವೃತ್ತಿಪರ ಸಿಬ್ಬಂದಿಯ ಅರ್ಹತೆ ಹಾಗೂ ದಕ್ಷತೆಗೆ 15 ಅಂಕಗಳನ್ನು ನಿಗದಿಪಡಿಸಲಾಗಿತ್ತು. ಇದರಲ್ಲಿ ಧನಂಜಯ ಅವರಿಗೆ ಪೂರ್ತಿ 15 ಅಂಕಗಳನ್ನು ಹಾಗೂ ಜೆಎಂಸಿ ಕನ್‌ಸ್ಟ್ರಕ್ಷನ್ಸ್ ಸಂಸ್ಥೆಗೆ 7 ಅಂಕ ನೀಡಲಾಗಿದೆ. ಉಳಿದ ಮೂವರಿಗೆ ಸೊನ್ನೆ ಅಂಕ ನೀಡಲಾಗಿದೆ.

ಧನಂಜಯ ಬಿ.ಎಸ್. ಅವರು ಅತಿ ಹೆಚ್ಚು ಅಂಕ ಗಳಿಸಿ (87) ಈ ಟೆಂಡರ್ ಪಡೆಯಲು ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಎರಡನೇ ಸ್ಥಾನ ಪಡೆದ ಜೆಎಂಸಿ ಕನ್‌ಸ್ಟ್ರಕ್ಷನ್ಸ್ 77 ಅಂಕ ಪಡೆದಿದೆ. ಇನ್ನುಳಿದ ಮೂವರು ಗುತ್ತಿಗೆದಾರರಿಗೆ ಕೇವಲ 68 ಅಂಕಗಳನ್ನು ನೀಡಲಾಗಿದ್ದು, ಅವರು ತಾಂತ್ರಿಕ ಅರ್ಹತೆ ಗಳಿಸುವಲ್ಲಿ ವಿಫಲರಾಗಿದ್ದಾರೆ.

ಪ್ರಜಾವಾಣಿ ವಿಶೇಷ

ಆದರೆ, ಟೆಂಡರ್‌ನ ತಾಂತ್ರಿಕ ಪರಿಶೀಲನೆ ಈಗ ಕೆಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಟೆಂಡರ್‌ನಲ್ಲಿ ಭಾಗವಹಿಸಿರುವ ಎಲ್ಲರೂ ತಮ್ಮಲ್ಲಿರುವ ವೃತ್ತಿಪರ ಸಿಬ್ಬಂದಿಯ ವಿವರ ನೀಡಿದ್ದರು. ಹಾಗಿದ್ದರೂ ಮೂರು ಗುತ್ತಿಗೆದಾರರಿಗೆ ಸೊನ್ನೆ ಅಂಕಗಳನ್ನು ನೀಡಿದ್ದು ಏಕೆ ಎಂದು ಅರ್ಥವಾಗದು. ವೃತ್ತಿಪರ ಸಿಬ್ಬಂದಿಯ ಅರ್ಹತೆ ಹಾಗೂ ದಕ್ಷತೆಗೆ ಸ್ವಲ್ಪವಾದರೂ ಅಂಕ ಪಡೆಯುವ ಅರ್ಹತೆ ಇದ್ದರೂ ಸೊನ್ನೆ ಅಂಕ ನೀಡಲಾಗಿದೆ. ಹಾಗಾಗಿ ಮೂವರು ಗುತ್ತಿಗೆದಾರರು ಕೇವಲ 2 ಅಂಕಗಳಿಂದಾಗಿ ತಾಂತ್ರಿಕ ಅರ್ಹತೆ ಪಡೆಯುವ ಅವಕಾಶದಿಂದಲೇ ವಂಚಿತರಾಗಿದ್ದಾರೆ. ಎಂ.ವೆಂಕಟಾಚಲಪತಿ ಅವರು ಬಿಸಿ ಡಾಂಬರು ಮಿಶ್ರಣ ಘಟಕ ನಿರ್ವಹಣೆ ಮಾಡುವುದಕ್ಕೆ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ಸ್ ಎಂಜಿನಿಯರಿಂಗ್ ಪದವೀಧರ ಸಿಬ್ಬಂದಿಯ ವಿವರ ನೀಡಿದ್ದರು. ಆದರೂ ಅವರಿಗೆ ಸೊನ್ನೆ ಅಂಕ ನೀಡಲಾಗಿದೆ.

ಧನಂಜಯ ಅವರ ಸಿಬ್ಬಂದಿಗೆ ವೃತ್ತಿಪರ ಸಿಬ್ಬಂದಿಯ ಅರ್ಹತೆ ವಿಭಾಗದಲ್ಲಿ ಪೂರ್ತಿ 15 ಅಂಕಗಳನ್ನು ಯಾವ ಆಧಾರದಲ್ಲಿ ನೀಡಲಾಗಿದೆ ಎಂಬುದನ್ನು ತಾಂತ್ರಿಕ ಪರಿಶೀಲನಾ ಸಮಿತಿಯ ಕಾರ್ಯಪಾಲಕ ಎಂಜಿನಿಯರ್ ವಿವರಣೆ ನೀಡಬೇಕು ಎಂದು ಅಧಿಕಾರಿಯೊಬ್ಬರು ಹೇಳಿದರು.

ಜೆಎಂಸಿ ಕನ್‌ಸ್ಟ್ರಕ್ಷನ್ಸ್ ಸಂಸ್ಥೆಯು 77 ಅಂಕ ಪಡೆದು ತಾಂತ್ರಿಕ ಪರಿಶೀಲನೆಯಲ್ಲಿ ಅರ್ಹತೆ ಗಳಿಸಿದೆ. ಆದರೂ ಈ ಸಂಸ್ಥೆ ಬೇರೊಂದು ವಿಭಾಗದ ರಸ್ತೆ ವಿಸ್ತರಣೆ ಕಾಮಗಾರಿಯ ಅನುಷ್ಠಾನದಲ್ಲಿ ವಿಳಂಬ ಮಾಡಿದೆ ಎಂದು ಉಲ್ಲೇಖಿಸಲಾಗಿದೆ. ತಾಂತ್ರಿಕ ಪರಿಶೀಲನೆಗೂ ಇದಕ್ಕೂ ಸಂಬಂಧವೇ ಇಲ್ಲ ಎಂದು ಅವರು ಹೇಳಿದರು.

‘ತಾಂತ್ರಿಕ ಪರಿಶೀಲನೆ ಏನಿದ್ದರೂ ಗೊತ್ತುಪಡಿಸಿದ ಮಾನದಂಡಗಳಿಗೆ ಸಂಬಂಧಿಸಿದ ಅರ್ಹತೆಗಳ ಪರಿಶೀಲನೆಗೆ ಸೀಮಿತ. ಬೇರೊಂದು ವಿಭಾಗದಲ್ಲಿ ಕಾಮಗಾರಿ ವಿಳಂಬವಾಗಿರುವ ಅಂಶವನ್ನು ತಾಂತ್ರಿಕ ಪರಿಶೀಲನೆ ಸಂದರ್ಭದಲ್ಲಿ ಪರಿಗಣಿಸಲು ಬರುವುದಿಲ್ಲ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ನಿರ್ವಹಣೆ ವೈಫಲ್ಯ– ರದ್ದಾಗಿದ್ದ ಗುತ್ತಿಗೆ

ಕಣ್ಣೂರಿನ ಜಲ್ಲಿ– ಬಿಸಿ ಡಾಂಬರು ಮಿಶ್ರಣ (ಹಾಟ್ ಮಿಕ್ಸ್) ಘಟಕದ ನಿರ್ವಹಣೆಯ ಗುತ್ತಿಗೆಯನ್ನು ಎಂ.ಎಸ್.ವೆಂಕಟೇಶ್ ಈ ಹಿಂದೆ ಪಡೆದುಕೊಂಡಿದ್ದರು. ಅವರಿಗೆ 2019ರ ಮಾ. 08ರಂದೇ ಕಾರ್ಯಾದೇಶ ನೀಡಿದ್ದರೂ ಕಾರ್ಯಾಚರಣೆ ಆರಂಭಿಸಿದ್ದು 2020ರ ಫೆ.06ರಂದು. ಕೊರೊನಾ ನಿಯಂತ್ರಣಕ್ಕೆ ಜಾರಿಗೊಳಿಸಲಾದ ಲಾಕ್‌ಡೌನ್‌ನಿಂದಾಗಿ ಘಟಕದ ಕಾರ್ಯಾಚರಣೆಯನ್ನು ಮತ್ತೆ ಸ್ಥಗಿತಗೊಳಿಸಲಾಗಿತ್ತು. 2020ರ ಜೂನ್ 3ರಂದು ಘಟಕವು ಪುನರಾರಂಭ ಮಾಡಿತ್ತು.

ಗುತ್ತಿಗೆ ಪಡೆಯಲು ವೆಂಕಟೇಶ್ ಅವರು ಟೆಂಡರ್‌ನಲ್ಲಿ ಎಸ್.ಆರ್. ದರಕ್ಕಿಂತಲೂ ಕಡಿಮೆ ಮೊತ್ತವನ್ನು ನಮೂದಿಸಿದ್ದರು. ಈ ಘಟಕದಲ್ಲಿ ತಯಾರಿಸಲಾಗುವ ಡಾಂಬರು ಮಿಶ್ರಣ ಅನೇಕ ಹಂತಗಳಲ್ಲಿ ಗುಣಮಟ್ಟದ ಪರೀಕ್ಷೆಗೆ ಒಳಪಡುತ್ತಿತ್ತು. ಹಾಗಾಗಿ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳಲು ಅವಕಾಶ ಸಿಕ್ಕಿರಲಿಲ್ಲ. ಗುತ್ತಿಗೆದಾರ ನಷ್ಟ ಅನುಭವಿಸಿದ್ದರು. ಬಿಬಿಎಂಪಿಯ ಅಗತ್ಯಕ್ಕೆ ತಕ್ಕಂತೆ ಜಲ್ಲಿ–ಡಾಂಬರು ಮಿಶ್ರಣ ಪೂರೈಸಲು ಅವರಿಗೆ ಸಾಧ್ಯವಾಗಿರಲಿಲ್ಲ. ಇನ್ನೊಂದೆಡೆ, ರಸ್ತೆಗುಂಡಿಗಳನ್ನು ಸಕಾಲದಲ್ಲಿ ಮುಚ್ಚದ ಕಾರಣಕ್ಕೆ ಬಿಬಿಎಂಪಿಯನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ಈ ಕಾರಣಕ್ಕೆ ಈ ಘಟಕದ ಗುತ್ತಿಗೆ ಗುತ್ತಿಗೆಯನ್ನು ಬಿಬಿಎಂಪಿ ರದ್ದುಪಡಿಸಿ, ಹೊಸದಾಗಿ ಟೆಂಡರ್ ಕರೆದಿತ್ತು.

ಅಂಕಿ ಅಂಶ

4.5 ಎಕರೆ
ಕಣ್ಣೂರಿನ ಡಾಂಬರು ಮಿಶ್ರಣ ಘಟಕದ ವಿಸ್ತೀರ್ಣ

₹7.5 ಕೋಟಿ
ಘಟಕದ ನಿರ್ಮಾಣಕ್ಕೆ ತಗುಲಿದ ವೆಚ್ಚ

120 ಟನ್
ಘಟಕದಲ್ಲಿ ಪ್ರತಿ ಗಂಟೆಗೆ ತಯಾರಾಗುವ ಡಾಂಬರು ಮಿಶ್ರಣ

ಸುದ್ದಿ 2 ನಿಮಿಷ

ಚಾಮರಾಜಪೇಟೆಯಿಂದ ಸ್ಪರ್ಧೆ ತೀರ್ಮಾನಿಸಿಲ್ಲ– ಸಿದ್ದರಾಮಯ್ಯ

ಬೆಂಗಳೂರು: ‘ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಚಾಮರಾಜಪೇಟೆ ಕ್ಷೇತ್ರದಿಂದ ಸ್ಪರ್ಧಿಸುವ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಸದ್ಯ ನಾನು ಬಾದಾಮಿ ಕ್ಷೇತ್ರದ ಶಾಸಕ.



ಚುನಾವಣೆಗೆ ಇನ್ನೂ ಎರಡು ವರ್ಷ ಇದೆ. ಚಾಮರಾಜಪೇಟೆಯಿಂದ ಸ್ಪರ್ಧಿಸಲಿದ್ದೇನೆ ಎಂದು ನಾನೂ ಎಲ್ಲಿಯೂ ಹೇಳಿಲ್ಲ. ಆದರೆ, ಇಲ್ಲಿಂದ (ಚಾಮರಾಜಪೇಟೆ) ಸ್ಪರ್ಧಿಸುವಂತೆ ಕ್ಷೇತ್ರದ ಶಾಸಕ ಜಮೀರ್ ಅಹ್ಮದ್ ಖಾನ್ ಹೇಳುತ್ತಿದ್ದಾರೆ’ ಎಂದರು.

ಚಾಮರಾಜಪೇಟೆಯಲ್ಲಿ ಶಾಸಕರಾದ ಜಮೀರ್ ಅಹ್ಮದ್ ಖಾನ್ ಅವರ ನೇತೃತ್ವದಲ್ಲಿ ಆಟೋ ಚಾಲಕರಿಗೆ ಬುಧವಾರ ಪರಿಹಾರ ವಿತರಿಸುವ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಭಾಗವಹಿಸಿದರು. ಜಮೀರ್ ಅವರು ವೈಯಕ್ತಿಕವಾಗಿ ತಲಾ ₹ 3 ಸಾವಿರ ಪರಿಹಾರ ಮತ್ತು ದಿನಸಿ ಕಿಟ್ ವಿತರಿಸಿದರು. ಶಾಸಕರಾದ ಬೈರತಿ ಸುರೇಶ್, ಪ್ರಕಾಶ್ ರಾಠೋಡ್ ಇದ್ದರು.

ಮೂವರ ಬಂಧನ: 8 ಬೈಕ್ ಜಪ್ತಿ

ಬೆಂಗಳೂರು: ನಗರದ ವಿವಿಧ ಭಾಗಗಳಲ್ಲಿ ಮೊಬೈಲ್ ಹಾಗೂ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ ಮೂವರು ಆರೋಪಿಗಳನ್ನು ಉಪ್ಪಾರಪೇಟೆ ಪೊಲೀಸರು ಬಂಧಿಸಿದ್ದಾರೆ.

ಶಿವಾಜಿನಗರದ ಸಯ್ಯದ್ ನಾಜಿಮ್ (23), ಇಮ್ರಾನ್ ಶರೀಫ್ (21) ಹಾಗೂ ಸಕ್ಲೇನ್ ಮಹಮ್ಮದ್ (21) ಬಂಧಿತರು.

ಮೇ 20ರ ಬೆಳಿಗ್ಗೆ ತುಳಸಿ ಪಾರ್ಕ್‌ನ ಮೆಟ್ರೊ ನಿಲ್ದಾಣದ ಹತ್ತಿರ ಸಾರ್ವಜನಿಕರೊಬ್ಬರು ಬಾಡಿಗೆ ಬೈಕ್ ಪಡೆಯಲು ತಮ್ಮ ಮೊಬೈಲ್ ಮೂಲಕ ಸ್ಕ್ಯಾನ್ ಮಾಡುತ್ತಿದ್ದರು. ಈ ವೇಳೆ ಸ್ಥಳಕ್ಕೆ ಬಂದಿದ್ದ ಆರೋಪಿಗಳಿಬ್ಬರು ಮಾತನಾಡಿಸುವ ಸೋಗಿನಲ್ಲಿ ಚಾಕು ತೋರಿಸಿ ಬೆದರಿಸಿದ್ದರು. ಬಳಿಕ ಮೊಬೈಲ್ ಕದ್ದು ಪರಾರಿಯಾಗಿದ್ದರು. ಈ ಸಂಬಂಧ ಠಾಣೆಯಲ್ಲಿ ದೂರು ದಾಖಲಾಗಿತ್ತು.

‘ಆರೋಪಿಗಳು ಸಿಕ್ಕಿಬಿದ್ದಿದ್ದು, ಇವರು ನೀಡಿದ ಮಾಹಿತಿ ಮೇರೆಗೆ ಎಂಟು ದ್ವಿಚಕ್ರ ವಾಹನಗಳು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ. ಆರೋಪಿಗಳು ಡಿ.ಜೆ.ಹಳ್ಳಿ, ಬೈಯಪ್ಪನಹಳ್ಳಿ, ಕೆ.ಆರ್.ಪುರ. ಬಂಡೇಪಾಳ್ಯ, ಶೇಷಾದ್ರಿಪುರ, ಕಾಟನ್‌ಪೇಟೆ, ವಿಜಯನಗರದಲ್ಲಿ ದ್ವಿಚಕ್ರ ವಾಹನಗಳನ್ನು ಕದ್ದಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ದೊರೆಸ್ವಾಮಿಗೆ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬುಧವಾರ ನಿಧನರಾದ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರಿಗೆ ವಿವಿಧ ಸಂಘ–ಸಂಸ್ಥೆಗಳು ಶ್ರದ್ಧಾಂಜಲಿ ಸಲ್ಲಿಸಿದವು.

‘ಕಳೆದ ಬಾರಿ ಲಾಕ್‌ಡೌನ್ ನಡುವೆಯೂ ದೊರೆಸ್ವಾಮಿ ಅವರು ನಮ್ಮ ಹೋರಾಟಕ್ಕೆ ಕೈ ಜೋಡಿಸಿದ್ದರು’ ಎಂದು ಸಿಐಟಿಯು ಕಾರ್ಯದರ್ಶಿ ಕೆ. ಮಹಾಂತೇಶ್ ಸ್ಮರಿಸಿದರು.

‘ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಬಳಿಕ ನಡೆಸಲಾದ ವಿದ್ಯಾರ್ಥಿಗಳ ಹೋರಾಟ, ರೈತ ಕಾರ್ಮಿಕ ಚಳವಳಿಗಳು, ಮೈಸೂರು ಚಲೋ ಹೋರಾಟ, ಗೋವಾ ವಿಮೋಚನಾ ಚಳವಳಿ ಹಾಗೂ ನರಗುಂದ ರೈತ ಚಳವಳಿ ಸೇರಿದಂತೆ ಹಲವು ಹೋರಾಟಗಳಲ್ಲಿ ಪಾಲ್ಗೊಂಡಿದ್ದರು’ ಎಂದು ಹೇಳಿದರು.

‘ಆಳುವವರು ತಪ್ಪು ಮಾಡಿದಾಗ ಅದು ಯಾರೇ ಆಗಿರಲಿ ಟೀಕಿಸಲು ಹಿಂಜರಿಯುತ್ತಿರಲಿಲ್ಲ. ಅಂತಹ ಮೇರು ವ್ಯಕ್ತಿತ್ವ ದೂರವಾಗಿದ್ದು ರಾಜ್ಯದ ಜನ ಚಳವಳಿಗೆ ಆದ ಅಪಾರ ನಷ್ಟ’ ಎಂದರು.

ಎಐಡಿಎಸ್ಒ ನಮನ: ‘ಸ್ವಾತಂತ್ರ್ಯ ಸಂಗ್ರಾಮ ಮತ್ತು ಸ್ವಾತಂತ್ರ್ಯಾನಂತರ ಎಲ್ಲ ರೀತಿಯ ಅನ್ಯಾಯಗಳ ವಿರುದ್ಧ ದೊರೆಸ್ವಾಮಿಯವರು ಧ್ವನಿ ಎತ್ತಿದ್ದರು’ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್ಒ) ಸ್ಮರಿಸಿದೆ.

‘ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ಮತ್ತು ಕೋಮುವಾದಿಕರಣದ ವಿರುದ್ಧವೂ ಅವರು ಹೋರಾಡಿದ್ದರು’ ಎಂದು ಎಐಡಿಎಸ್ಒದ ಅಧ್ಯಕ್ಷೆ ಅಶ್ವಿನಿ ಕೆ.ಎಸ್. ನೆನಪು ಮಾಡಿಕೊಂಡಿದ್ದಾರೆ.

‘ಸಿದ್ದರಾಮಯ್ಯ ಸ್ಥಾನಕ್ಕೇ ಕಂಟಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಯಡಿಯೂರಪ್ಪ ಬದಲಾವಣೆ ಖಂಡಿತಾ ಇಲ್ಲ. ಆದರೆ, ಸಿದ್ದರಾಮಯ್ಯ ಅವರನ್ನು ಪ್ರತಿಪಕ್ಷ ಸ್ಥಾನದಿಂದ ಕಿತ್ತೊಗೆಯಲು ಕಾಂಗ್ರೆಸ್ ನಾಯಕರೇ ಪಣ ತೊಟ್ಟಿದ್ದಾರೆ’ ಎಂದು ಬಿಜೆಪಿ ಶಾಸಕರು ಹರಿಹಾಯ್ದಿದ್ದಾರೆ.

‘ಬಿಜೆಪಿಯವರೇ ಮುಖ್ಯಮಂತ್ರಿ ಬದಲಾವಣೆಗೆ ಪ್ರಯತ್ನಿಸುತ್ತಿದ್ದಾರೆ’ ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಾಸಕರು, ಅಧಿಕಾರ ಗಗನ ಕುಸುಮವಾಗಿರುವಾಗ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುವ ತಿರುಕನ ಕನಸು ಕಾಣುತ್ತಿದ್ದಾರೆ ಎಂದು ಲೇವಡಿ ಮಾಡಿದ್ದಾರೆ.

ಕನಸು ಕಾಣುತ್ತಿರುವ ಸಿದ್ದರಾಮಯ್ಯ ಅವರು 60 ರಿಂದ 70 ಪಂಚೆಗಳನ್ನು ಖರೀದಿಸಿರಬಹುದು. ಯಡಿಯೂರಪ್ಪ ಅವಧಿ ಮುಗಿಸಲಿದ್ದು, ಅವರ ಬದಲಾವಣೆ ಪ್ರಶ್ನೆಯೇ ಇಲ್ಲ. ಮೊದಲು ಸಿದ್ದರಾಮಯ್ಯ ಪ್ರತಿಪಕ್ಷ ಸ್ಥಾನವನ್ನು ಉಳಿಸಿಕೊಳ್ಳಲಿ ಎಂದು ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಸುದ್ದಿಗಾರರಿಗೆ ಹೇಳಿದರು.

ಕೆಲವರು ದೆಹಲಿಗೆ ಹೋದ ತಕ್ಷಣ ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ಅರ್ಥೈಸಿಕೊಳ್ಳುವ ಅಗತ್ಯವಿಲ್ಲ. ಕೆಲವರು ಇಂತಹ ಗಾಳಿ ಸುದ್ದಿಗಳನ್ನು ಹರಡಲೆಂದೇ ಇರುತ್ತಾರೆ. ಇಂತಹವರಿಗೆ ಭ್ರಮನಿರಸನವಾಗಲಿದೆ ಎಂದು ತಿಳಿಸಿದರು.

‘ಯಡಿಯೂರಪ್ಪ ಬದಲಾವಣೆ ಬಗ್ಗೆ ಕೆಲವು ಶಾಸಕರು ಪ್ರಯತ್ನ ಮಾಡುತ್ತಿದ್ದಾರೆಂಬುದು ಕೇವಲ ಊಹಾಪೋಹ. ಹಾಗೊಂದು ವೇಳೆ ಪ್ರಯತ್ನ ನಡೆಸಿದ್ದರೆ ಅದು ಕೈಗೂಡುವುದಿಲ್ಲ’ ಎಂದು ಶಾಸಕ ಮಾಡಾಳು ವಿರೂಪಾಕ್ಷಪ್ಪ ತಿರುಗೇಟು ನೀಡಿದರು.

‘ಯಾರೋ ಕೆಲವರು ದೆಹಲಿಗೆ ಹೋದ ತಕ್ಷಣಕ್ಕೆ ಯಡಿಯೂರಪ್ಪ ಬದಲಾವಣೆ ಸಾಧ್ಯವಿಲ್ಲ. ಪರಿಸ್ಥಿತಿ ಹೀಗಿರುವಾಗ ನಾವು ಅವರ ಪರ ಸಹಿ ಸಂಗ್ರಹ ಮಾಡುವ ಅಗತ್ಯವೂ ಇಲ್ಲ’ ಎಂದು ಅವರು ಹೇಳಿದರು.

ಶಾಸಕ ನಿರಂಜನ್ ಕುಮಾರ್ ಮತ್ತು ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿ ಶಂಕರ್ ಗೌಡ ಪಾಟೀಲ ಇದಕ್ಕೆ ಧ್ವನಿಗೂಡಿಸಿದರು.

ಬೆಂಗಳೂರು ವಿ.ವಿ: ಸಿಬ್ಬಂದಿಗೆ ಮನೆಯಿಂದಲೇ ಕೆಲಸ

ಬೆಂಗಳೂರು: ‘ಲಾಕ್‌ಡೌನ್ ಘೋಷಿಸಿರುವ ಕಾರಣ ಬೆಂಗಳೂರು ವಿ.ವಿ ಬೋಧಕೇತರ ಸಿಬ್ಬಂದಿ ಜೂನ್ 5ರ ವರೆಗೆ ಮನೆಯಿಂದಲೇ ಕೆಲಸ ಮಾಡಲು ಅನುಮತಿ ನೀಡಲಾಗಿದೆ’ ಎಂದು ಕುಲಸಚಿವರ ಪ್ರಕಟಣೆ ತಿಳಿಸಿದೆ.

‘ಕೋವಿಡ್ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ವೇಳೆ ಸಿಬ್ಬಂದಿ ಕೆಲ ಷರತ್ತುಗಳನ್ನು ಪಾಲಿಸಬೇಕು. ಕುಲಪತಿ, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ) ಮತ್ತು ವಿತ್ತಾಧಿಕಾರಿಗಳ ಆಪ್ತ ಕಾರ್ಯಾಲಯ, ಎಂಜಿನಿಯರಿಂಗ್ ವಿಭಾಗ, ಆರೋಗ್ಯ ಕೇಂದ್ರ ಹಾಗೂ ಸಾರಿಗೆ ವಿಭಾಗಗಳನ್ನು ಬಿಟ್ಟು ಉಳಿದೆಲ್ಲಾ ಸಿಬ್ಬಂದಿ ಮನೆಯಿಂದಲೇ ಕರ್ತವ್ಯ ನಿರ್ವಹಿಸಬೇಕು’ ಎಂದು ತಿಳಿಸಿದೆ.

ರೆಮ್‌ಡಿಸಿವಿರ್ ದಂಧೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೋವಿಡ್ ಸೋಂಕಿತರಿಗೆ ನೀಡುವ ರೆಮ್‌ಡಿಸಿವಿರ್ ಚುಚ್ಚುಮದ್ದಿನ ವಯಲ್ಸ್‌ಗಳನ್ನು ಕೇರಳದಿಂದ ಕಡಿಮೆ ಬೆಲೆಗೆ ಖರೀದಿಸಿ, ಬೆಂಗಳೂರಿನಲ್ಲಿ ಹೆಚ್ಚಿನ ಬೆಲೆಗೆ ಮಾರುತ್ತಿದ್ದ ಮೂವರು ಆರೋಪಿಗಳನ್ನು ಬಸವೇಶ್ವರ ನಗರ ಪೊಲೀಸರು ಬಂಧಿಸಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಸವಿದ್ದ ಸಂಜೀವ್ ಕುಮಾರ್ (32), ಪ್ರತೀಕ್ (37) ಹಾಗೂ ಅಭಿಜಿತ್ (20) ಬಂಧಿತರು.

ಆರೋಪಿಗಳು ರೆಮ್‌ಡಿಸಿವಿರ್ ಲಸಿಕೆಯ ವಯಲ್ಸ್‌ಗಳನ್ನು ಕೇರಳದಿಂದ ತರಿಸಿಕೊಳ್ಳುತ್ತಿದ್ದರು. ನಗರದಲ್ಲಿ ಅಗತ್ಯವಿದ್ದರನ್ನು ಸಂಪರ್ಕಿಸಿ ಒಂದು ವಯಲ್ಸ್ ಚುಚ್ಚುಮದ್ದನ್ನು ತಲಾ ₹10 ಸಾವಿರದಂತೆ ಮಾರಾಟ ಮಾಡುತ್ತಿದ್ದರು. ಆರೋಪಿಗಳಿಂದ 25 ವಯಲ್ಸ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮೊಬೈಲ್ ಮೂಲಕ ದಂಧೆ: ‘ಆರೋಪಿಗಳು ಅಕ್ರಮವಾಗಿ ರೆಮ್‌ಡಿಸಿವಿರ್ ಮಾರಾಟ ಮಾಡುತ್ತಿದ್ದ ಬಗ್ಗೆ ಪೊಲೀಸರಿಗೆ ಸೋಮವಾರ ಖಚಿತ ಮಾಹಿತಿ ಬಂದಿತ್ತು. ಇದಕ್ಕಾಗಿ ಪೊಲೀಸ್ ಸಿಬ್ಬಂದಿಯೊಬ್ಬರು ಔಷಧ ಖರೀದಿಸುವ ನೆಪದಲ್ಲಿ ಆರೋಪಿ ಸಂಜೀವ್ ಕುಮಾರ್‌ನನ್ನು ದೂರವಾಣಿ ಮೂಲಕ ಸಂಪರ್ಕಿಸಿದ್ದರು’.



ಪ್ರತೀಕ್



ಅಭಿಜಿತ್



ಸಂಜೀವ್

‘ಈ ವೇಳೆ ಪ್ರತೀಕ್‌ನೊಂದಿಗೆ ಮಾತನಾಡುವಂತೆ ಸಂಜೀವ್ ಮೊಬೈಲ್ ನಂಬರ್ ನೀಡಿದ್ದ. ಪ್ರತೀಕ್ ಒಂದು ವಯಲ್ಸ್‌ಗೆ ₹10 ಸಾವಿರ ಎಂದು ದರ ನಿಗದಿ ಪಡಿಸಿದ್ದ. ಮತ್ತೊಬ್ಬ ವ್ಯಕ್ತಿಯಿಂದ ಚುಚ್ಚುಮದ್ದು ತಲುಪಿಸುವುದಾಗಿಯೂ ತಿಳಿಸಿದ್ದ. ಈ ಮಾಹಿತಿ ಆಧರಿಸಿ ಅಧಿಕಾರಿಗಳು ದಾಳಿ ನಡೆಸಿದಾಗ ಮೂವರೂ ಸಿಕ್ಕಿಬಿದ್ದರು’ ಎಂದು ಪೊಲೀಸರು ವಿವರಿಸಿದರು.



ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಸಂಚಾರ ಪೊಲೀಸರಿಗೆ ಉಡುಪು ವಿತರಿಸಿದರು. ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್.ರವಿಕಾಂತೇಗೌಡ ಹಾಗೂ ಅಧಿಕಾರಿಗಳು ಇದ್ದಾರೆ –ಪ್ರಜಾವಾಣಿ ಚಿತ್ರ

ಗೃಹ ಸಚಿವ ಬಸವರಾಜ ಬೊಮ್ಮಾಯಿ

‘ಸಂಚಾರ ಪೊಲೀಸರಿಗೆ ಶೀಘ್ರವೇ ಮಳೆಗಾಲದ ಉಡುಪು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಳೆ, ಚಳಿ, ಗಾಳಿಯನ್ನು ಲೆಕ್ಕಿಸದೆ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯದ ಎಲ್ಲ ಸಂಚಾರ ಪೊಲೀಸರಿಗೆ ಸರ್ಕಾರದ ವತಿಯಿಂದ ಶೀಘ್ರವೇ ಮಳೆಗಾಲದ ಉಡುಪು (ರೈನ್ ಕೋಟ್) ವಿತರಿಸಲಾಗುವುದು’ ಎಂದು ಗೃಹಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.


ಪುರಭವನದ ಎದುರು ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪೊಲೀಸ್ ಸಿಬ್ಬಂದಿಗೆ ರೈನ್‌ಕೋಟ್, ಮಾಸ್ಕ್, ಮುಖಗವಸು ವಿತರಿಸಿ ಅವರು ಮಾತನಾಡಿದರು.

‘ಮೆಟ್ರೊ ರೈಲು ಪರೀಕ್ಷಾರ್ಥ ಸಂಚಾರ ಮುಗಿಸಿ ಮುಖ್ಯಮಂತ್ರಿಗಳ ಜೊತೆ ಬರುತ್ತಿದ್ದಾಗ ಜೋರು ಮಳೆ ಸುರಿಯುತ್ತಿತ್ತು. ಈ ವೇಳೆ ಕಾನ್‌ಸ್ಟೆಬಲ್‌ವೊಬ್ಬರು ಮಳೆಯಲ್ಲೇ ಕರ್ತವ್ಯ ನಿರ್ವಹಿಸುತ್ತಿದ್ದರು. ಇದನ್ನು ಕಂಡ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರೈನ್ ಕೋಟ್ ವಿತರಿಸುವಂತೆ ನನಗೆ ಸೂಚಿಸಿದರು. ಅವರ ಸೂಚನೆ ಮೇರೆಗೆ ಎಸ್‌ಡಿಆರ್‌ಎಫ್ ನಿಧಿಯಡಿ ರಾಜ್ಯದ ಎಲ್ಲ ಸಂಚಾರ ಪೊಲೀಸರಿಗೆ ರೈನ್ ಕೋಟ್ ಖರೀದಿಸಿ ವಿತರಿಸಲಾಗುವುದು’ ಎಂದರು.

ಎಂಟು ತಿಂಗಳಲ್ಲಿ ಕಾರಿಡಾರ್‌ಗಳು ಪೂರ್ಣ: ‘ನಗರದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು 12 ಹೈಸ್ಪೀಡ್ ಕಾರಿಡಾರ್‌ಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಎಂಟು ತಿಂಗಳಲ್ಲಿ ಅವು ಪೂರ್ಣಗೊಳ್ಳಲಿವೆ. ರಾಷ್ಟ್ರೀಯ ಹೆದ್ದಾರಿಗಳ ಮೂಲಕ ನಗರ ಪ್ರವೇಶಿಸುವ ವಾಹನಗಳಿಂದ ದಟ್ಟಣೆ ಹೆಚ್ಚು. ಈ ಕಾರಿಡಾರ್‌ಗಳಿಂದ ನಗರ ದಟ್ಟಣೆ ಕ್ರಮೇಣ ತಗ್ಗಲಿದೆ’ ಎಂದರು.

ನಿಧನ ವಾರ್ತೆ


ಸೂತ್ರದ ಬೊಂಬೆ ಕಲಾವಿದ ಬಸವಲಿಂಗಪ್ಪ



ಹರಪನಹಳ್ಳಿ: ಅಳಿವಿನ ಅಂಚಿನಲ್ಲಿರುವ ಸೂತ್ರದ ಬೊಂಬೆ ಆಟದ ಜೀವಂತಿಕೆ ಕಾಪಾಡುತ್ತಿದ್ದ ತಾಲ್ಲೂಕಿನ ಹಲುವಾಗಲು ಗ್ರಾಮದ ಹಿರಿಯ ಕಲಾವಿದ ಅಧಿಕಾರ ಬಸವಲಿಂಗಪ್ಪ (82) ಹೃದಯಾಘಾತದಿಂದ ಬುಧವಾರ ನಿಧನರಾದರು.

ಅವರಿಗೆ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ವಕೀಲ ಮೋಹನ್ ರಾವ್



ಬೆಂಗಳೂರು: ವಿದ್ಯಾರಣ್ಯಪುರದ ಚಾಮುಂಡೇಶ್ವರಿ ಲೇಔಟ್ ನಿವಾಸಿ, ವಕೀಲ ಮೋಹನ್ ರಾವ್ ಎಂ.ಎಸ್. (64) ಅವರು ಇತ್ತೀಚೆಗೆ ನಿಧನರಾದರು.

ಅವರಿಗೆ ಪತ್ನಿ ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ.

ಸುಜಾತಾ



ನೆಲಮಂಗಲ: ತಾಲ್ಲೂಕಿನ ಬೂದಿಹಾಳ್ ಗ್ರಾಮದ ಸುಜಾತಾ (53) ಮಂಗಳವಾರ ರಾತ್ರಿ ಅನಾರೋಗ್ಯದಿಂದ ನಿಧನರಾದರು. ಅವರಿಗೆ ಅತ್ತೆ, ಪತಿ, ಪುತ್ರ, ಪುತ್ರಿ ಇದ್ದಾರೆ.

ಗ್ರಾಹಕರ ಮನೆಗೆ ಪೂರೈಕೆಯಾಗಲಿದೆ ಹಣ್ಣು–ತರಕಾರಿ

ಹಾಪ್‌ಕಾಮ್ಸ್ ಆನ್‌ಲೈನ್ ಸೇವೆ ಆರಂಭ

● ಮನೋಹರ್ ಎಂ.

ಬೆಂಗಳೂರು: ರೈತರು ಬೆಳೆದ ಹಣ್ಣು–ತರಕಾರಿಗಳನ್ನು ಮಳಿಗೆಗಳ ಮೂಲಕ ಮಾರುತ್ತಿರುವ 'ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘ'ವು (ಹಾಪ್‌ಕಾಮ್ಸ್) ಈಗ ಆನ್‌ಲೈನ್ ಮೂಲಕ ಮನೆ ಬಾಗಿಲಿಗೆ ಉಚಿತವಾಗಿ ಸೇವೆ ನೀಡಲು ಆರಂಭಿಸಿದೆ.

ಹಾಪ್‌ಕಾಮ್ಸ್ ಹೊರತಂದಿರುವ ನೂತನ ಆನ್‌ಲೈನ್ ಸ್ಟೋರ್ ತಾಂತ್ರಿಕತೆಯ ಮೂಲಕ ಗ್ರಾಹಕರು ಮನೆಯಿಂದಲೇ ತಮಗೆ ಬೇಕಾದ ಉತ್ಪನ್ನಗಳನ್ನು ಖರೀದಿಸಬಹುದು. ಈ ಸೇವೆಯನ್ನು ಸದ್ಯಕ್ಕೆ ಕೋರಮಂಗಲದ ನ್ಯಾಷನಲ್ ಗೇಮ್ಸ್ ವಿಲೇಜ್ (ಎನ್‌ಜಿವಿ) ಸಮೀಪದ ಮಳಿಗೆಯಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿದ್ದು, ಜನರ ಸ್ಪಂದನೆ ನೋಡಿಕೊಂಡು ಬೆಂಗಳೂರಿನಾದ್ಯಂತ ವಿಸ್ತರಿಸುವ ಉದ್ದೇಶ ಹೊಂದಿದೆ.

'ಹಣ್ಣು–ತರಕಾರಿ ಖರೀದಿಗೆ ಬೇಡಿಕೆ ಇದ್ದರೂ ಕೊರೊನಾದಿಂದಾಗಿ ಗ್ರಾಹಕರು ಮಳಿಗೆಗಳತ್ತ ಬರಲು ಹಿಂಜರಿಯುತ್ತಿದ್ದಾರೆ. ಹಲವು ಗ್ರಾಹಕರು ಮೊದಲಿನಿಂದಲೂ ಹಾಪ್‌ಕಾಮ್ಸ್‌ನಿಂದ ಆನ್‌ಲೈನ್ ಸೇವೆ ಬಯಸಿದ್ದರು. ಆದರೆ, ಕಾರಣಾಂತರಗಳಿಂದ ಅದು ಸಾಧ್ಯವಾಗಿರಲಿಲ್ಲ. ಈಗ ತಾಂತ್ರಿಕ ಪಾಲುದಾರಿಕೆಯೊಂದಿಗೆ ಉತ್ಪನ್ನಗಳ ಮಾರಾಟಕ್ಕೆ ಆನ್‌ಲೈನ್ ವೇದಿಕೆ ಕಲ್ಪಿಸಲಾಗಿದೆ' ಎಂದು ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋರಮಂಗಲದ ಮಳಿಗೆಯಲ್ಲಿ ಮಾರಾಟ ಇಳಿಮುಖವಾಗಿತ್ತು. ಆನ್‌ಲೈನ್ ಸೇವೆ ಆರಂಭವಾದ ನಂತರ ಗ್ರಾಹಕರಿಂದ ಉತ್ತಮ ಸ್ಪಂದನೆ ಸಿಕ್ಕಿದ್ದು, ಎರಡು ವಾರಗಳಲ್ಲಿ ₹17 ಸಾವಿರದವರೆಗೆ ವಹಿವಾಟು ನಡೆದಿದೆ' ಎಂದು ಮಾಹಿತಿ ನೀಡಿದರು.

'ಹಾಪ್‌ಕಾಮ್ಸ್ ಸಿಬ್ಬಂದಿಗೆ ಇದು ಆ್ಯಪ್ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಗ್ರಾಹಕರಿಗೆ ಲಿಂಕ್ ಮೂಲಕ ಆನ್‌ಲೈನ್ ಸ್ಟೋರ್ ಲಭ್ಯವಾಗಲಿದೆ. ಅದಕ್ಕೆ ಪ್ರವೇಶಿಸಿದ ಕೂಡಲೇ ಸಂಸ್ಥೆಯ ಎಲ್ಲ ಉತ್ಪನ್ನಗಳು ದರ ಸಹಿತ ಮಾಹಿತಿ ಸಿಗಲಿದೆ. ಗ್ರಾಹಕರು ತಮಗೆ ಬೇಕಾದ ಉತ್ಪನ್ನಗಳ ಬೇಡಿಕೆಯನ್ನು ಸಂಜೆಯೊಳಗೆ ಸಲ್ಲಿಸಿದರೆ, ಮರುದಿನ ಬೆಳಿಗ್ಗೆ ಸಿಬ್ಬಂದಿ ಉತ್ಪನ್ನಗಳನ್ನು ಮನೆ ಬಾಗಿಲಿಗೆ ತಲುಪಿಸಲಿದ್ದಾರೆ' ಎಂದು ವಿವರಿಸಿದರು.



ಕೋರಮಂಗಲದಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಹಣ್ಣು–ತರಕಾರಿ ವಿತರಿಸುತ್ತಿರುವ ಹಾಪ್‌ಕಾಮ್ಸ್ ಸಿಬ್ಬಂದಿ.

ಪಾಲುದಾರಿಕೆಗೆ ಅವಕಾಶ

'ಹಾಪ್‌ಕಾಮ್ಸ್‌ನ ಆನ್‌ಲೈನ್ ಸೇವೆಯನ್ನು ನಗರದಾದ್ಯಂತ ಇರುವ ಎಲ್ಲ ಮಳಿಗೆಗಳಿಗೆ ವಿಸ್ತರಿಸಲು ಚಿಂತನೆ ನಡೆಸಲಾಗಿದೆ. ಹಾಪ್‌ಕಾಮ್ಸ್ ಸಿಬ್ಬಂದಿ ಜೊತೆಗೆ ಉತ್ಪನ್ನಗಳನ್ನು ಪೂರೈಸಲು ಡೆಲಿವರಿ ಪಾಲುದಾರ ಸಂಸ್ಥೆಗಳು ಮುಂದೆ ಬಂದರೆ, ಅವರಿಗೂ ಅವಕಾಶ ನೀಡಲಾಗುವುದು' ಎಂದು ಹಾಪ್‌ಕಾಮ್ಸ್ (ಬೆಂಗಳೂರು) ಅಧ್ಯಕ್ಷ ಎನ್.ದೇವರಾಜು ತಿಳಿಸಿದರು.



ಆನ್‌ಲೈನ್ ಸೇವೆಯಿಂದ ಗ್ರಾಹಕರ ಬೇಡಿಕೆಯಷ್ಟೇ ಉತ್ಪನ್ನಗಳು ರೈತರಿಂದ ತಾಜಾ ಸ್ಥಿತಿಯಲ್ಲಿ ಮನೆ ಬಾಗಿಲಿಗೆ ಬರಲಿದೆ.

–ಉಮೇಶ್ ಎಸ್.ಮಿರ್ಜಿ, ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ

ರೈತರ ಪಾಲಿಗೆ ಅಂಟಾದ ಹಲಸು

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಲಾಕ್‌ಡೌನ್ ಪರಿಣಾಮ ಹಲಸಿನ ಹಣ್ಣಿನ ವ್ಯಾಪಾರಕ್ಕೂ ಪೆಟ್ಟು ಬಿದ್ದಿದೆ.

ಸೋಂಪುರ ಹೋಬಳಿಯ ಉದ್ದಕ್ಕೂ ಸಾವಿರಾರು ಹಲಸಿನ ಮರಳಿದ್ದು, ರೈತರಿಗೆ ಮುಂಗಾರು ಆರಂಭಕ್ಕೆ ಒಂದಷ್ಟು ಆದಾಯ ತಂದು ಕೊಡುತ್ತಿದ್ದವು. ಆದರೆ, ಕಳೆದ ಬಾರಿ ಹಾಗೂ ಈ ಬಾರಿ ಹಣ್ಣು ಬರುವ ವೇಳೆಗೆ ಲಾಕ್‌ಡೌನ್ ಆಗಿದ್ದು ಆ ಆದಾಯಕ್ಕೂ ಕುತ್ತು ತಂದಿದೆ.

'ಮನೆ ಬಾಗಿಲಿಗೆ ಬಂದು ಹಲಸಿನ ಕಾಯಿ ಕೊಳ್ಳುತ್ತಿದ್ದ ವ್ಯಾಪಾರಿಗಳು ಯಾರೊಬ್ಬರು ಮುಂದೆ ಬರುತ್ತಿಲ್ಲ. ಮರದಲ್ಲೇ ಹಣ್ಣಾಗಿ ಕೊಳೆಯುತ್ತಿವೆ. ಹಲಸಿನ ಮಾರಾಟದಿಂದ ಬರುತ್ತಿದ್ದ ಅಲ್ಪ ಆದಾಯವೂ ಇಲ್ಲದಂತಾಗಿದೆ' ಎಂದು ಅಳಲು ತೋಡಿಕೊಂಡರು ರೈತ ಗಂಗಣ್ಣ.

ರಾಸಾಯನಿಕ ಬಾಧೆಗೆ ಒಳಗಾಗದ, ಔಷಧಗಳ ಸಿಂಪಡಣೆಯಾಗದ ಹಲಸು ಆರೋಗ್ಯಕ್ಕೆ ಹಿತಕರವೆನ್ನುವ ಗುಟ್ಟು ಗೊತ್ತಿರುವುದರಿಂದ ಹಳ್ಳಿಗಳಲ್ಲಿ ಬೆಳೆಯುವ ಹಲಸಿಗೆ ನಗರಗಳಲ್ಲಿ ಬಹುದೊಡ್ಡ ಮಾರುಕಟ್ಟೆಯಿದ್ದರೂ, ಲಾಕ್ ಡೌನ್ ಆಗಿದ್ದೇ ತಡ ಹಲಸು ಕೊಳ್ಳಲು ವ್ಯಾಪಾರಿಗಳು ಹಳ್ಳಿಗಳತ್ತ ಮುಖ ಮಾಡುತ್ತಿಲ್ಲ ಎಂದು ಅವರು ಹೇಳಿದರು.

ಏಪ್ರಿಲ್ ತಿಂಗಳ ಮಧ್ಯದಿಂದ ಹಿಡಿದು ಜುಲೈ ತಿಂಗಳ ಕೊನೆಯವರೆಗೆ ದಾಬಸ್ ಪೇಟೆಗೆ ಹೊಂದಿಕೊಂಡಂತೆ ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಒಂದು ಕಿಲೋ ಮೀಟರ್ ಉದ್ದಕ್ಕೂ ಹಾಗೂ ಪಟ್ಟಣದಲ್ಲಿ ಹಲಸಿನ ಹಣ್ಣುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರುದೂರುದೂರುಗಳಿಂದ ಬರುತ್ತಿದ್ದ ಪ್ರಯಾಣಿಕರು ಕೊಂಡೊಯ್ಯುತ್ತಿದ್ದರು. ಈಗ ರಸ್ತೆ ಬದಿ ಬಿಕೋ ಎನ್ನುತ್ತಿದೆ.



ಹಲಸಿನ ಮರದಲ್ಲಿ ಕಾಯಿ ಬಿಟ್ಟಿರುವುದು

ದಿನನಿತ್ಯ ಬಿಡುವಿಲ್ಲದೇ ಹಳ್ಳಿಗಳಲ್ಲಿರುವ ಹಲಸಿನ ತೊಳೆಗಳ ರುಚಿಯನ್ನು ದಾಬಸ್ ಪೇಟೆ ಪಟ್ಟಣದ ಮೂಲಕ ಹಾದುಹೋಗುವ ಪ್ರಯಾಣಿಕರಿಗೆ ತಲುಪಿಸುತ್ತಿದ್ದ ವ್ಯಾಪಾರಸ್ಥರು ಕೈಕಟ್ಟಿ ಕೂತಿದ್ದಾರೆ.

'ಹಲಸಿನ ಹಣ್ಣಿನ ಸೀಸನ್ ನಲ್ಲಿ ದಿನನಿತ್ಯ ಒಂದು ಸಾವಿರ ಸಂಪಾದನೆ ಮಾಡುತ್ತಿದ್ದೆವು. ಆದರೆ, ಎರಡು ವರ್ಷದಿಂದ ಅದು ಇಲ್ಲ. ಈಗ ಬದುಕಿಗೆ ಬೇರೆ ದಾರಿ ಕಂಡುಕೊಳ್ಳಬೇಕಿದೆ' ಎಂದು ತಿಳಿಸಿದರು ಹಲಸಿನ ತೊಳೆ ವ್ಯಾಪಾರಸ್ಥ ಗಿರೀಶ್.

ಕೋವಿಡ್: ಪೋಷಕರ ಕಳೆದುಕೊಂಡ ಮಕ್ಕಳಿಗೆ ಉಚಿತ ಶಿಕ್ಷಣ– ಸುತ್ತೂರು ಶ್ರೀ

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಕೋವಿಡ್ ಮಾನವೀಯ ಮೌಲ್ಯಗಳಿಗೆ ಕೊಡಲಿ ಪೆಟ್ಟು ನೀಡುತ್ತಿದೆ. ರಕ್ತ ಸಂಬಂಧಿಗಳು, ಬಂಧುಗಳೇ ತಮ್ಮವರ ಅಂತಿಮ ದರ್ಶನಕ್ಕೆ ಬಾರದಿರುವಂತಹ ಸಂದರ್ಭ ಸೃಷ್ಟಿ ಮಾಡಿದೆ. ಈ ನಿಟ್ಟನಲ್ಲಿ ಎಲ್ಲರೂ ತಮ್ಮ ಆರೋಗ್ಯದ ಕಡೆ ಹೆಚ್ಚಿನ ನಿಗಾ ವಹಿಸುವುದು ಒಳಿತು' ಎಂದು ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿನಿಂದ ಮೃತಪಟ್ಟ ಕುಟುಂಬ ಸದಸ್ಯರಿಗೆ ಸಚಿವ ಎಸ್.ಟಿ.ಸೋಮಶೇಖರ್ ವತಿಯಿಂದ ₹1 ಲಕ್ಷ ಸಹಾಯಧನ ಹಾಗೂ ವೈದ್ಯಕೀಯ ನೆರವು ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೊರೊನಾ ಸೋಂಕು ಇಳಿಮುಖವಾಗುತ್ತಿದೆ ಎಂದು ಭ್ರಮಿಸಿ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೆ ಇದ್ದದ್ದೇ 2ನೇ ಅಲೆ ವೇಳೆ ಉಂಟಾಗುತ್ತಿರುವ ಅವಘಡಗಳಿಗೆ ಕಾರಣ' ಎಂದರು.

'ಆರ್ಥಿಕವಾಗಿ ಹಿಂದುಳಿದ ಅನೇಕ ಪೋಷಕರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಅವರ ಮಕ್ಕಳಿಗೆ ಮಠದ ವತಿಯಿಂದ ಹತ್ತನೇ ತರಗತಿಯವರೆಗೆ ಉಚಿತ ಶಿಕ್ಷಣ ನೀಡಲಾಗುವುದು' ಎಂದು ಹೇಳಿದರು.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, 'ಸ್ವಯಂ ವೈದ್ಯದಿಂದ ಕೊರೊನಾ ಸೋಂಕು ದೂರವಾಗುವುದಿಲ್ಲ. ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಮೂಗಿಗೆ ನಿಂಬೆಹಣ್ಣಿನ ರಸ ಹಚ್ಚುವುದರಿಂದ, ಬಿಸಿನೀರು ಕುಡಿಯುವುದರಿಂದಲೇ ಸೋಂಕು ವಾಸಿಯಾಗುವುದಿಲ್ಲ. ಆರಂಭದಲ್ಲೇ ಚಿಕಿತ್ಸೆ ಪಡೆದರೆ ಮಾತ್ರ ಕಾಯಿಲೆಯಿಂದ ಗುಣಮುಖರಾಗಬಹುದು' ಎಂದು ಹೇಳಿದರು.

ಬೆಂಗಳೂರು ದಕ್ಷಿಣ ವಿಭಾಗಕಾಧಿಕಾರಿ ಡಾ.ಶಿವಣ್ಣ, ಜಿಲ್ಲಾ ಪಂಚಾಯಿತಿ ಸದಸ್ಯ ರಶ್ಮಿ ಹನುಮಂತೇಗೌಡ, ಮುಖಂಡರಾದ ಅನಿಲ್ ಚಳಗೇರಿ, ನಿಶಾಂತ್ ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.



ಕೋವಿಡ್‌ನಿಂದ ಮೃತಪಟ್ಟವರ ಕುಟುಂಬ ಸದಸ್ಯರಿಗೆ ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಅವರು ಸಹಾಯಧನ ವಿತರಣೆ ಮಾಡಿದರು. ಸಚಿವ ಎಸ್.ಟಿ.ಸೋಮಶೇಖರ್, ನಿಶಾಂತ್ ಸೋಮಶೇಖರ್ ಇದ್ದಾರೆ

'ಪ್ರಧಾನ ಭಾಷೆಗಳಿಗೆ ವಚನಗಳು ಅನುವಾದವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಚನ ಸಾಹಿತ್ಯ ಅಥವಾ ಶರಣ ಸಾಹಿತ್ಯವು ಚಲನಶೀಲವಾದ, ಸಂವಾದನಾ ಪ್ರಧಾನವಾದ ಚಿಂತನಧಾರೆಗಳು. ಇವುಗಳನ್ನು ಇಂಗ್ಲಿಷ್ ಮಾತ್ರವಲ್ಲದೆ ಜಗತ್ತಿನ ಪ್ರಧಾನ ಭಾಷೆಗಳಿಗೆ ಅನುವಾದ ಮಾಡಬೇಕಾದ ಅಗತ್ಯವಿದೆ' ಎಂದು ಹಿರಿಯ ಸಾಹಿತಿ ಡಾ.ಎಚ್.ಎಸ್. ಶಿವಪ್ರಕಾಶ್ ಹೇಳಿದರು.

ಕನ್ನಡ ಚಿಂತನಮಾಲೆ ಶೀರ್ಷಿಕೆಯಡಿ 'ಶರಣ ಸಾಹಿತ್ಯ ಮರು ಚಿಂತನೆ' ಕುರಿತು ಆನ್‌ಲೈನ್‌ನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಬಹಳಷ್ಟು ಜನ ಶರಣ ಸಾಹಿತ್ಯವನ್ನು ಧಾರ್ಮಿಕ ಸಾಹಿತ್ಯವಾಗಿ ನೋಡುತ್ತಾರೆ. ಆದರೆ, ಅದರಲ್ಲಿ ಅನುಭಾವದ ಅಭಿವ್ಯಕ್ತಿ ಕಾಣುತ್ತದೆ' ಎಂದು ಅಭಿಪ್ರಾಯಪಟ್ಟರು.

'ಉಪನಿಷತ್ತುಕಾರರು ವಾನಪ್ರಸ್ಥಾಶ್ರಮದಲ್ಲಿದ್ದಾಗ ಉಪನಿಷತ್ತುಗಳನ್ನು ರಚಿಸಿದರು. ಅಂದರೆ, ಅವರು ಅರಣ್ಯದಲ್ಲಿ ಜನರಿಂದ ದೂರ ಇದ್ದು ಈ ಗ್ರಂಥಗಳನ್ನು ರಚಿಸಿದರು. ಆದರೆ, ವಚನಕಾರರು ನಾಡಿನ ಮಧ್ಯೆ ಇದ್ದು, ದೈನಂದಿನ ಜೀವನದ ಎಲ್ಲ ಒತ್ತಡಗಳ ಮಧ್ಯೆಯೇ ತಮ್ಮ ಚಿಂತನೆ ರೂಪಿಸಿಕೊಂಡರು. ಹೀಗಾಗಿ, ವಚನಗಳು ಜನರ ತತ್‌ಕ್ಷಣದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ' ಎಂದರು.

'ಪೂರ್ವಗ್ರಹಗಳನ್ನು ಬಿಟ್ಟು ವಚನ ಸಾಹಿತ್ಯವನ್ನು ನೋಡಬೇಕಾಗಿದೆ. ವಚನಗಳಲ್ಲಿ ಸಮಾಜವಾದ, ಸ್ತ್ರೀವಾದ ಮತ್ತು ಪ್ರಜಾಸತ್ತಾತ್ಮಕ ಅಂಶಗಳು ಇವೆ. ಕಾಯಕವನ್ನೂ ಕೂಡ ಆಧ್ಯಾತ್ಮಿಕ ಸಾಧನೆಯನ್ನಾಗಿ ಮಾಡಿಕೊಂಡಿರುವ ವೈಶಿಷ್ಟ್ಯ ವಚನಗಳದ್ದು' ಎಂದು ಅಭಿಪ್ರಾಯಪಟ್ಟರು.

ಅಮೆರಿಕದಲ್ಲಿರುವ ಡಾ. ಸಜ್ಜನ ಶಿವ, 'ವಚನಗಳನ್ನು ರಚಿಸಿದ 300ರಿಂದ 350 ಶರಣಗರು ಬೇರೆ ಬೇರೆ ವರ್ಗ, ಬೇರೆ ಬೇರೆ ವಿಧದವರಾಗಿದ್ದರು. ಆದರೆ, ಇವರೆಲ್ಲರೂ ಓದು–ಬರಹ ಬಲ್ಲವರಾಗಿದ್ದರೇ ಎಂಬ ಬಗ್ಗೆ ನನಗೆ ಕುತೂಹಲವಿದೆ. ಬಸವಣ್ಣನವರು ಸಂಸ್ಕೃತದ ಬದಲು ಕನ್ನಡದಲ್ಲಿ ಸಾಹಿತ್ಯ ರಚಿಸುವುದಂತೆ ಪ್ರೇರೇಪಿಸಿದ್ದರು ಎನ್ನುವುದೇನೋ ಸರಿ. ಆದರೆ, ಎಲ್ಲರೂ ಕನ್ನಡ ಓದು–ಬರಹ ಕಲಿತಿದ್ದರೆ ಎಂಬ ಬಗ್ಗೆ ಹೆಚ್ಚು ಮಾಹಿತಿ ಸಂಗ್ರಹಿಸುವ ಅವಶ್ಯಕತೆ ಇದೆ' ಎಂದರು.

ಶೇಷಾದ್ರಿಪುರದ ಸಂಜೆ ಪದವಿ ಕಾಲೇಜಿನ ಕನ್ನಡ ಸಾಹಿತ್ಯ ವೇದಿಕೆಯು ಸಂಸ್ಕೃತಿ-ಸಂಗಮ ಸಾಹಿತ್ಯ ಸೇವಾ ಪ್ರತಿಷ್ಠಾನ, ಬೆಂಗಳೂರು ಹಾಗೂ ಅಮೆರಿಕದ ಸಿದ್ಧಗಂಗಾ ಹ್ಯುಮಾನಿಟೇರಿಯನ್ ಮಿಷನ್ ಸಹಯೋಗದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ್, ಪ್ರಾಚಾರ್ಯ ಪ್ರೊ. ಎನ್.ಎಸ್. ಸತೀಶ್ ಇದ್ದರು.

ಡೊಮಿನಿಕಾದಲ್ಲಿ ಮೆಹುಲ್ ಚೋಕ್ಸಿ ಬಂಧನ

ಒಂದನೇ ಪುಟದಿಂದ...

ಆಂಟಿಗುವಾ ಮತ್ತು ಬಾರ್ಬುಡಾದಿಂದಲೂ ಚೋಕ್ಸಿ ನಾಪತ್ತೆಯಾಗಿದ್ದ. ಚೋಕ್ಸಿ ವಿರುದ್ಧ ಇಂಟರ್‌ಪೋಲ್ ಯೆಲ್ಲೋ ನೋಟಿಸ್ ಜಾರಿಗೊಳಿಸಿತ್ತು. ಈತನ ಪತ್ತೆಗೆ ಪೊಲೀಸರು ಶೋಧ ಆರಂಭಿಸಿದ್ದರು. ಮಂಗಳವಾರ ರಾತ್ರಿ ಬಂಧಿಸಲಾಗಿದೆ.

ಆಂಟಿಗುವಾ ಮತ್ತು ಬಾರ್ಬುಡಾದ ರಾಯಲ್ ಪೊಲೀಸ್ ಪಡೆಗೆ ಚೋಕ್ಸಿಯನ್ನು ಹಸ್ತಾಂತರಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಸ್ಥಳೀಯ ಮಾಧ್ಯಮ ವರದಿಗಳು ತಿಳಿಸಿವೆ.

ಆಂಟಿಗುವಾ ಮತ್ತು ಬಾರ್ಬುಡಾದ ಪೌರತ್ವ ಪಡೆದಿರುವ ಚೋಕ್ಸಿ 2018 ರಿಂದ ಅಲ್ಲಿಯೇ ವಾಸ್ತವ್ಯ ಹೂಡಿದ್ದ. ದ್ವೀಪದ ದಕ್ಷಿಣ ಪ್ರದೇಶದಲ್ಲಿ ಭಾನುವಾರ ತನ್ನ ವಾಹನದಲ್ಲಿ ಕಾಣಿಸಿಕೊಂಡಿದ್ದ. ನಂತರ, ಆತನ ವಾಹನ ಮಾತ್ರ ಪತ್ತೆಯಾಗಿದೆ. ಭಾನುವಾರದಿಂದ ಚೋಕ್ಸಿ ಸುಳಿವು ಸಿಕ್ಕಿಲ್ಲ ಎಂದು ಅವರ ವಕೀಲ ವಿಜಯ್ ಅಗ್ರವಾಲ್ ದೃಢಪಡಿಸಿದ್ದಾರೆ.



ಮೆಹುಲ್ ಚೋಕ್ಸಿ

ಹೆಸರುಘಟ್ಟ ಹುಲ್ಲುಗಾವಲು: ಭೂಪರಿವರ್ತನೆ ಮಾಡದಂತೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರುಘಟ್ಟ ಹುಲ್ಲುಗಾವಲು ಪ್ರದೇಶದಲ್ಲಿ ಯಾವುದೇ ಭೂ ಪರಿವರ್ತನೆ ಮಾಡಬಾರದು ಎಂದು ಹೈಕೋರ್ಟ್ ಆದೇಶಿಸಿದೆ.

ಗ್ರೇಟರ್ ಹೆಸರುಘಟ್ಟ ಸಂರಕ್ಷಣಾ ಮೀಸಲು ಪ್ರದೇಶದ ಪ್ರಸ್ತಾವನೆ ಕೈಬಿಟ್ಟಿದ್ದ 15ನೇ ರಾಜ್ಯ ವನ್ಯಜೀವಿ ಮಂಡಳಿ ಸಭೆಯ ನಿರ್ಧಾರ ಪ್ರಶ್ನಿಸಿ ಬಿಬಿಎಂಪಿ ಜೀವ ವೈವಿಧ್ಯ ಸಮಿತಿ ಸದಸ್ಯ ವಿಜಯ್ ನಿಶಾಂತ್, ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಈ ಪ್ರದೇಶದಲ್ಲಿ ಸಾಕಷ್ಟು ಪಕ್ಷಿ ಸಂಕುಲಗಳು ಇವೆ. ಮುಂದಿನ ವಿಚಾರಣೆ ತನಕ ಯಾವುದೇ ನಿರ್ಧಾರ ತೆಗೆದುಕೊಳ್ಳಬಾರದು' ಎಂದು ಸೂಚನೆ ನೀಡಿ ವಿಚಾರಣೆಯನ್ನು ಜು.10ಕ್ಕೆ ಮುಂದೂಡಿತು.

'2021ರ ಜನವರಿ 19ರಂದು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ವನ್ಯಜೀವಿ ಮಂಡಳಿ ಸಭೆಯಲ್ಲಿ ಗ್ರೇಟರ್ ಹೆಸರುಘಟ್ಟ ಹುಲ್ಲುಗಾವಲು ಸಂರಕ್ಷಿತ ಪ್ರದೇಶವನ್ನಾಗಿ ಘೋಷಣೆ ಮಾಡುವ ನಿರ್ಧಾರ ಕೈಬಿಡಲಾಗಿದೆ. ಅಳಿವಿನ ಅಂಚಿನಲ್ಲಿರುವ 40ಕ್ಕೂ ಹೆಚ್ಚು ಪ್ರಾಣಿ ಮತ್ತು ಪಕ್ಷಿ ಸಂಕುಲವನ್ನು ರಕ್ಷಿಸಲು ಸಂರಕ್ಷಿತ ಪ್ರದೇಶ ಎಂದು ಘೋಷಣೆ ಮಾಡುವ ಅಗತ್ಯವಿದೆ' ಎಂದು ಅರ್ಜಿದಾರರು ತಿಳಿಸಿದ್ದರು.

'ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರು ವನ್ಯಜೀವಿ ಮಂಡಳಿ ಸದಸ್ಯರಲ್ಲ. ಆದರೂ ಅವರನ್ನು ಆಹ್ವಾನಿಸಿ ಸಭೆ ನಡೆಸಿರುವುದು ಕಾನೂನುಬಾಹಿರ. ಸಭೆಯನ್ನು ಮತ್ತೊಮ್ಮೆ ನಡೆಸಿ ಹೆಸರುಘಟ್ಟ ಹುಲ್ಲುಗಾವಲು ಪ್ರದೇಶವನ್ನು ಸಂರಕ್ಷಿತ ಪ್ರದೇಶವನ್ನಾಗಿ ಘೋಷಣೆ ಮಾಡಬೇಕು' ಎಂದು ಅರ್ಜಿಯಲ್ಲಿ ಕೋರಿದ್ದರು.

ಆನ್‌ಲೈನ್ ತರಗತಿ: ಚೈತನ್ಯ ಟೆಕ್ನೋಗೆ ನೋಟಿಸ್

ಬೆಂಗಳೂರು: ಶಿಕ್ಷಣ ಇಲಾಖೆಯ ಅನುಮತಿ ಇಲ್ಲದಿದ್ದರೂ ಆನ್‌ಲೈನ್‌ನಲ್ಲಿ ತರಗತಿ ಆರಂಭಿಸಿ ವಿದ್ಯಾರ್ಥಿಗಳ ಪೋಷಕರಿಂದ ಶುಲ್ಕ ವಸೂಲು ಮಾಡುತ್ತಿರುವ ಆರೋಪದ ಬಗ್ಗೆ ಮೂರು ದಿನಗಳ ಒಳಗೆ ವಿವರಣೆ ನೀಡುವಂತೆ ಮಹಾಲಕ್ಷ್ಮಿಪುರ ಮತ್ತು ರಾಜಾಜಿನಗರದಲ್ಲಿರುವ ಶ್ರೀ ಚೈತನ್ಯ ಟೆಕ್ನೋ ಶಾಲೆಯ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ವಿ. ರಮೇಶ್ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ.

ಶ್ರೀ ಚೈತನ್ಯ ಟೆಕ್ನೋ ಶಾಲೆ ಆನ್‌ಲೈನ್‌ನಲ್ಲಿ ತರಗತಿ ನಡೆಸುತ್ತಿರುವ ಬಗ್ಗೆ ಕರ್ನಾಟಕ ಖಾಸಗಿ ಶಾಲಾ ಪೋಷಕರ ಸಂಘಟನೆಗಳ ಸಮನ್ವಯ ಸಮಿತಿ ಇದೇ 25ರಂದು ದೂರು ನೀಡಿತ್ತು.

'2021–22ನೇ ಸಾಲಿನಲ್ಲಿ ಶಾಲೆಗಳನ್ನು ನಡೆಸಲು ಯಾವುದೇ ವೇಳಾಪಟ್ಟಿ ನೀಡಿಲ್ಲ. ಅಲ್ಲದೆ, ಹಿಂದಿನ ಸಾಲಿನ ಶುಲ್ಕ ವಸೂಲಿಗೆ ಸಂಬಂಧಿಸಿದಂತೆಯೂ ಯಾವುದೇ ನಿರ್ದೇಶನ ನೀಡಿಲ್ಲ. ಇಲಾಖೆಯ ಆದೇಶಕ್ಕೆ ವಿರುದ್ಧವಾಗಿ ಆನ್‌ಲೈನ್ ಮೂಲಕ ತರಗತಿ ನಡೆಸುವುದು, ಕೆಲವು ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗೆ ಅವಕಾಶ ನೀಡದೆ ತಾರತಮ್ಯ ಎಸಗುತ್ತಿರುವುದು, ವಿದ್ಯಾರ್ಥಿಗಳ ಪೋಷಕರಿಂದ ಹಿಂದಿನ ಸಾಲಿನ ಮತ್ತು ಈ ಸಾಲಿನ ಶುಲ್ಕ ಪಾವತಿಗೆ ಒತ್ತಾಯಿಸುವುದು ಆರ್‌ಟಿಇ ಕಾಯ್ದೆಯ ಉಲ್ಲಂಘನೆಯಾಗುತ್ತದೆ. ಹೀಗಾಗಿ, ಈ ಬಗ್ಗೆ ಪೂರಕ ದಾಖಲೆಗಳೊಂದಿಗೆ ವಿವರಣೆ ನೀಡಬೇಕು. ಇಲ್ಲದಿದ್ದರೆ ಆರ್‌ಟಿಇ ಕಾಯ್ದೆಯಡಿ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಮೇಲಧಿಕಾರಿಗಳಿಗೆ ಶಿಫಾರಸು ಮಾಡಲಾಗುವುದು' ಎಂದೂ ನೋಟಿಸ್‌ನಲ್ಲಿ ಎಚ್ಚರಿಕೆ ನೀಡಲಾಗಿದೆ.



ಸಚಿವ ಡಾ.ಕೆ.ಸುಧಾಕರ್ ಅವರು ಐಸಿಯು ವಾರ್ಡ್ ಉದ್ಘಾಟಿಸಿದರು. ಸಚಿವ ಬೈರತಿ ಬಸವರಾಜ, ಜಿಲ್ಲಾಧಿಕಾರಿ ಜೆ. ಮಂಜುನಾಥ್, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಶ್ರೀನಿವಾಸ್, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಚಂದ್ರಶೇಖರ್, ಬಿಬಿಎಂಪಿ ಮಾಜಿ ಸದಸ್ಯರಾದ ಜಯಪ್ರಕಾಶ್, ಎಂ.ಎನ್.ಶ್ರೀಕಾಂತ್, ಪಿ.ಜೆ.ಅಂತೋಣಿ ಸ್ವಾಮಿ ಇದ್ದರು.

ಪಿಎಂ ಕೇರ್ಸ್ ಯೋಜನೆಯಡಿ ಐಸಿಯು ಉದ್ಘಾಟನೆ

ಕೆ.ಆರ್.ಪುರ: "ಪಿಎಂ ಕೇರ್ಸ್ ಯೋಜನೆಯಡಿ ಬಂದಿರುವ ವೆಂಟಿಲೇಟರ್‌ಗಳನ್ನು ಒಳಗೊಂಡ ಆರು ಹೊಸ ಐಸಿಯು ವಾರ್ಡ್ ಗಳನ್ನು ಚಾಲನೆ ನೀಡಿದ್ದೇವೆ. ಈ ಆಸ್ಪತ್ರೆಯಲ್ಲಿ ಕೋವಿಡ್‌ನಿಂದ ಯಾವುದೆ ಸಾವು ಸಂಭವಿಸಿಲ್ಲ ಎಂಬುದು ಸಮಾಧಾನದ ಸಂಗತಿ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕ್ಷೇತ್ರದ ಸಾರ್ವಜನಿಕ ಆಸ್ಪತ್ರೆಯಲ್ಲಿ ವೆಂಟಿಲೇಟರ್ ಸಹಿತ ಐಸಿಯು ವಾರ್ಡ್ ಗಳಿಗೆ ಚಾಲನೆ ನೀಡಿ, ಆಶಾ ಕಾರ್ಯಕರ್ತೆಯರಿಗೆ ವೈದ್ಯಕೀಯ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು.

ಕೆ.ಆರ್.ಪುರ, ಮಹದೇವಪುರ, ಸಿ.ವಿ.ರಾಮನ್‌ನಗರ ಸುತ್ತಮುತ್ತಲ ಕ್ಷೇತ್ರಗಳಿಗೆ ಈ ಆಸ್ಪತ್ರೆ ಪ್ರಮುಖವಾಗಿದೆ. ಈ ಆಸ್ಪತ್ರೆಯನ್ನು ಅಭಿವೃದ್ಧಿ ಮಾಡಿ 100 ಹಾಸಿಗೆಗಳಿಂದ 200 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲಾಗುವುದು. ಜೊತೆಗೆ, ಐಟಿಐ ಆಸ್ಪತ್ರೆಯನ್ನು ಸಂಪೂರ್ಣವಾಗಿ ಮಕ್ಕಳ ಆಸ್ಪತ್ರೆಯಾಗಿ ರೂಪಾಂತರ ಮಾಡಿ ಅಭಿವೃದ್ಧಿಪಡಿಸುತ್ತೇವೆ ಎಂದು ಸುಧಾಕರ್ ಹೇಳಿದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಮಾತನಾಡಿ, 'ಆರು ಐಸಿಯು ವಾರ್ಡ್‌ಗಳನ್ನು ಸಾರ್ವಜನಿಕರಿಗೆ ಸಮರ್ಪಣೆ ಮಾಡಿದ್ದೇವೆ. ಇಲ್ಲಿ ರಾಷ್ಟ್ರೀಯ ಹೆದ್ದಾರಿಯೂ ಹಾದು ಹೋಗುವುದರಿಂದ ಹೆಚ್ಚು ಅಪಘಾತಗಳು ಸಂಭವಿಸುತ್ತಿರುತ್ತವೆ. ಈ ಆಸ್ಪತ್ರೆಯನ್ನು 200 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಿ ಎಂದು ಮನವಿ ಮಾಡಿದ್ದೇನೆ' ಎಂದರು.

ಕಪ್ಪು ಶಿಲೀಂಧ್ರ: 21 ಮಂದಿಗೆ ಸೋಂಕು

ಬೆಂಗಳೂರು: ನಗರದಲ್ಲಿ ಬುಧವಾರ ಮತ್ತೆ 21 ಮಂದಿಯಲ್ಲಿ ಕಪ್ಪು ಶಿಲೀಂಧ್ರ ಸೋಂಕು ದೃಢಪಟ್ಟಿದೆ. ಈ ಸೋಂಕಿನಿಂದ ಇಬ್ಬರು ಮೃತಪಟ್ಟಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆಗೆ ಮೂರು ಮಂದಿ ಸೋಂಕಿಗೆ ಒಳಗಾದವರು ದಾಖಲಾಗಿದ್ದಾರೆ. ಚಿಕಿತ್ಸೆ ಪಡೆದುಕೊಳ್ಳುತ್ತಿದ್ದವರಲ್ಲಿ ಇಬ್ಬರು ಮರಣ ಹೊಂದಿದ್ದಾರೆ. ಸದ್ಯ ಅಲ್ಲಿ 58 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೌರಿಂಗ್ ಆಸ್ಪತ್ರೆಗೆ ಒಂದೇ ದಿನ 18 ಮಂದಿ ದಾಖಲಾಗಿದ್ದಾರೆ. ಇಬ್ಬರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಚಿಕಿತ್ಸೆ ಪಡೆದುಕೊಳ್ಳುತ್ತಿದ್ದವರಲ್ಲಿ ಇಬ್ಬರು ಗುಣಮುಖರಾಗಿ ಮನೆಗೆ ತೆರಳಿದ್ದಾರೆ.

ಒಂದು ಸಾವಿರ ಪಲ್ಸ್ ಆಕ್ಸಿಮೀಟರ್ ವಿತರಣೆ

ಬೆಂಗಳೂರು: ಬೆಂಗಳೂರು ದಕ್ಷಿಣ ಭಾಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಂದಾಯ ಸಚಿವ ಆರ್. ಅಶೋಕ ಅವರು 1,000 ಪಲ್ಸ್ ಆಕ್ಸಿಮೀಟರ್‌ಗಳನ್ನು ವಿತರಿಸಿದರು.

ಬಳಿಕ ಮಾತನಾಡಿದ ಅವರು,'ಅಮೆರಿಕದ ವಾಷಿಂಗ್ಟನ್ ಡಿಸಿಯಲ್ಲಿರುವ ಒಎಸ್‌ಎ ಪ್ರತಿಷ್ಠಾನವು ಕೊಡುಗೆಯಾಗಿ ನೀಡಿರುವ ಒಂದು ಸಾವಿರ ಪಲ್ಸ್ ಆಕ್ಸಿಮೀಟರ್‌ಗಳನ್ನು ಭಾರತೀಯ ಕೈಗಾರಿಕೆಗಳ ಒಕ್ಕೂಟದ ಮೂಲಕ ಕಂದಾಯ ಇಲಾಖೆ ಪಡೆದುಕೊಂಡಿದೆ' ಎಂದರು.

'ಬೆಂಗಳೂರು ದಕ್ಷಿಣದ ಆರು ಕ್ಷೇತ್ರಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಈ ಪಲ್ಸ್ ಆಕ್ಸಿಮೀಟರ್‌ಗಳನ್ನು ಬಳಕೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಕೋವಿಡ್ ನಿಯಂತ್ರಣ– ಅಧಿಕಾರಿಗಳ ಜೊತೆ ಸಚಿವ ಲಿಂಬಾವಳಿ ಸಮಾಲೋಚನೆ

'ಹಾಸಿಗೆ ಹಂಚಿಕೆಗೆ ಸರದಿ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದ ಹಾಸಿಗೆಗಳನ್ನು ಸರದಿ ಆಧಾರದಲ್ಲಿ ಹಂಚಿಕೆ ಮಾಡಲಾಗುತ್ತದೆ. ಈ ವ್ಯವಸ್ಥೆ ಎರಡು ದಿನಗಳಲ್ಲಿ ಆರಂಭವಾಗಲಿದೆ' ಎಂದು ನಿಯಂತ್ರಣ ಕೊಠಡಿ, ಸಹಾಯವಾಣಿ ನಿರ್ವಹಣೆ ಮತ್ತು ಸೋಂಕಿತರಿಗೆ ವೈದ್ಯಕೀಯ ಸಲಹೆ ವ್ಯವಸ್ಥೆಯ ಮೇಲ್ವಿಚಾರಣೆಯ ನೋಡಲ್ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.



ಅರವಿಂದ ಲಿಂಬಾವಳಿ

ಮಾಗಡಿ ರಸ್ತೆಯ ಆರೋಗ್ಯ ಸೌಧದಲ್ಲಿ ಕೋವಿಡ್ ವಾರ್ ರೂಮ್ ನಿರ್ವಹಣೆ ಮಾಡುತ್ತಿರುವ ಅಧಿಕಾರಿಗಳ ಜೊತೆ ಬುಧವಾರ ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

'ಸೋಂಕಿತರ ಕಡೆಯವರು ಹಾಸಿಗೆ ಕಾಯ್ದಿರಿಸಲು ಸಹಾಯವಾಣಿಗೆ ಕರೆ ಮಾಡಿದಾಗ ಅವರಿಗೆ ಸರದಿ ಸಂಖ್ಯೆಯನ್ನು ನೀಡಲಾಗುತ್ತದೆ. ಹಾಸಿಗೆಗಾಗಿ ಒಟ್ಟು ಎಷ್ಟು ಮಂದಿ ಹೆಸರು ನೋಂದಾಯಿಸಿದ್ದಾರೆ, ಅವರು ಸಂಖ್ಯೆಯ ಸರದಿ ಎಷ್ಟರಲ್ಲಿದೆ, ಈಗ ಯಾವ ಸಂಖ್ಯೆಯವರಿಗೆ ಹಾಸಿಗೆ ಲಭಿಸಿದ್ದು, ದಾಖಲಾತಿ ನಡೆಯುತ್ತಿದೆ ಎಂಬ ಮಾಹಿತಿಯನ್ನು ಅವರಿಗೆ ತಲುಪಿಸುವ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದರು.

'ತುರ್ತು ಚಿಕಿತ್ಸೆ ಅಗತ್ಯವಿರುವ ರೋಗಿಗಳಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು. ರೋಗದ ತೀವ್ರತೆ ಆಧರಿಸಿ ಅವರಿಗೆ ಹಾಸಿಗೆ ಹಂಚಿಕೆ ಮಾಡಲಾಗುತ್ತದೆ' ಎಂದು ಅವರು ಸ್ಪಷ್ಟಪಡಿಸಿದರು.

'ಸರದಿ ಆಧಾರದಲ್ಲಿ ಹಾಸಿಗೆ ಹಂಚಿಕೆ ಮಾಡುವುದರಿಂದ ಉಂಟಾಗುವ ಪರಿಣಾಮಗಳನ್ನು ನೋಡಿಕೊಂಡು ಭವಿಷ್ಯದಲ್ಲಿ ಈ ವ್ಯವಸ್ಥೆಯನ್ನು ಇಡೀ ರಾಜ್ಯಕ್ಕೆ ಅನ್ವಯಿಸುತ್ತೇವೆ. ರಾಜ್ಯ ವಾರ್ ರೂಮ್ ಹಾಗೂ ಬಿಬಿಎಂಪಿ ವಾರ್ ರೂಂಗಳನ್ನು ಒಂದೇ ವ್ಯವಸ್ಥೆಯಡಿ ತರುವ ಚಿಂತನೆ ನಡೆದಿದೆ' ಎಂದರು.

'ವಾರ್ ರೂಂನ ಕಾರ್ಯನಿರ್ವಹಣೆಯನ್ನು ಇನ್ನಷ್ಟು ಪರಿಣಾಮಕಾರಿ ಹಾಗೂ ಜನಸ್ನೇಹಿಯಾಗಿ ಮಾಡಲು ಈಗಿರುವ ಹಾಸಿಗೆ ಹಂಚಿಕೆಯ ಕೇಂದ್ರೀಕೃತ ವ್ಯವಸ್ಥೆಯ (ಸಿಎಚ್‌ಬಿಎ) ತಂತ್ರಾಂಶದಲ್ಲಿ ಅನೇಕ ಸುಧಾರಣೆಗಳನ್ನು ತರಲು ಉದ್ದೇಶಿಸಲಾಗಿದೆ. ಅದು ಕೂಡಾ ಕೆಲವೇ ದಿನಗಳಲ್ಲಿ ಅನುಷ್ಠಾನಕ್ಕೆ ಬರಲಿದೆ' ಎಂದು ಸಚಿವರು ಮಾಹಿತಿ ನೀಡಿದರು.


'ಹಾಸಿಗೆ ಹಂಚಿಕೆಯಾದ ರೋಗಿಗಳು ನಾಲ್ಕು ಗಂಟೆಯ ಒಳಗೆ ಆಸ್ಪತ್ರೆಗೆ ದಾಖಲಾಗದೇ ಹೋದರೆ ಅವರಿಗೆ ಮತ್ತೆ ಜಾಗೃತ ಗೊಳಿಸುವ ಎಸ್‌ಎಂಎಸ್ ಕಳುಹಿಸಲಾಗುತ್ತದೆ. ಆಸ್ಪತ್ರೆಯ ನೋಡಲ್ ಅಧಿಕಾರಿಗೂ ಈ ಸಂದೇಶ ಹೋಗುತ್ತದೆ. ಪ್ರಸ್ತುತ ಚಿಕಿತ್ಸೆ ನಿರ್ಧಾರ ಕೇಂದ್ರಗಳಲ್ಲಿ (ಪಿಟಿಸಿ) ಭೌತಿಕವಾಗಿ ವೈದ್ಯಕೀಯ ತಪಾಸಣೆಗೆ ಒಳಗಾಗುವವರಿಗೆ ವೈದ್ಯರ ಸಲಹೆ ಆಧರಿಸಿ ಆ ಪಿಟಿಸಿಯ ವ್ಯಾಪ್ತಿಯ ರೆಫರಲ್ ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸಲು ವ್ಯವಸ್ಥೆ ರೂಪಿಸಬೇಕು' ಎಂದು ಅವರು ಹೇಳಿದರು.

ಉತ್ಸಾಹಿ ಸ್ವಯಂಸೇವಕರ ಸಂಸ್ಥೆಗಳು ಕೋವಿಡ್ ನಿರ್ವಹಣೆಗೆ ಸರ್ಕಾರದೊಂದಿಗೆ ಕೈ ಜೋಡಿಸಲು ಮುಂದೆ ಬಂದರೆ ಅವರ ನೆರವು ಪಡೆಯುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಬಿಬಿಎಂಪಿ ಕೋವಿಡ್ ವಾರ್ ರೂಂ ನಿರ್ವಹಣಾಧಿಕಾರಿ ವಿ.ಪೊನ್ನುರಾಜ್, ಕುಮಾರ್ ಪುಷ್ಕರ್, ವಿಶ್ವಜಿತ್, ಬಿಬಿಎಂಪಿ ವಿಶೇಷ ಆಯುಕ್ತ ಡಿ. ರಂದೀಪ್, ಡಾ.ಅರುಂಧತಿ ಚಂದ್ರಶೇಖರ್, ಎನ್. ಟಿ.ಅಬ್ರೊ ಹಾಗೂ ಡಾ. ಭಾಸ್ಕರ್ ಭಾಗವಹಿಸಿ ಸಲಹೆ ನೀಡಿದರು.

'ಮೂರನೇ ಅಲೆ ಎದುರಿಸಲು ಮುಂಬೈ ಮಾದರಿ'

'ಕೋವಿಡ್ ಮೂರನೇ ಅಲೆ ಮಕ್ಕಳನ್ನು ಬಾಧಿಸಲಿದೆ ಎಂಬ ವರದಿ ಇದೆ. ಇದನ್ನು ಪರಿಣಾಮಕಾರಿಯಾಗಿ ಎದುರಿಸಲು ಮುಂಬೈ ಮಾದರಿಯ ಸೋಂಕು ನಿಯಂತ್ರಣ ಕ್ರಮಗಳನ್ನು ಅನುಸರಿಸಬೇಕು. ಮಕ್ಕಳಿಗಾಗಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ವಿಶೇಷ ವಾರ್ಡ್‌ಗಳನ್ನು ರೂಪಿಸಲು ಕ್ರಮ ವಹಿಸಬೇಕು' ಎಂದು ಅರವಿಂದ ಲಿಂಬಾವಳಿ ಸೂಚಿಸಿದರು.



ಸುದ್ದಿ 2 ನಿಮಿಷ

'ಆಸ್ಪತ್ರೆಗಳ ಅಗತ್ಯ ಪೂರೈಕೆಗೆ ಜಿಲ್ಲಾಮಟ್ಟದ ಸಮಿತಿ'

ಬೆಂಗಳೂರು: 'ಕೋವಿಡ್ ಪೀಡಿತರಿಗೆ ಆದ್ಯತೆ ಮೇಲೆ ಚಿಕಿತ್ಸೆ ನೀಡಲು ರಾಜ್ಯದ ಇಎಸ್‌ಐ ಆಸ್ಪತ್ರೆಗಳಿಗೆ ಬೇಕಾದ ಎಲ್ಲ ಅಗತ್ಯಗಳನ್ನು ಪೂರೈಸಲು ಅನುವಾಗುವಂತೆ ಜಿಲ್ಲಾ ಮಟ್ಟದ ಸಮಿತಿಗಳನ್ನು ನೇಮಿಸಬೇಕು' ಎಂದು ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಂದಿರಾ ನಗರದಲ್ಲಿರುವ 300 ಹಾಸಿಗೆಗಳ ಇಎಸ್‌ಐ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿದ ಅವರು, ಕೊರೊನಾ ಸೋಂಕಿತರಿಗೆ ನೀಡಲಾಗುತ್ತಿರುವ ಚಿಕಿತ್ಸಾ ವ್ಯವಸ್ಥೆಯ ಪರಿಶೀಲನೆ ನಡೆಸಿದರು.

'ಸೋಂಕಿತರಿಗೆ ಉತ್ತಮ ಚಿಕಿತ್ಸೆ ನೀಡಬೇಕು ಮತ್ತು ಅಗತ್ಯ ಇರುವ ವೈದ್ಯಕೀಯ ವ್ಯವಸ್ಥೆ ಬಗ್ಗೆ ಸಮಿತಿಗಳ ಮೂಲಕ ಪ್ರಸ್ತಾವ ಸಲ್ಲಿಸಬೇಕು' ಎಂದು ಸೂಚಿಸಿದರು.

'ಇಎಸ್‌ಐ ಆಸ್ಪತ್ರೆ ರೋಗಿಗಳಿಗೆ ಶೀಘ್ರ ಔಷಧ ದೊರಕಿಸಲು ಅನುವಾಗುವಂತೆ ಅಗತ್ಯ ಔಷಧ ಖರೀದಿ ಅಧಿಕಾರವನ್ನು ನಿರ್ದೇಶಕರಿಗೆ ನೀಡಲಾಗಿದೆ' ಎಂದು ತಿಳಿಸಿದರು.

ಸರ್ಕಾರವು ಘೋಷಿಸಿರುವ ಸಹಾಯಧನವು ಕಾರ್ಮಿಕರಿಗೆ ಸಮರ್ಪಕ ರೀತಿಯಲ್ಲಿ ಶೀಘ್ರವಾಗಿ ತಲುಪಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಂಗವಿಕಲರಿಗೆ ಕೋವಿಡ್ ಲಸಿಕೆ



ಬೆಂಗಳೂರು: ವಿಂಧ್ಯಾ ಇ ಇನ್ಫೋಮೀಡಿಯಾ ಪ್ರೈ.ಲಿಮಿಟೆಡ್ ನಗರದಲ್ಲಿ ಬುಧವಾರ ಆಯೋಜಿಸಿದ ಲಸಿಕೆ ವಿತರಣಾ ಅಭಿಯಾನದಲ್ಲಿ ಅಂಗವಿಕಲರಿಗೆ ಲಸಿಕೆ ವಿತರಣೆ ಮಾಡಲಾಯಿತು.

ಈ ಅಭಿಯಾನಕ್ಕೆ ಚಾಲನೆ ನೀಡಿದ ವಸತಿ ಸಚಿವ ವಿ. ಸೋಮಣ್ಣ, 'ಕೋವಿಡ್ ಹರಡುವಿಕೆ ತಡೆಗೆ ಲಸಿಕೆ ಸಹಕಾರಿಯಾಗಿದೆ. ಎಲ್ಲ ಅರ್ಹ ಫಲಾನುಭವಿಗಳು ಲಸಿಕೆ ಪಡೆದುಕೊಳ್ಳಬೇಕು. ಕೋವಿಡ್ ತಡೆಗಟ್ಟಲು ಮುಂಜಾಗ್ರತ ಕ್ರಮಗಳನ್ನು ಪಾಲಿಸಬೇಕು. ಈ ಸಂದರ್ಭದಲ್ಲಿ ಭಯ, ಆತಂಕಕ್ಕೆ ಒಳಗಾಗದೆಯೇ ಧನಾತ್ಮಕ ಚಿಂತನೆಗಳನ್ನು ಮಾಡಬೇಕು' ಎಂದರು.

ಟ್ರಸ್ಟ್‌ನ ಮುಖ್ಯಸ್ಥೆ ಪವಿತ್ರಾ, ಅಶೋಕ್ ಗಿರಿ, ಬಿಜೆಪಿಯ ಗೋವಿಂದರಾಜನಗರ ಮಂಡಲದ ಅಧ್ಯಕ್ಷ ವಿಶ್ವನಾಥ್ ಗೌಡ, ಬಿಬಿಎಂಪಿ ಮಾಜಿ ಸದಸ್ಯೆ ರೂಪಾ ಲಿಂಗೇಶ್, ಶ್ರೀಧರ್ ಮತ್ತಿತರರಿದ್ದರು.

ತೇಜಸ್ವಿ ಸೂರ್ಯ, ಸತೀಶ್ ರೆಡ್ಡಿ ಬಂಧನಕ್ಕೆ ಆಗ್ರಹ

ಬೆಂಗಳೂರು: 'ಹಾಸಿಗೆ ಬ್ಲಾಕ್ ದಂಧೆ ಪ್ರಕರಣದ ಆರೋಪಿಗಳು ಬಿಜೆಪಿ ಶಾಸಕ ಸತೀಶ್ ರೆಡ್ಡಿ ಅವರ ಆಪ್ತರೆಂದು ಬಹಿರಂಗವಾಗಿದ್ದು, ಸತೀಶ್ ಅವರನ್ನು ಬಂಧಿಸಿ ವಿಚಾರಣೆ ನಡೆಸಬೇಕು' ಎಂದು ಹನುಮಂತನಗರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಿ.ತೇಜೇಶ್ ಕುಮಾರ್ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಪತ್ರ ಬರೆದಿದ್ದಾರೆ.

'ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಬಾಬು ಹಾಗೂ ನೇತ್ರಾ ಬಿಜೆಪಿಯವರು ಹಾಗೂ ಶಾಸಕ ಸತೀಶ್ ರೆಡ್ಡಿ ಅವರ ಆಪ್ತರು ಎನ್ನಲಾಗಿದೆ. ಕೂಡಲೇ ಶಾಸಕರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಈ ದಂಧೆ ಬಯಲಿಗೆಳೆದು ಸಂಸದ ತೇಜಸ್ವಿ ಸೂರ್ಯ ಪ್ರಚಾರ ನೀಡಿದ್ದರು. ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ ಬೆಲೆಗೆ ಕೋವಿಡ್ ಲಸಿಕೆ ಹಾಕಲಾಗುತ್ತಿದ್ದು, ತೇಜಸ್ವಿ ಸೂರ್ಯ ಅವರೇ ಇದಕ್ಕೆ ರಾಯಭಾರಿಯಾಗಿ ಪ್ರಚಾರ ನೀಡಿದ್ದರು. ಆಸ್ಪತ್ರೆಗಳಲ್ಲಿ ದುಬಾರಿ ಲಸಿಕೆ ದರಪಟ್ಟಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು, ಜನರಿಂದ ಹೆಚ್ಚಿನ ವಸೂಲಿ ಮಾಡಲು ಖಾಸಗಿ ಆಸ್ಪತ್ರೆಯವರೊಂದಿಗೆ ಕೈಜೋಡಿಸಿರುವ ತೇಜಸ್ವಿ ಸೂರ್ಯ ಅವರನ್ನೂ ಬಂಧಿಸಿ' ಎಂದೂ ಪತ್ರದಲ್ಲಿ ಮನವಿ ಮಾಡಿದ್ದಾರೆ.

'ಆರೋಪಿ ಬಾಬು ನನ್ನ ಆಪ್ತನಲ್ಲ'

'ಹಾಸಿಗೆ ದಂಧೆಯಲ್ಲಿ ಬಂಧನಕ್ಕೆ ಒಳಗಾಗಿರುವ ಬಾಬು ನನ್ನ ಆಪ್ತನಲ್ಲ' ಎಂದು ಶಾಸಕ ಸತೀಶ್ ರೆಡ್ಡಿ ಪ್ರತಿಕ್ರಿಯಿಸಿದ್ದಾರೆ. 'ಬೊಮ್ಮನಹಳ್ಳಿಯಲ್ಲಿ ಸಾವಿರಾರು ಮಂದಿ ಪರಿಚಯದವರಿದ್ದಾರೆ. ಅದರಲ್ಲಿ ಆತನೂ ಒಬ್ಬ ಇರಬಹುದು. ಇಂತಹ ನೀಚ ಕೆಲಸವನ್ನು ಎಂದೂ ಬೆಂಬಲಿಸುವುದಿಲ್ಲ. ದಂಧೆಯನ್ನು ಹೊರಗೆ ತಂದಿದ್ದೇ ನಾವು. ಯಾರೇ ತಪ್ಪು ಮಾಡಿರಲಿ, ಅವರು ಶಿಕ್ಷೆ ಅನುಭವಿಸಲಿ. ನನ್ನ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ದಂಧೆಯಲ್ಲಿ ಭಾಗಿಯಾಗಿರುವ ಎಲ್ಲರ ವಿರುದ್ಧ ಕ್ರಮ ಜರುಗಿಸಲಿ' ಎಂದು ಒತ್ತಾಯಿಸಿದ್ದಾರೆ.

ಖಾಸಗಿ ಆಸ್ಪತ್ರೆಗಳಿಗೆ ಹೆಚ್ಚಿನ ಡೋಸ್ ಸಿಕ್ಕಿದ್ದು ಹೇಗೆ: ಹೈಕೋರ್ಟ್ ಪ್ರಶ್ನೆ

ಬೆಂಗಳೂರು: ಕೋವಿಡ್ ಲಸಿಕೆಯು ಸರ್ಕಾರಕ್ಕಿಂತ ಖಾಸಗಿಯವರಿಗೆ ಹೆಚ್ಚು ಡೋಸ್ ಲಭ್ಯವಾಗಿದ್ದು ಹೇಗೆ ಎಂದು ಪ್ರಶ್ನಿಸಿರುವ ಹೈಕೋರ್ಟ್, ನಿಗದಿತ ಶೇ 25ಕ್ಕಿಂತ ಹೆಚ್ಚಿನ ಪ್ರಮಾಣದ ಲಸಿಕೆ ಲಭ್ಯವಾಗದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ತಿಳಿಸಿದೆ.

ಕೋವಿಡ್ ಸಂಬಂಧ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಇದು ಸಮಾನತೆಯ ಹಕ್ಕಿಗೆ ವಿರುದ್ಧ ಅಲ್ಲವೇ' ಎಂದು ಪ್ರಶ್ನಿಸಿತು.

'ಕೇಂದ್ರ ಸರ್ಕಾರದ ಶೇ 50ರ ಕೋಟಾದಲ್ಲಿ ಕರ್ನಾಟಕಕ್ಕೆ 24 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ. ರಾಜ್ಯ ಸರ್ಕಾರ ತನ್ನ ಶೇ 25ರಷ್ಟು ಕೋಟಾದಲ್ಲಿ 15.98 ಲಕ್ಷ ಡೋಸ್ ಖರೀದಿ ಮಾಡಿದೆ. ಖಾಸಗಿ ಆಸ್ಪತ್ರೆಗಳು ತಮ್ಮ ಶೇ 25ರ ಕೋಟಾದಲ್ಲಿ 16.16 ಲಕ್ಷ ಲಸಿಕೆ ಖರೀದಿಸಿವೆ' ಎಂದು ಕೇಂದ್ರ ಸರ್ಕಾರ ಪರ ವಾದಿಸಿದ ಸಾಲಿಸಿಟರ್ ಜನರಲ್ (ಎಎಸ್‌ಜಿ) ಐಶ್ವರ್ಯ ಭಾಟಿ ವಿವರಿಸಿದರು.

'ಖಾಸಗಿಯವರಿಗೆ ಶೇ 25ಕ್ಕಿಂತ ಹೆಚ್ಚಿನ ಡೋಸ್ ಸಿಗದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹಣ ಇದ್ದವರು ಖಾಸಗಿ ಆಸ್ಪತ್ರೆಗಳಲ್ಲಿ ಮೊದಲ ಡೋಸ್ ಪಡೆದು, ಸರ್ಕಾರದಿಂದ ಎರಡನೇ ಡೋಸ್ ಪಡೆಯುತ್ತಾರೆ. ಹಣ ಇಲ್ಲದವರು ಮೊದಲ ಡೋಸ್ ಕೂಡ ಪಡೆಯಲಾಗದ ಸ್ಥಿತಿ ಬರಲಿದೆ' ಎಂದು ಪೀಠ ಹೇಳಿತು.

ಆಮ್ಲಜನಕ ಘಟಕಗಳ ಸ್ಥಾಪನೆಗೆ ಉತ್ತೇಜನ: ಸಚಿವ ಶೆಟ್ಟರ್

ಬೆಂಗಳೂರು: 'ರಾಜ್ಯದಲ್ಲಿ ನೂತನ ಆಮ್ಲಜನಕ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಲು ಕೈಗಾರಿಕಾ ಇಲಾಖೆಯಿಂದ ಉತ್ತೇಜನ ಯೋಜನೆ ಜಾರಿಗೆ ತರಲು ಚಿಂತನೆ ನಡೆದಿದೆ' ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ತಿಳಿಸಿದರು.



ರಾಜ್ಯದಲ್ಲಿನ ಆಮ್ಲಜನಕ ಉತ್ಪಾದನೆ ಹಾಗೂ ಸರಬರಾಜು ಕುರಿತಂತೆ ಹಿರಿಯ ಅಧಿಕಾರಿಗಳ ಜೊತೆ ಬುಧವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಆಮ್ಲಜನಕ ಉತ್ಪಾದನಾ ಘಟಕಗಳನ್ನು ಆರಂಭಿಸಲು ಮುಂದಾಗುವ ಉದ್ಯಮಿಗಳಿಗೆ ಆಕರ್ಷಕ ಉತ್ತೇಜನ ನೀಡಲು ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕೆಲವೇ ದಿನಗಳಲ್ಲಿ ಈ ಬಗ್ಗೆ ವಿವರ ನೀಡಲಾಗುವುದು' ಎಂದರು.

'ಕೇಂದ್ರದೊಂದಿಗೆ ನಡೆಸಿದ ಮಾತುಕತೆಯ ಪರಿಣಾಮ ರಾಜ್ಯಕ್ಕೆ ₹ 1,200 ಟನ್ ಆಮ್ಲಜನಕ ಹಂಚಿಕೆ ಮಾಡಲಾಗಿದೆ. ರಾಜ್ಯದಲ್ಲಿ ಉತ್ಪಾದನೆ ಆಗುವ ಆಮ್ಲಜನಕವನ್ನು ರಾಜ್ಯದಲ್ಲಿಯೇ ಬಳಸಿಕೊಳ್ಳಲು ಕೇಂದ್ರ ಅವಕಾಶ ನೀಡಿದೆ' ಎಂದರು.

ಬಫರ್ ಸ್ಟಾಕ್ ಯೋಜನೆ: 'ಜಿಲ್ಲೆಗಳಲ್ಲಿ ಆಮ್ಲಜನಕ ಬಫರ್ ಸ್ಟಾಕ್ ಸಂಗ್ರಹ ಸಾಮರ್ಥ್ಯ ಹೆಚ್ಚಿಸಲು ಯೋಜನೆ ರೂಪಿಸುವಂತೆ ಸೂಚನೆ ನೀಡಲಾಗಿದೆ. ಪ್ರತಿ ಜಿಲ್ಲೆಗಳಲ್ಲಿ 20 ಟನ್ ಸಂಗ್ರಹ ಸಾಮರ್ಥ್ಯ ಹೆಚ್ಚಿಸಲಾಗಿದೆ. ಕೇಂದ್ರ ಸಹಕಾರದಿಂದ 150 ಟನ್ ದ್ರವೀಕೃತ ಆಮ್ಲಜನಕ ಮಂಗಳೂರು ಬಂದರಿಗೆ ತಲುಪಿದೆ. ಕೇಂದ್ರದ ಸಹಕಾರದಿಂದ ರೈಲುಗಳಲ್ಲಿ ರವಾನೆಯಾಗುತ್ತಿರುವ ಆಮ್ಲಜನಕದಿಂದ ಆಮ್ಲಜನಕ ಪರಿಸ್ಥಿತಿ ಸುಧಾರಿಸುತ್ತಿದೆ' ಎಂದರು.

ನಾಲ್ಕು ಟ್ಯಾಂಕರ್‌ಗಳ ರವಾನೆ: 'ಒಡಿಶಾದ ಕಳಿಂಗಾ ನಗರದಿಂದ ನಾಲ್ಕು ಟ್ಯಾಂಕರ್‌ಗಳು ಬರುವ ನಿರೀಕ್ಷೆ ಇದೆ. ಯಾದಗಿರಿ ಮತ್ತು ಕೋಲಾರದಲ್ಲಿ 500 ದ್ರವೀಕೃತ ಆಮ್ಲಜನಕ ಜನರೇಟರ್ ಕಾರ್ಯಾರಂಭವಾಗಿದೆ. ಕಲಬುರ್ಗಿ ಇಎಸ್‌ಐ ಆಸ್ಪತ್ರೆಯಲ್ಲಿ ಇಂಥ 1,000 ಜನರೇಟರ್ ಪ್ಲಾಂಟ್ ಇದೇ 22ರಿಂದ ಕಾರ್ಯಾರಂಭ ಆಗಿದೆ' ಎಂದರು.



ಡಯಾಲಿಸಿಸ್ ಕೇಂದ್ರವಿದ್ದ ಕಟ್ಟಡದಲ್ಲಿ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆ ಕಾರ್ಯಾರಂಭ ಮಾಡಿದೆ

ಪೊಲೀಸ್ ಠಾಣೆಯಾದ ಡಯಾಲಿಸಿಸ್ ಕಟ್ಟಡ !


ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಆಸ್ಪತ್ರೆಗಳಲ್ಲದ ಕಟ್ಟಡಗಳನ್ನೂ ಆರೈಕೆ ಕೇಂದ್ರಗಳಾಗಿ ಪರಿವರ್ತಿಸಲಾಗುತ್ತಿದೆ. ಆದರೆ, ಬಡವರಿಗೆ ಅಗ್ಗದ ದರದಲ್ಲಿ ಚಿಕಿತ್ಸೆ ನೀಡುವ ಉದ್ದೇಶದಿಂದ ನಿರ್ಮಿಸಲಾಗಿದ್ದ ಡಯಾಲಿಸಿಸ್ ಕಟ್ಟಡವನ್ನು ಪೊಲೀಸ್ ಠಾಣೆಯಾಗಿ ಪರಿವರ್ತಿಸಲಾಗಿದೆ !

ಕಾಂಗ್ರೆಸ್‌ನ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ನಾಗರಭಾವಿ ಬಿಡಿಎ ಕಾಂಪ್ಲೆಕ್ಸ್ ಸಮೀಪದ ರಾಮಕೃಷ್ಣ ಹೆಗಡೆ ಉದ್ಯಾನ ಬಳಿ ಈ ಕಟ್ಟಡವನ್ನು ನಿರ್ಮಿಸಲಾಗಿತ್ತು. ಆದರೆ, ಡಯಾಲಿಸಿಸ್ ಪರೀಕ್ಷೆ ಮತ್ತು ಚಿಕಿತ್ಸೆ ನೀಡಲು ಬೇಕಾದ ಉಪಕರಣಗಳನ್ನು ಅಳವಡಿಸದೇ ಇದ್ದುದರಿಂದ ಕಟ್ಟಡ ಖಾಲಿ ಬಿದ್ದಿತ್ತು.

ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ ಮೇ 13ರಂದು ವರದಿ ಪ್ರಕಟವಾಗಿತ್ತು. ವರದಿ ಪ್ರಕಟವಾದ ನಾಲ್ಕೈದು ದಿನಗಳಲ್ಲಿಯೇ ಕಟ್ಟಡಕ್ಕೆ ಅನ್ನಪೂರ್ಣೇಶ್ವರಿ ಪೊಲೀಸ್ ಠಾಣೆ ಎಂದು ನಾಮಫಲಕ ಬರೆಯಿಸಿ ಹಾಕಲಾಗಿದೆ. ರಿಂಗ್‌ರಸ್ತೆ ಬದಿಯಲ್ಲಿದ್ದ ಠಾಣೆಯನ್ನು ಈ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

'ಕೋವಿಡ್ ಪರೀಕ್ಷೆಗೆ ದೂರದ ಮಲ್ಲತ್ತಹಳ್ಳಿ ಬಳಿಯ ಕೆಂಗುಂಟೆ ಸಾರ್ವಜನಿಕ ಆರೋಗ್ಯ ಕೇಂದ್ರಕ್ಕೆ ಹೋಗಬೇಕಾಗಿದೆ. ಸಿ.ಟಿ.ಸ್ಕ್ಯಾನ್‌ಗಾಗಿ ವಿಕ್ಟೋರಿಯಾ, ಕೆ.ಸಿ.ಜನರಲ್ ಮತ್ತು ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಪರೀಕ್ಷೆ ಮಾಡಿಸಲು ಆರ್ಥಿಕವಾಗಿ ನಮಗೆ ಕಷ್ಟವಾಗುತ್ತದೆ. ಈ ಡಯಾಲಿಸಿಸ್ ಕೇಂದ್ರದಲ್ಲಿಯೇ ಸಿ.ಟಿ.ಸ್ಕ್ಯಾನ್‌ಗೆ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ' ಎಂದು ಸ್ಥಳೀಯರು ಹೇಳುತ್ತಾರೆ.

'ಆಸ್ಪತ್ರೆ, ಕೋವಿಡ್ ಆರೈಕೆ ಕೇಂದ್ರ ಮಾಡುವ ಬದಲು ಪೊಲೀಸ್ ಠಾಣೆ ಮಾಡುತ್ತಿದ್ದಾರೆ' ಎಂದರು.



ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಪಂಚಾಯತ್‌ರಾಜ್ ಸಿಬ್ಬಂದಿ ಕೊರೊನಾ ಯೋಧರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಿಬ್ಬಂದಿಯನ್ನು ಕೊರೊನಾ ಯೋಧರು ಎಂದು ಪರಿಗಣಿಸಿ, ಕಂದಾಯ ಇಲಾಖೆ ಸಿಬ್ಬಂದಿ ನೀಡುತ್ತಿರುವ ಸೌಲಭ್ಯವನ್ನು ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಬೆಳಗಾವಿ, ಬಳ್ಳಾರಿ, ಶಿವಮೊಗ್ಗ ಮತ್ತು ಮೈಸೂರು ಜಿಲ್ಲೆಗಳ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಿಡಿಒಗಳೊಂದಿಗೆ ಬುಧವಾರ ಸಂವಾದ ನಡೆಸಿದ ಸಂದರ್ಭ ವಿವಿಧ ಪಂಚಾಯಿತಿಗಳ ಅಧ್ಯಕ್ಷರ ಮನವಿಗೆ ಸ್ಪಂದಿಸಿ ಈ ಭರವಸೆ ನೀಡಿದರು.

ಕೋವಿಡ್ ಎರಡನೇ ಅಲೆ ಮೊದಲಿಗಿಂತ ವಿಭಿನ್ನವಾಗಿದೆ. ಹೆಚ್ಚು ಹಾನಿಕಾರಕವಾಗಿದೆ. ಸೋಂಕು ತ್ವರಿತವಾಗಿ ವ್ಯಾಪಿಸುತ್ತಿದ್ದು, ತುರ್ತು ನಿವಾರಣಾ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವಾಗಿದೆ ಯಡಿಯೂರಪ್ಪ ಹೇಳಿದರು.

'ಕಳೆದ ವಾರ ಘೋಷಿಸಿದ ಪ್ಯಾಕೇಜ್‌ನಲ್ಲಿ ಎಲ್ಲ ಗ್ರಾಮ ಪಂಚಾಯತ್‌ಗಳಿಗೂ ಎಸ್‌ಡಿಆರ್‌ಎಫ್ ನಿಧಿಯಿಂದ ₹50 ಸಾವಿರಗಳನ್ನು ಬಿಡುಗಡೆ ಮಾಡಲು ಆದೇಶಿಸಲಾಗಿದೆ. ಸದ್ಯದಲ್ಲಿಯೇ ಹಣ ನಿಮ್ಮ ಕೈಗೆ ಸೇರಲಿದೆ' ಎಂದರು.

14 ನೇ ಹಣಕಾಸು ಆಯೋಗದ ಅನುದಾನದ ಉಳಿಕೆ ಹಣ, 15 ನೇ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನ ಮತ್ತು ಗ್ರಾಮ ಪಂಚಾಯತ್‌ನ ಸ್ವಂತ ಸಂಪನ್ಮೂಲವನ್ನು ಈ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ ಎಂದರು.

ಗ್ರಾಮಗಳಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಸಂತೆ, ಜಾತ್ರೆ ಮತ್ತಿತರ ಕಾರ್ಯಕ್ರಮಗಳ ಮೇಲೆ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಸೋಂಕಿತರಿಗೆ ನೆರವಾಗಲು ಗ್ರಾಮ ಪಂಚಾಯತ್‌ಗಳಲ್ಲಿ ಹೆಲ್ಪ್ ಡೆಸ್ಕ್ ಮತ್ತು ಸಹಾಯವಾಣಿಗಳನ್ನು ಆರಂಭಿಸಬೇಕು. ಕಾರ್ಯಪಡೆಗಳ ಜತೆ ಕಾರ್ಯ ನಿರ್ವಹಿಸಲು ಸ್ವಯಂ ಸೇವಾ ಸಂಸ್ಥೆಗಳು ಮತ್ತು ದಾನಿಗಳ ನೆರವು ಪಡೆಯಬಹುದು ಎಂದು ಯಡಿಯೂರಪ್ಪ ತಿಳಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಮನೆಗಳು ಚಿಕ್ಕದಾಗಿರುವ ಕುಟುಂಬಗಳಲ್ಲಿ ಸೋಂಕು ಕಾಣಿಸಿಕೊಂಡರೆ, ಸೋಂಕಿತರನ್ನು ಕಡ್ಡಾಯವಾಗಿ ಕೋವಿಡ್ ಕೇರ್ ಸೆಂಟರ್‌ಗಳಿಗೆ ದಾಖಲಿಸುವಂತೆಯೂ ಸಲಹೆ ನೀಡಿದರು.

ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ, ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಗೃಹ ಸಚಿವ ಬಸವರಾಜ ಬೊಮ್ಮಾಯಿ ಇದ್ದರು.

ಸೋಂಕಿತರ ಮನೆ ಮುಂದೆ ಕೆಂಪು ಪಟ್ಟಿ

ವಿರೋಧಕ್ಕೆ ಮಣಿದು ಈ ಹಿಂದೆ ಕೈಬಿಟ್ಟಿದ್ದ ನಿಯಮ ಮತ್ತೆ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸಂತ್ರಸ್ತರು ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದುಕೊಂಡು ಆರೈಕೆ ಪಡೆಯುತ್ತಿರುವ ಮನೆಗಳ ಮುಂದೆ 'ಅಪಾಯ' ಎಂಬ ಬರಹವಿರುವ ಕೆಂಪು ಪಟ್ಟಿಯನ್ನು ಪಾಲಿಕೆ ಅಳವಡಿಸುತ್ತಿದೆ.

ಸೋಂಕಿತರು ಇರುವ ಮನೆಯನ್ನು ಈ ರೀತಿ ಪ್ರತ್ಯೇಕಿಸಿ ಗುರುತಿಸುವುದಕ್ಕೆ ವಿರೋಧ ವ್ಯಕ್ತವಾಗಿತ್ತು ಹಾಗೂ ಇದು ಸೋಂಕಿತರ ಮನೆಯವರ ಮೇಲೆ ಮಾನಸಿಕವಾಗಿ ದುಷ್ಪರಿಣಾಮ ಬೀರಲಿದೆ ಎಂಬ ಅಭಿಪ್ರಾಯವನ್ನು ತಜ್ಞರು ನೀಡಿದ್ದರು. ಬಿಬಿಎಂಪಿ ಕೌನ್ಸಿಲ್ ಸಭೆಗಳಲ್ಲೂ ಅನೇಕ ಪಾಲಿಕೆ ಸದಸ್ಯರು ಇದನ್ನು ವಿರೋಧಿಸಿದ್ದರು. ಆ ಬಳಿಕ ಬಿಬಿಎಂಪಿ ಈ ನಿಯಮವನ್ನು ಕೈಬಿಟ್ಟಿತ್ತು.

ಮೊದಲ ಅಲೆಯಲ್ಲಿ ಕೋವಿಡ್ ಪತ್ತೆಯಾದ ಮನೆಯ ಆಸುಪಾಸಿನ ರಸ್ತೆಗಳೂ ಸೇರಿ ಒಟ್ಟು 100 ಮೀ ವ್ಯಾಪ್ತಿಯ ಪ್ರದೇಶದಲ್ಲಿ ಜನರ ಸಂಚಾರ ನಿರ್ಬಂಧಿಸಿ ಸಂಪೂರ್ಣ ಸೀಲ್‌ಡೌನ್ ಮಾಡಲಾಗಿತ್ತು. ಸೋಂಕು ಪತ್ತೆಯಾದವರು ಮಾತ್ರವಲ್ಲ; ಆ ಪ್ರದೇಶದ ಇತರ ನಿವಾಸಿಗಳೂ ಈ ನಿರ್ಬಂಧಿತ ಪ್ರದೇಶದಿಂದ ಹೊರಗಡೆ ಹೋಗದಂತೆ ನೋಡಿಕೊಳ್ಳಲಾಗಿತ್ತು. ಈ ಸಲುವಾಗಿ ಅಧಿಕಾರಿಗಳ ತಂಡವನ್ನು ರಚಿಸಲಾಗಿತ್ತು. ಈ ಪ್ರದೇಶದ ಅಷ್ಟೂ ಮನೆಗಳಿಗೆ ಬಿಬಿಎಂಪಿ ವತಿಯಿಂದಲೇ ಆಹಾರ ಮತ್ತಿತರ ಅವಶ್ಯಕ ಸಾಮಗ್ರಿಗಳನ್ನು ಪೂರೈಸಲಾಗುತ್ತಿತ್ತು.

ನಗರದಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಳವಾದಂತೆ ಸೀಲ್‌ಡೌನ್ ಪ್ರಕ್ರಿಯೆಯನ್ನು ಮನೆಗೆ ಮಾತ್ರ ಸೀಮಿತ ಮಾಡಲಾಗಿತ್ತು. ಈ ಪ್ರಕ್ರಿಯೆಯಿಂದ ಸೋಂಕಿತರನ್ನು ಸಮಾಜದಲ್ಲಿ ಅನುಮಾನದಿಂದ ಕಾಣಲಾಗುತ್ತಿದೆ ಎಂಬ ಟೀಕೆಗಳು ಬಂದ ಬಳಿಕ ಬಿಬಿಎಂಪಿ ಈ ಪ್ರಕ್ರಿಯೆಯನ್ನು ಸಂಪೂರ್ಣ ಕೈಬಿಟ್ಟಿತ್ತು.

ಎರಡನೇ ಅಲೆ ಆರಂಭವಾದಾಗ ಸೋಂಕು ಪತ್ತೆಯಾದವರ ಕೈಗೆ ಮುದ್ರೆ ಹಾಕಲು ಬಿಬಿಎಂಪಿ ಆರಂಭಿಸಿತು. ಆದರೆ, ಸೋಂಕು ಪತ್ತೆ ಪ್ರಮಾಣ 20201ರ ಮಾರ್ಚ್ ಬಳಿಕ ತೀವ್ರತರದಲ್ಲಿ ಹೆಚ್ಚಳ ಕಂಡಿದ್ದರಿಂದ ಇದನ್ನೂ ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಾಗಿರಲಿಲ್ಲ. ನಗರದಲ್ಲಿ ನಿತ್ಯವೂ 25 ಸಾವಿರಕ್ಕೂ ಅಧಿಕ ಮಂದಿಯಲ್ಲಿ ಸೋಂಕು ಕಾಣಿಸಿಕೊಳ್ಳಲು ಆರಂಭವಾದಾಗ ಪ್ರತಿಯೊಬ್ಬರನ್ನು ಪತ್ತೆಹಚ್ಚಿ ಕೈಗೆ ಮುದ್ರೆ ಹಾಕುವಷ್ಟು ಸಿಬ್ಬಂದಿ ಬಲವೂ ಬಿಬಿಎಂಪಿ ಬಳಿ ಇರಲಿಲ್ಲ. ಈಗ ಕೋವಿಡ್ ಪ್ರಕರಣಗಳು ಸ್ವಲ್ಪ ಇಳಿಮುಖವಾಗುತ್ತಿದ್ದಂತೆಯೇ ಮತ್ತೆ ಸೋಂಕಿತರು ಇರುವ ಮನೆಗಳ ಮುಂದೆ ಕೆಂಪು ಪಟ್ಟಿ ಅಳವಡಿಸಿ ಗುರುತಿಸಲಾಗುತ್ತಿದೆ.

'ಸೋಂಕು ಇದ್ದರೂ ಕೆಲವರು ಹೊರಗಡೆ ಅಡ್ಡಾಡುತ್ತಿದ್ದಾರೆ ಎಂಬ ದೂರುಗಳಿವೆ. ಅಂತಹವರ ಮನೆ ಮುಂದೆ ಕೆಂಪು ಪಟ್ಟಿ ಅಳವಡಿಸಿದರೆ ಗುರುತಿಸುವುದು ಸುಲಭವಾಗಲಿದೆ. ಕೋವಿಡ್ ನಿಯಂತ್ರಣಕ್ಕೆ ಇಂತಹ ಕ್ರಮ ಅಗತ್ಯ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

'ಈ ಹಿಂದೆ ಸೀಲ್‌ಡೌನ್ ಮಾಡುವ ಕುರಿತ ಆದೇಶವನ್ನು ಬಿಬಿಎಂಪಿ ಹಿಂಪಡೆದಿತ್ತು. ಈಗ ಸೋಂಕಿತರ ಮನೆ ಮುಂದೆ ಕೆಂಪು ಪಟ್ಟಿ ಅಳವಡಿಕೆಗೆ ಹೊಸತಾಗಿ ಆದೇಶ ಹೊರಡಿಸಿಲ್ಲ. ಸದ್ಯಕ್ಕೆ ಹಿರಿಯ ಅಧಿಕಾರಿಗಳ ಮೌಖಿಕ ಸೂಚನೆ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಅವರು ತಿಳಿಸಿದರು.



ಬಿಟಿಎಂ ಬಡಾವಣೆಯಲ್ಲಿ ಕೋವಿಡ್ ಸೋಂಕಿತರು ಇರುವ ವಸತಿ ಕಟ್ಟಡವೊಂದಕ್ಕೆ ಬಿಬಿಎಂಪಿ ಸಿಬ್ಬಂದಿ ಕೆಂಪು ಪಟ್ಟಿ ಅಳವಡಿಸಿರುವುದು– ಪ್ರಜಾವಾಣಿ ಚಿತ್ರ

ಮುಂಚೂಣಿ ಕೆಲಸಗಾರರಿಗೆ ಲಸಿಕೆ ಹಾಕಲು 150 ಸಂಚಾರಿ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸದ್ಯಕ್ಕೆ 45 ವರ್ಷ ಮತ್ತು ಮೇಲ್ಪಟ್ಟ ವಯೋಮಾನದವರಿಗೆ ಮಾತ್ರ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ (ಪಿಎಚ್‌ಸಿ) ಕೋವಿಡ್ ಲಸಿಕೆ ನೀಡಲಾಗುತ್ತದೆ. 18 ವರ್ಷಗಳಿಂದ 44 ವರ್ಷಗಳ ಒಳಗಿನ ಮುಂಚೂಣಿ ಕೆಲಸಗಾರರಿಗೆ ಸಂಚಾರಿ ತಂಡಗಳು ಲಸಿಕೆ ಹಾಕಲಿವೆ.

ರಾಜ್ಯ ಸರ್ಕಾರ ಕೊರೋನಾ ನಿಯಂತ್ರಣ ಕಾರ್ಯದಲ್ಲಿ ಮುಂಚೂಣಿ ಕಾರ್ಯಕರ್ತರು ಎಂದು ಗುರುತಿಸಲ್ಪಟ್ಟ ಫಲಾನುಭವಿಗಳಿಗೆ ಲಸಿಕೆ ಹಾಕುವ ಬಗ್ಗೆ ಕರ್ನಾಟಕ ಸರ್ಕಾರವು ಹೊರಡಿಸಿರುವ ಆದೇಶವನ್ನು ಗಮನದಲ್ಲಿಟ್ಟುಕೊಂಡು, ಬಿಬಿಎಂಪಿ ವಿವಿಧ ಗುಂಪುಗಳ ಜನರಿಗೆ ಲಸಿಕೆ ಹಾಕುವ ಕಾರ್ಯಕ್ರಮವನ್ನು ಪುನರ್ ರೂಪಿಸಿದೆ.

45 ವರ್ಷ ಮತ್ತು ಮೇಲ್ಪಟ್ಟ ವಯೋಮಾನದ ಎಲ್ಲ ಫಲಾನುಭವಿಗಳು ಕೋವಿಡ್ ಲಸಿಕೆ ಪಡೆಯಲು ಪಿಎಚ್‌ಸಿಗಳಿಗೆ ತೆರಳಬೇಕು. ಕೇಂದ್ರ ಸರ್ಕಾರವು ಸರ್ಕಾರವು ವ್ಯಾಖ್ಯಾನಿಸಿರುವ ಎಲ್ಲ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕೆಲಸಗಾರರಿಗೂ ಇದು ಅನ್ವಯವಾಗಲಿದೆ. ಆದರೆ, 18-44 ವರ್ಷ ವಯೋಮಾನದ ಮೂಂಚೂಣಿ ಕೆಲಸಗಾರರಿಗೆ ಲಸಿಕೆ ಹಾಕಲು 8 ವಲಯಗಳಲ್ಲಿ 150 ಸಂಚಾರಿ ಲಸಿಕಾಂಡಗಳನ್ನು ಬಿಬಿಎಂಪಿ ರಚಿಸಿದೆ.

ಕೇಂದ್ರವು ಗುರುತಿಸಿರುವ ಮುಂಚೂಣಿ ಕೆಲಸಗಾರರ ವರ್ಗದವರನ್ನು ಹೊರತು ಪಡಿಸಿ ಯಾವುದೇ ಕ್ಷೇತ್ರದಲ್ಲಿರುವ 18ರಿಂದ 44 ವರ್ಷದೊಳಗಿನವರಿಗೆ ಸದ್ಯದಲ್ಲಿ ಲಸಿಕೆ ನೀಡುವ ಕಾರ್ಯವನ್ನು ಹಮ್ಮಿಕೊಳ್ಳಲಾಗುವುದಿಲ್ಲ ಎಂದು ಬಿಬಿಎಂಪಿ ಸ್ಪಷ್ಟಪಡಿಸಿದೆ.


ಹೆಚ್ಚುವರಿಯಾಗಿ, ಲಸಿಕೆ ಲಭ್ಯತೆಯ ಆಧಾರದ ಮೇಲೆ ರಾಜ್ಯ ಸರ್ಕಾರದ ಸೂಚನೆ ಅಥವಾ ಆದೇಶದ ಆಧಾರದಲ್ಲಿ ಆದ್ಯತೆಯಗುಂಪು ಎಂದು ನಮೂದಿಸಲಾದ ವರ್ಗಗಳಲ್ಲಿ ಬರುವವರಿಗೆ ಮುಂದಿನ ದಿನಗಳಲ್ಲಿ ಲಸಿಕಾ ಕಾರ್ಯ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಪ್ರಕಟಣೆಯಲ್ಲಿ ತಿಳಿಸಿದೆ.

ಲಸಿಕೆ ಪಡೆಯಲಿರುವ ಮುಂಚೂಣಿ ಕೆಲಸಗಾರರು

- ಅಂಗವೈಕಲ್ಯ ಇರುವ (ಮಾನಸಿಕ ಅಸ್ವಸ್ಥತೆ ಸೇರಿದಂತೆ) ಫಲಾನುಭವಿಗಳು ಮತ್ತು ಒಬ್ಬ ಆರೈಕೆದಾರ
- ಕೈದಿಗಳು, ಚಿತಾಗಾರ/ ಸ್ಮಶಾನಗಳ ಸಿಬ್ಬಂದಿ ಹಾಗೂ ಸ್ವಸಹಾಯಕರು
- ಆರೋಗ್ಯ ಕಾರ್ಯಕರ್ತರ ಕುಟುಂಬಸ್ಥರು
- ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಂಡ ಶಿಕ್ಷಕರು
- ಸರ್ಕಾರಿ ಸಾರಿಗೆ ಸಿಬ್ಬಂದಿ, ಆಟೊ ಮತ್ತು ಕ್ಯಾಬ್ ಚಾಲಕರು
- ವಿದ್ಯುತ್ ಮತ್ತು ನೀರು ಸರಬರಾಜು ಸಿಬ್ಬಂದಿ
- ಅಂಚೆ ಇಲಾಖೆಯ ಸಿಬ್ಬಂದಿ
- ಬೀದಿ ಬದಿ ವರ್ತಕರು, ಭದ್ರತೆ ಮತ್ತು ಕಚೇರಿಗಳ ಸ್ವಚ್ಛತಾ ಸಿಬ್ಬಂದಿ
- ಮಾಧ್ಯಮದವರು, ನ್ಯಾಯಾಂಗ ಅಧಿಕಾರಿಗಳು
- ವಯೋವೃದ್ಧರು /ತೀವ್ರ ಅನಾರೋಗ್ಯದಿಂದ ಬಳಲುವವರ ಆರೈಕೆದಾರರು
- ಮಕ್ಕಳ ಸಂರಕ್ಷಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
- ಆಸ್ಪತ್ರೆಗಳಿಗೆ ಸರಕು ಸರಬರಾಜು ಮಾಡುವ ವ್ಯಕ್ತಿಗಳು
- ತೈಲ ಕೈಗಾರಿಕೆ ಮತ್ತು ಅಡುಗೆ ಅನಿಲ ಸರಬರಾಜು ಮಾಡುವವರು
- ಔಷಧ ತಯಾರಿಸುವ ಕಂಪನಿಯ ಸಿಬ್ಬಂದಿ, ಆಮ್ಲಜನಕ, ಔಷಧ, ವೈದ್ಯಕೀಯ ಉಪಕರಣ ಪೂರೈಕೆ ಸಿಬ್ಬಂದಿ
- ಅಧಿಕೃತ ಗುರುತಿನ ಚೀಟಿ ಹೊಂದಿರದ ಫಲಾನುಭವಿಗಳು (ವೃದ್ಧಾಶ್ರಮ ವಾಸಿಗಳು, ನಿರ್ಗತಿಕರು)
- ಭಾರತೀಯ ಆಹಾರ ನಿಗಮದ ಸಿಬ್ಬಂದಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕೆಲಸಗಾರರು.

ಕೋವಿಡ್ ಮೂಲದ ಪತ್ತೆಗೆ ಬೈಡನ್ ಸೂಚನೆ

ವಾಷಿಂಗ್ಟನ್ (ಎಪಿ): ಕೋವಿಡ್–19 ಸಾಂಕ್ರಾಮಿಕ ಸೋಂಕಿತ ಪ್ರಾಣಿಯೊಂದಿಗಿನ ಮಾನವ ಸಂಪರ್ಕದಿಂದ ಅಥವಾ ಪ್ರಯೋಗಾಲಯದೊಳಗಿನ ಅವಘಡದಿಂದ ಹೊರಹೊಮ್ಮಿದೆಯೇ ಎಂದು ತೀರ್ಮಾನಿಸಲು ಸಾಕಷ್ಟು ಪುರಾವೆಗಳಿಲ್ಲ. ಆದ್ದರಿಂದ ಈ ಸೋಂಕಿನ ಮೂಲದ ಬಗ್ಗೆ ತನಿಖೆ ನಡೆಸಲು ಮತ್ತಷ್ಟು ಹೆಚ್ಚು ಪ್ರಯತ್ನ ಮಾಡಬೇಕು ಎಂದು ಅಧ್ಯಕ್ಷ ಜೋ ಬೈಡನ್‌ಅವರು ಅಮೆರಿಕದ ಗುಪ್ತಚರ ಇಲಾಖೆಗೆ ಬುಧವಾರ ಹೇಳಿದ್ದಾರೆ.



ಜೋ ಬೈಡನ್

ಗುಪ್ತಚರ ಇಲಾಖೆಯ ಹೆಚ್ಚಿನವರು ಯಾವುದೇ ನಿರ್ಣಯ ತೆಗೆದುಕೊಳ್ಳಲು ಸಾಕಷ್ಟು ಮಾಹಿತಿ ಇದೆ ಎಂಬುದನ್ನು ನಂಬುವುದಿಲ್ಲ. ಆದ್ದರಿಂದ ಸೂಕ್ತ ತನಿಖೆಯ ಅಗತ್ಯವಿದೆ. ಅಮೆರಿಕದ ರಾಷ್ಟ್ರೀಯ ಪ್ರಯೋಗಾಲಯಗಳು ಸಹ ತನಿಖೆಗೆ ಸಹಕಾರ ನೀಡಬೇಕು. ಕೋವಿಡ್ ಸಾಂಕ್ರಾಮಿಕದ ಮೂಲದ ಬಗ್ಗೆ ನಡೆಯುವ ಅಂತರರಾಷ್ಟ್ರೀಯ ತನಿಖೆಗಳಿಗೆ ಚೀನಾ ಸಹಕರಿಸಬೇಕು ಎಂದು ಅವರು ಹೇಳಿದ್ದಾರೆ.

ತೊಂಬತ್ತು ದಿನಗಳ ಒಳಗಾಗಿ ಗುಪ್ತಚರ ಇಲಾಖೆ ವರದಿ ನೀಡಬೇಕು ಎಂದೂ ಬೈಡನ್ ಸೂಚಿಸಿದ್ದಾರೆ.

ಕಾಚರನಹಳ್ಳಿಯಲ್ಲಿ 60 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಪ್ಪು ಶಿಲೀಂಧ್ರ ಹಾಗೂ ಬಿಳಿ ಶಿಲೀಂಧ್ರ ರೋಗಿಗಳಿಗೆ ಎಲ್ಲ ಸರ್ಕಾರಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ ಹಾಗೂ ಔಷಧಿಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದರು.

ಸರ್ವಜ್ಞನಗರ ಕ್ಷೇತ್ರ ವ್ಯಾಪ್ತಿಯ ಕಾಚರಕನಹಳ್ಳಿಯ ಸೇಂಟ್ ಥಾಮಸ್ ಟೌನ್ ಇಂಡಿಯಾ ಕ್ಯಾಂಪಸ್ ಕ್ರೂಡ್‌'ನಲ್ಲಿ ಕೊರೊನಾ ಸೊಂಕಿತರ ಚಿಕಿತ್ಸೆಗಾಗಿ ಸಜ್ಜುಗೊಳಿಸಲಾದ 60 ಬೆಡ್‌ಗಳ ಕೋವಿಡ್ ಆರೈಕೆ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು.

'ಕ್ಷೇತ್ರದಲ್ಲಿ ಕೋವಿಡ್ ರೋಗಿಗಳಿಗೆ ವೈದ್ಯಕೀಯ ನೆರವು ನೀಡಲು 60 ಹಾಸಿಗೆಗಳ ಕೇಂದ್ರವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ರೂಪಿಸಲಾಗಿದೆ. ಟ್ರಯಾಜ್ ಸೌಕರ್ಯ, ಆಮ್ಲಜನಕ ವ್ಯವಸ್ಥೆ ಹಾಗೂ ಕೋವಿಡ್ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಪೌಷ್ಟಿಕ ಆಹಾರ ಸರಬರಾಜು ಸೌಲಭ್ಯಗಳನ್ನು ಈ ಕೇಂದ್ರ ಹೊಂದಿದೆ. ರೋಗಿಗಳ ಮೇಲ್ವಿಚಾರಣೆಗೆ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಲಾಗಿದೆ' ಎಂದರು.



ಕೇಂದ್ರವನ್ನು ಸಚಿವ ವಿ. ಸೋಮಣ್ಣ ಉದ್ಘಾಟಿಸಿದರು. ಸಂಸದ ಪಿ.ಸಿ ಮೋಹನ್, ಶಾಸಕ ಕೆ.ಜೆ.ಜಾರ್ಜ್, ಪಾಲಿಕೆಯ ಮುಖ್ಯ ಆಯುಕ್ತ ಗೌರವ್ ಗುಪ್ತ, ಬಿಜೆಪಿ ಮುಖಂಡ ಪದ್ಮನಾಭ ರೆಡ್ಡಿ ಇದ್ದರು.

ಗರ್ಭದಿಂದ ಜಾರಿ ಮಗು ಸಾವು: ವೈದ್ಯರ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಮಂಡ್ಯ: ನಗರದ ಮಿಮ್ಸ್ ಆಸ್ಪತ್ರೆಯ ಹೆರಿಗೆ ವಾರ್ಡ್‌ನ ಬಾಗಿಲಲ್ಲೇ ಗರ್ಭಿಣಿಯೊಬ್ಬರಿಗೆ ಬುಧವಾರ ಹೆರಿಗೆ ಆಗಿದ್ದು, ಗರ್ಭದಿಂದ ಜಾರಿ ನೆಲಕ್ಕೆ ಬಿದ್ದ ಮಗು ಮೃತಪಟ್ಟಿದೆ.

ಕೋವಿಡ್ ಪರೀಕ್ಷೆಯ ನೆಪದಿಂದ ಗರ್ಭಿಣಿಯನ್ನು ಸರಿಯಾದ ಸಮಯಕ್ಕೆ ಆಸ್ಪತ್ರೆಗೆ ದಾಖಲಿಸಿಕೊಳ್ಳದೇ ವೈದ್ಯರು ನಿರ್ಲಕ್ಷ್ಯ ತೋರಿದ್ದಾಗಿ ಮಹಿಳೆಯ ಸಂಬಂಧಿಕರು ಆರೋಪಿಸಿದ್ದಾರೆ.

ಇಸ್ಮಾಯಿಲ್ ಹಾಗೂ ಸೋನು ದಂಪತಿ ಬುಧವಾರ ಬೆಳಿಗ್ಗೆ ಆಸ್ಪತ್ರೆಗೆ ಬಂದಿದ್ದರು. ಹೆರಿಗೆ ನೋವು ಕಾಣಿಸಿಕೊಂಡರೂ ಕೋವಿಡ್ ಪರೀಕ್ಷೆಯಾಗಿಲ್ಲ ಎನ್ನುವ ಕಾರಣಕ್ಕೆ ಗರ್ಭಿಣಿಯನ್ನು ಆಸ್ಪತ್ರೆಗೆ ದಾಖಲಿಸಿಕೊಂಡಿಲ್ಲ. ರ್‍ಯಾಪಿಡ್ ಪರೀಕ್ಷೆ ನಡೆಸಲೂ ಸಿಬ್ಬಂದಿ ತಡಮಾಡಿದ್ದಾರೆ. ಈ ಸಂದರ್ಭದಲ್ಲಿ ವಾರ್ಡ್ ಬಾಗಿಲಲ್ಲೇ ಕಾದುನಿಂತಿದ್ದ ಮಹಿಳೆಯ ಗರ್ಭದಿಂದ ಮಗು ಜಾರಿ ಬಿದ್ದಿದೆ. ಘಟನೆಯ ನಂತರ ತಾಯಿಯನ್ನು ಆಸ್ಪತ್ರೆಗೆ ದಾಖಲು ಮಾಡಿಕೊಳ್ಳಲಾಯಿತು.

'ರ್‍ಯಾಪಿಡ್ ಪರೀಕ್ಷೆಯಾಗಿ ವರದಿ ನೆಗೆಟಿವ್ ಬಂದಾದ ಮೇಲೂ ದಾಖಲು ಮಾಡಿಕೊಳ್ಳಲು ಸಿಬ್ಬಂದಿ 2 ಗಂಟೆ ತಡ ಮಾಡಿದರು. ಕಿವಿಯ ಓಲೆ ತೆಗೆಯುವವರೆಗೂ ಒಳಗೆ ಬಿಡುವುದಿಲ್ಲ ಎಂದು ತಾಕೀತು ಮಾಡಿದರು. ಗರ್ಭಿಣಿಯು ಓಲೆ ಬಿಚ್ಚುವಾಗಲೇ ನಮ್ಮ ಕಣ್ಣಮುಂದೆಯೇ ಮಗು ಕೆಳಗೆ ಬಿದ್ದು ಸಾವನ್ನಪ್ಪಿತು. ಮಿಮ್ಸ್ ವೈದ್ಯರಿಗೆ ಮಾನವೀಯತೆ ಇಲ್ಲ' ಎಂದು ಗರ್ಭಿಣಿಯ ಸಂಬಂಧಿ ಶಫಿ ಆಕ್ರೋಶ ವ್ಯಕ್ತಪಡಿಸಿದರು.

ಮಗುವಿನ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಮಹಿಳೆಯ ಪೋಷಕರು, ಸಂಬಂಧಿಕರು ಮಿಮ್ಸ್ ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಿದರು. ಕೆಲಕಾಲ ಆಸ್ಪತ್ರೆ ಮುಂದೆ ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿತ್ತು. ಪೊಲೀಸರು ಮಧ್ಯಪ್ರವೇಶಿಸಿ ತಿಳಿಗೊಳಿಸಿದರು.

'ಸೂಕ್ತ ಸಮಯದಲ್ಲಿ ಗರ್ಭಿಣಿಯನ್ನು ಪರೀಕ್ಷೆ ಮಾಡಲಾಗಿದೆ. ಸ್ಕ್ಯಾನಿಂಗ್ ಮಾಡಿದಾಗ ಗರ್ಭದಲ್ಲೇ ಮಗು ಮೃತಪಟ್ಟಿರುವುದು ಗೊತ್ತಾಗಿದೆ. ಆಸ್ಪತ್ರೆಗೆ ದಾಖಲಾದ ನಂತರ ಕಿವಿಯೋಲೆ ಬಿಚ್ಚುವುದಾಗಿ ಗರ್ಭಿಣಿ ತಾನಾಗಿಯೇ ಹೊರಗೆ ಬಂದಿದ್ದಾರೆ. ಆ ವೇಳೆ ಹೆರಿಗೆಯಾಗಿದೆ' ಎಂದು ಮಿಮ್ಸ್ ನಿರ್ದೇಶಕ ಡಾ.ಎಂ.ಆರ್.ಹರೀಶ್ ಸ್ಪಷ್ಟನೆ ನೀಡಿದರು.

'ಜಲಾಶಯ ನಿರ್ಮಿಸಲು ಬಿಡಲ್ಲ'

ಚೆನ್ನೈ (ಪಿಟಿಐ): 'ಕರ್ನಾಟಕದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಬಳಿ ಉದ್ದೇಶಿರುವ ಜಲಾಶಯ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ. ಈ ನಿಟ್ಟಿನಲ್ಲಿ ವಕೀಲರೊಂದಿಗೆ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ತಮಿಳುನಾಡು ಜಲ ಸಂಪನ್ಮೂಲ ಸಚಿವ ದೊರೈಮುರುಗನ್ ಬುಧವಾರ ತಿಳಿಸಿದರು.

ಮೇಕೆದಾಟು ಬಳಿ ಜಲಾಶಯ ನಿರ್ಮಿಸಲು ಕರ್ನಾಟಕ ಸರ್ಕಾರ ಸಿದ್ಧತೆ ನಡೆಸಿದೆ ಎಂಬ ಪತ್ರಿಕಾ ವರದಿ ಆಧರಿಸಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿರುವ ಎನ್‌ಜಿಟಿಯ ದಕ್ಷಿಣ (ಚೆನ್ನೈ)ದ ಪೀಠ, ಜುಲೈ 5ರೊಳಗೆ ವರದಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಿದೆ.

ಈ ಯೋಜನೆಗೆ ಕರ್ನಾಟಕವು ಸಂಬಂಧಿಸಿದ ಸಚಿವಾಲಯಗಳು ಮತ್ತು ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಪಡೆದಿದೆಯೇ ಎಂಬುದನ್ನು ತಿಳಿದುಕೊಳ್ಳಲು ಎನ್‌ಜಿಟಿ ಸಮಿತಿ ರಚಿಸಿದೆ ಎಂದು ಸಚಿವರು ಹೇಳಿದರು.

ಭಿತ್ತಿ ಪತ್ರಗಳನ್ನು ಹಿಡಿದ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ಮೂಲಕ ಪ್ರತಿಭಟನೆ

ರೈತರಿಂದ ಕರಾಳ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಕಾಯ್ದೆ ರದ್ದತಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದೆಹಲಿ ಗಡಿಗಳಲ್ಲಿ ನಡೆಯುತ್ತಿರುವ ರೈತ ಹೋರಾಟಕ್ಕೆ 6 ತಿಂಗಳು ಪೂರೈಸಿರುವ ಕಾರಣ ಕರೆ ನೀಡಿದ್ದ ಕರಾಳ ದಿನಾಚರಣೆ ಬೆಂಬಲಿಸಿ ಮನೆ-ಮನೆಗಳಲ್ಲೇ ರೈತ ಮತ್ತು ಕಾರ್ಮಿಕರು ಬುಧವಾರ ಪ್ರತಿಭಟನೆ ನಡೆಸಿದರು.

ಕಪ್ಪು ಪಟ್ಟಿ, ಕಪ್ಪು ಮಾಸ್ಕ್ ಧರಿಸಿ, ಕಪ್ಪು ಬಾವುಟ ಮತ್ತು ಭಿತ್ತಿ ಪತ್ರಗಳನ್ನು ಪ್ರದರ್ಶಿಸಿ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ಮೂಲಕ ಪ್ರತಿಭಟನೆ ನಡೆಸಿದರು. ಕೃಷಿ ಕಾಯ್ದೆ ಮತ್ತು ಕಾರ್ಮಿಕ ಕಾಯ್ದೆಗಳ ಪ್ರತಿಗಳನ್ನು ದಹನ ಮಾಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಉಳುಮೆ ಮಾಡುವ ಹೊಲದಲ್ಲೇ ಕಪ್ಪು ಬಾವುಟವನ್ನು ರೈತರು ಪ್ರದರ್ಶಿಸಿದರು.

'ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಏಳ ವರ್ಷ ಪೂರೈಸಿದೆ ಈ ಸಂದರ್ಭದಲ್ಲಿ ರೈತರ ಮರಣ ಶಾಸನ ಬರೆಯುವ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ ಮಾಡಿದ್ದಾರೆ. ಸ್ವಾಮಿನಾಥನ್ ವರದಿ ಜಾರಿ ಮಾಡುವ ಭರವಸೆ ನೀಡಿದ್ದ ಸರ್ಕಾರ, ಅಧಿಕಾರಕ್ಕೆ ಬಂದ ಬಳಿಕ ಅಂಬಾನಿ ಮತ್ತು ಅದಾನಿಗಳ ಸೇವಕರಾಗಿದ್ದಾರೆ' ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

'ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿ ಮಾಡುವ ಶಾಸನ ಜಾರಿ ಮಾಡಬೇಕು ಎಂದು ಆಗ್ರಹಿಸಿ ದೆಹಲಿಯ ಹೊರ ವಲಯದಲ್ಲಿ 6 ತಿಂಗಳಿಂದ ಲಕ್ಷಾಂತರ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಚರಿತ್ರಾರ್ಹ ಹೋರಾಟದಲ್ಲಿ 400ಕ್ಕೂ ಹೆಚ್ಚು ರೈತರು ಹುತಾತ್ಮರಾಗಿದ್ದಾರೆ. ಕೇಂದ್ರ ಸರ್ಕಾರ ಕೂಡಲೇ ರೈತರನ್ನು ಮಾತುಕತೆಗೆ ಕರೆಯಬೇಕು' ಎಂದು ಆಗ್ರಹಿಸಿದರು.

'ಕೋವಿಡ್ ವ್ಯಾಪಕವಾಗಿ ಹರಡುತ್ತಿದ್ದು, ಜನ ಸಾಮಾನ್ಯರ ಆಕ್ರಂದನ ಮುಗಿಲು ಮುಟ್ಟಿದೆ. ಈ ಸಂದರ್ಭದಲ್ಲಿ ಕಾರ್ಮಿಕ ಪರವಾದ ಕಾನೂನುಗಳಿಗೆ ತಿಲಾಂಜಲಿ ಇಟ್ಟು ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಕೇಂದ್ರ ಸರ್ಕಾರ ಜಾರಿ ಮಾಡಿದೆ. ಅವುಗಳಿಗೆ ಕಾನೂನಿನ ರೂಪ ನೀಡಲು ಎಲ್ಲಾ ರಾಜ್ಯ ಸರ್ಕಾರಗಳಿಗೆ ಒತ್ತಡ ಹಾಕುತ್ತಿದೆ. ಕೈಗಾರಿಕಾ ಬಾಂಧವ್ಯ(ಐ-ಆರ್) ಮತ್ತು ವೇತನ ಸಂಹಿತೆಗಳಿಗೆ(-ಸಿಡಬ್ಲ್ಯು) ಕಾನೂನು ರೂಪಿಸಿ ಜಾರಿ ಮಾಡಲು ಹೊರಟಿದೆ. ಇವುಗಳನ್ನು ಕೂಡಲೇ ತಡೆಹಿಡಿಯಬೇಕು' ಎಂದು ಒತ್ತಾಯಿಸಿದರು.

'ಜನರ ಜೀವ ಮತ್ತು ಜೀವನೋಪಾಯ ರಕ್ಷಣೆಗಾಗಿ ಸಾರ್ವತ್ರಿಕವಾಗಿ ಉಚಿತವಾಗಿ ಕೋವಿಡ್ ಲಸಿಕೆ ನೀಡಬೇಕು. ಉದ್ಯೋಗ ಸೃಷ್ಟಿಗೆ ಆದ್ಯತೆ, ದುಡಿಯುವ ವರ್ಗಕ್ಕೆ ಉಚಿತ ದಿನಸಿ ಜತೆಗೆ ₹7,500 ನೀಡಬೇಕು. ಕೃಷಿ ಕಾಯ್ದೆ ಮತ್ತು ಲೇಬರ್ ಕೋಡ್ ವಾಪಸ್ ಪಡೆಯಬೇಕು. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ನಿಲ್ಲಿಸಬೇಕು' ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಜೆಸಿಟಿಯು) ಸಂಚಾಲಕ ಕೆ.ವಿ. ಭಟ್ ಆಗ್ರಹಿಸಿದರು.



ಕರಾಳ ದಿನದ ಅಂಗವಾಗಿ ಪ್ರತಿಭಟನೆ ವ್ಯಕ್ತಪಡಿಸಿದ ರೈತ ಮತ್ತು ಕಾರ್ಮಿಕ ಸಂಘಟನೆಗಳ ಮುಖಂಡರು

ಮುಖ್ಯಾಂಶಗಳು

- ಕೃಷಿ, ಕಾರ್ಮಿಕ ಕಾಯ್ದೆಗಳ ಪ್ರತಿಗಳನ್ನು ದಹನ ಮಾಡಿ ಆಕ್ರೋಶ
- ರೈತರನ್ನು ಕೂಡಲೇ ಮಾತುಕತೆಗೆ ಕರೆಯಲು ಆಗ್ರಹ

ಹೋರಾಟ ಮುಂದುವರಿಕೆಗೆ ಒಲವು

ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಸಂಬಂಧಿ ಕಾಯ್ದೆಗಳ ವಿರುದ್ಧ ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ನಡೆಯುತ್ತಿರುವ ಹೋರಾಟವನ್ನು ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿಕೊಂಡೇ ಮುಂದುವರಿಸಬೇಕು ಎಂಬ ಒಲವು ರೈತ ಸಂಘಟನೆಗಳು ಹಾಗೂ ಜನಪರ ಸಂಘಟನೆಗಳ ಮುಖಂಡರಿಂದ ವ್ಯಕ್ತವಾಗಿದೆ.

ದೆಹಲಿಯಲ್ಲಿ ನಡೆಯುತ್ತಿರುವ ರೈತ ಹೋರಾಟ ಆರು ತಿಂಗಳು ಪೂರೈಸಿರುವ ಪ್ರಯುಕ್ತ annadaruna.com ವೆಬ್‌ಸೈಟ್ ಬುಧವಾರ ಆಯೋಜಿಸಿದ್ದ 'ದೆಹಲಿ ಹೋರಾಟದ ಚಾರಿತ್ರಿಕ ಮಹತ್ವ, ಕೊರೋನೋತ್ತರ ರೈತ ಹೋರಾಟ ಹಾಗೂ ಕರ್ನಾಟಕದಲ್ಲಿ ಮುಂದೇನು?' ಎಂಬ ವೆಬಿನಾರ್‌ನಲ್ಲಿ ಭಾಗವಹಿಸಿದ್ದ ರೈತ ಮುಖಂಡರು ಹಾಗೂ ಜನಪರ ಸಂಘಟನೆಗಳ ಮುಖಂಡರು ಹೋರಾಟ ಮುಂದುವರಿಸುವಂತೆ ಒತ್ತಾಯಿಸಿದ್ದಾರೆ.

'ಕೋವಿಡ್ ಹೆಸರಿನಲ್ಲಿ ಹೋರಾಟ ಸ್ಥಗಿತಗೊಳಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಅಂತಹ ಬೆಳವಣಿಗೆಗಳಿಗೆ ಅವಕಾಶ ನೀಡಬಾರದು. ಹೋರಾಟದ ಎಲ್ಲ ಸ್ಥಳಗಳಲ್ಲೂ ಕೋವಿಡ್ ನಿಯಂತ್ರಣ ಕ್ರಮಗಳನ್ನು ಪಾಲನೆ ಮಾಡಬೇಕು. ಎಲ್ಲ ರೈತ ಸಂಘಟನೆಗಳು ಮತ್ತು ಜನಪರ ಸಂಘಟನೆಗಳು ಒಗ್ಗೂಡುವ ಮೂಲಕ ಹೋರಾಟವನ್ನು ಮತ್ತಷ್ಟು ವಿಸ್ತರಿಸಬೇಕು. ಕೋವಿಡ್ ನಿಯಂತ್ರಣಕ್ಕೆ ಬರುತ್ತಿದ್ದಂತೆಯೇ ರಾಷ್ಟ್ರ ಮಟ್ಟದಲ್ಲಿ ರೈತ ಸಮಾವೇಶಗಳನ್ನು ನಡೆಸುವ ಮೂಲಕ ಶಕ್ತಿ ಪ್ರದರ್ಶಿಬೇಕು' ಎಂಬ ಸಲಹೆಗಳನ್ನು ಮುಖಂಡರು ನೀಡಿದರು.

ರಾಜ್ಯದಲ್ಲೂ ರೈತ ಹೋರಾಟವನ್ನು ಮತ್ತಷ್ಟು ವಿಸ್ತರಿಸುವ ಪ್ರಯತ್ನ ಆಗಬೇಕು. ಅದಕ್ಕೆ ಪೂರಕವಾಗಿ ರೈತ ಸಂಘಟನೆಗಳ ಜತೆ ಎಲ್ಲ ಕಾರ್ಮಿಕ, ದಲಿತ ಮತ್ತು ಜನಪರ ಸಂಘಟನೆಗಳೂ ಕೈಜೋಡಿಸಬೇಕು. ಆನ್‌ಲೈನ್ ಸಭೆಗಳ ಮೂಲಕವೇ ಮುಂದಿನ ಹಂತದ ಹೋರಾಟಕ್ಕೆ ಸಿದ್ಧತೆ ನಡೆಸಬೇಕು ಎಂದು ಹಲವರು ಹೇಳಿದರು.

ರೈತ ಸಂಘದ ವಿವಿಧ ಬಣಗಳ ಮುಖಂಡರಾದ ಬಡಗಲಪುರ ನಾಗೇಂದ್ರ, ಚಾಮರಸ ಮಾಲಿಪಾಟೀಲ, ಎಚ್.ಆರ್. ಬಸವರಾಜಪ್ಪ, ಕುರುಬೂರು ಶಾಂತಕುಮಾರ್, ನಳಿನಿ ಗೌಡ, ಕರ್ನಾಟಕ ಜನಶಕ್ತಿಯ ನೂರ್ ಶ್ರೀಧರ್, ಡಾ.ಎಚ್.ವಿ. ವಾಸು, ಸ್ವರಾಜ್ ಅಭಿಯಾನದ ರಾಜಶೇಖರ್ ಅಕ್ಕಿ ಸೇರಿದಂತೆ 200ಕ್ಕೂ ಹೆಚ್ಚು ಜನರು ವೆಬಿನಾರ್‌ನಲ್ಲಿ ಭಾಗವಹಿಸಿದ್ದರು.

ಏಳು ಪ್ರಶ್ನೆ: ದೆಹಲಿಯ ಪ್ರತಿಭಟನಾ ಸ್ಥಳದಿಂದ ಮಾತನಾಡಿದ ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲನಾ ಸಮಿತಿಯ ಸದಸ್ಯ ಯೋಗೇಂದ್ರ ಯಾದವ್, 'ರೈತರನ್ನು ನಷ್ಟಕ್ಕೆ ಸಿಲುಕಿಸುತ್ತಿರುವ ಆಮದು ನೀತಿ, ಮೂರು ಕೃಷಿ ವಿರೋಧಿ ಕಾನೂನುಗಳು, ಪೆಟ್ರೋಲಿಯಂ ಉತ್ಪನ್ನ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ, ಫಸಲ್ ವಿಮಾ ಯೋಜನೆಯ ವೈಫಲ್ಯ ಸೇರಿದಂತೆ ಏಳು ಪ್ರಶ್ನೆಗಳನ್ನು ಕೇಳುವ ಮೂಲಕ ರೈತರು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕು' ಎಂದು ಪ್ರಶ್ನೆಗಳ ಪಟ್ಟಿಯನ್ನು ಹಂಚಿಕೊಂಡರು.

ಸಂಕ್ಷಿಪ್ತ ಸುದ್ದಿ

ಲಂಡನ್: ಮಲ್ಯ ಮನವಿ ತಿರಸ್ಕೃತ

ಲಂಡನ್ (ಪಿಟಿಐ): ಭಾರತದಲ್ಲಿ ನಡೆಯುತ್ತಿರುವ ಕಾನೂನು ಹೋರಾಟಗಳ ಶುಲ್ಕ ಭರಿಸಲು 7,50,000 ಪೌಂಡ್ (₹7.70 ಕೋಟಿ) ಬಿಡುಗಡೆ ಮಾಡುವಂತೆ ಉದ್ಯಮಿ ವಿಜಯ್ ಮಲ್ಯ ಅವರು ಮಾಡಿದ ಮನವಿಯನ್ನು ಲಂಡನ್ ಹೈಕೋರ್ಟ್ ತಿರಸ್ಕರಿಸಿದೆ.

ತಮ್ಮ ಮನವಿಗೆ ಸಂಬಂಧಿಸಿದಂತೆ ಪೂರಕ ಸಾಕ್ಷ್ಯಾಧಾರಗಳನ್ನು ಒದಗಿಸುವಲ್ಲಿ ಮಲ್ಯ ವಿಫಲರಾಗಿದ್ದಾರೆ ಎಂದು ನ್ಯಾಯಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ರಾಬರ್ಟ್ ಮೈಲ್ಸ್ ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ನೇತೃತ್ವದ ಭಾರತೀಯ ಬ್ಯಾಂಕುಗಳ ಒಕ್ಕೂಟದ ಪರವಾಗಿ ತೀರ್ಪು ನೀಡಿದರು.

ಮೇಯರ್ ಅನರ್ಹ ಆದೇಶ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಮೈಸೂರು ಮಹಾನಗರ ಪಾಲಿಕೆ ಮೇಯರ್ ರುಕ್ಮಿಣಿ ಮಾದೇಗೌಡ ಅವರನ್ನು ಪಾಲಿಕೆ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಿದ್ದ ಮೈಸೂರು ಜಿಲ್ಲಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಇದೇ ವೇಳೆ ಪರಾಜಿತ ಅಭ್ಯರ್ಥಿ ರಜನಿ ಅಣ್ಣಯ್ಯ ಅವರನ್ನು ವಿಜೇತರು ಎಂದು ಘೋಷಿಸಿದ್ದ ಆದೇಶವನ್ನು ರದ್ದುಪಡಿಸಿ, ಸದಸ್ಯ ಸ್ಥಾನಕ್ಕೆ ಹೊಸದಾಗಿ ಚುನಾವಣೆ ನಡೆಸುವಂತೆ ಸೂಚನೆ ನೀಡಿದೆ.

ರುಕ್ಮಿಣಿ ಮಾದೇಗೌಡ ತಮ್ಮ ಆಸ್ತಿ ವಿವರ ಮುಚ್ಚಿಟ್ಟಿದ್ದಾರೆ ಎಂದು ಆರೋಪಿಸಿ ಪರಾಜಿತ ಅಭ್ಯರ್ಥಿ ರಜನಿ ಅಣ್ಣಯ್ಯ ಅವರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ಪುರಸ್ಕರಿಸಿದ್ದ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ರುಕ್ಮಿಣಿ ಅವರ ಸದಸ್ಯತ್ವ ರದ್ದುಪಡಿಸಿ 2020ರ ಡಿಸೆಂಬರ್ 14ರಂದು ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ರುಕ್ಮಿಣಿ ಮಾದೇಗೌಡ ಡಿ.23ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್. ಸಂಜಯಗೌಡ ಅವರಿದ್ದ ಪೀಠ, ಈ ಆದೇಶ ನೀಡಿತು. ಫೆಬ್ರುವರಿ 24ರಂದು ರುಕ್ಮಿಣಿ ಮೇಯರ್ ಆಗಿ ಆಯ್ಕೆಯಾಗಿದ್ದರು.

ಅಮೆರಿಕ: ಗುಂಡಿನ ದಾಳಿ– ಎಂಟು ಮಂದಿ ಸಾವು

ಸ್ಯಾನ್ ಜೋಸ್ (ಅಮೆರಿಕ, ಎಪಿ): ಸ್ಯಾನ್ ಜೋಸ್‌ನ ರೈಲ್‌ಯಾರ್ಡ್‌ನಲ್ಲಿ ಬುಧವಾರ ಗುಂಡಿನ ದಾಳಿ ನಡೆದಿದ್ದು, ಎಂಟು ಮಂದಿ ಸಾವನ್ನಪ್ಪಿದ್ದಾರೆ. ಹಲವರು ಗಾಯಗೊಂಡಿದ್ದು, ಗುಂಡಿನ ದಾಳಿ ನಡೆಸಿದ ಶಂಕಿತ ವ್ಯಕ್ತಿ ಸಹ ಮೃತಪಟ್ಟಿದ್ದಾನೆ ಎಂದು ಸಾಂಟಾ ಕ್ಲಾರಾ ಕೌಂಟಿ ಶೆರಿಫ್ ವಕ್ತಾರ ರಸ್ಸೆಲ್ ಡೇವಿಸ್ ತಿಳಿಸಿದ್ದಾರೆ.

ಸಿಲಿಕಾನ್ ವ್ಯಾಲಿಗೆ ಸೇವೆ ಒದಗಿಸುತ್ತಿರುವ ರೈಲ್‌ಯಾರ್ಡ್‌ನಲ್ಲಿ ಬುಧವಾರ ಬೆಳಿಗ್ಗೆ 6.30ಕ್ಕೆ ಗುಂಡಿನ ದಾಳಿ ನಡೆದಿದೆ. ಘಟನೆಯಲ್ಲಿ ಶಂಕಿತ ಮೃತಪಟ್ಟಿದ್ದಾನೆ ಎಂದು ಡೇವಿಸ್ ಹೇಳಿದ್ದಾರೆ.

ಚಿನ್ನದ ಗಣಿ ಸರ್ವೆಗೆ ಜಾಗತಿಕ ಟೆಂಡರ್

ಅಧಿಕಾರಿಗಳ ಸಭೆಯಲ್ಲಿ ಗಣಿ ಸಚಿವ ಮುರುಗೇಶ್ ನಿರಾಣಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಕೆಜಿಎಫ್: ರಾಜ್ಯದ ಬಿಜಿಎಂಎಲ್ ಮತ್ತು ಹಟ್ಟಿ ಚಿನ್ನದ ಗಣಿಗಳಲ್ಲಿ ತೆಗೆದ ಮಣ್ಣಿನಲ್ಲಿ ಸಿಗುವ ಚಿನ್ನದ ಅದಿರನ್ನು ಸಂಸ್ಕರಿಸಲು ಮತ್ತು ಗಣಿಗಳನ್ನು ನವೀಕರಣ ಮಾಡಲು ಅವಶ್ಯಕತೆ ಇರುವ ತಂತ್ರಜ್ಞಾನ ಪಡೆಯಲು ಜಾಗತಿಕ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ ಎಂದು ಗಣಿ ಸಚಿವ ಮುರುಗೇಶ್ ನಿರಾಣಿ ಹೇಳಿದ್ದಾರೆ.

ಬಿಜಿಎಂಎಲ್ ನಲ್ಲಿ 32 ಮಿಲಿಯನ್ ಟನ್ ಮತ್ತು ಹಟ್ಟಿ ಗೋಲ್ಡ್ ಮೈನ್ಸ್‌ನಲ್ಲಿ 15 ಮಿಲಿಯನ್ ಟನ್ ಭೂಮಿಯಿಂದ ತೆಗೆದು ಮಣ್ಣು (ಟೇಲ್‌ಡಂಪ್) ಇದೆ. ಈ ಮಣ್ಣಿನಲ್ಲಿ ಪ್ರತಿ ಟನ್‌ಗೆ 0.7 ಗ್ರಾಂ ಚಿನ್ನ ಸಿಗುವ ಸಂಭವ ಇದೆ. ಇದರ ಜೊತೆಗೆ ಟಂಗ್‌ಸ್ಟನ್ ಮತ್ತಿತರ ಖನಿಜಗಳು ಸಿಗುವ ಸಾಧ್ಯತೆ ಇದೆ. ಕೆಜಿಎಫ್ ಚಿನ್ನದ ಗಣಿಗಳಲ್ಲಿ ಒಂದು ಕಾಲದಲ್ಲಿ ಪ್ರತಿ ಟನ್‌ಗೆ 40 ಗ್ರಾಂ ಚಿನ್ನ ಸಿಗುತ್ತಿತ್ತು. ಈಗ ಕಡಿಮೆಯಾಗಿದೆ ಎಂದು ಮಾಹಿತಿ ನೀಡಿದರು.



ಕೆಜಿಎಫ್ ಬಿಜಿಎಂಎಲ್ ಕೇಂದ್ರ ಕಚೇರಿ ಸ್ವರ್ಣ ಭವನ ನಲ್ಲಿ ಬುಧವಾರ ಗಣಿ ಸಚಿವ ಮುರುಗೇಶ್ ನಿರಾಣಿ ಅಧಿಕಾರಿಗಳ ಸಭೆ ನಡೆಸಿದರು. ಸಂಸದ ಎಸ್‌.ಮುನಿಸ್ವಾಮಿ, ಶಾಸಕಿ ಎಂ.ರೂಪಕಲಾ, ಜಿಲ್ಲಾಧಿಕಾರಿ ಆರ್‌.ಸೆಲ್ವಮಣಿ ಇದ್ದರು.

ಆದ್ದರಿಂದ ಆಧುನಿಕ ತಂತ್ರಜ್ಞಾನ ಹೊಂದಿರುವ ಮತ್ತು ಗಣಿ ಅನುಭವ ಇರುವ ಕಂಪನಿಗಳನ್ನು ಜಾಗತಿಕ ಟೆಂಡರ್ ಮೂಲಕ ಆಹ್ವಾನಿಸಲಾಗುತ್ತಿದೆ. ಸರ್ವೆ ವರದಿ ಆಧರಿಸಿ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ಬುಧವಾರ ಬಿಜಿಎಂಎಲ್‌ನಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ತಿಳಿಸಿದರು.

ಸಂಸದ ಎಸ್.ಮುನಿಸ್ವಾಮಿ, ಶಾಸಕಿ ಎಂ.ರೂಪಕಲಾ, ಗಣಿ ಇಲಾಖೆಯ ಕಾರ್ಯದರ್ಶಿ ರವೀಂದ್ರ, ಕಾರ್ಯದರ್ಶಿ ಪಂಕಜ್‌ಕುಮಾರ್ ಪಾಂಡೆ, ಹಟ್ಟಿ ಚಿನ್ನದ ಗಣಿಯ ವ್ಯವಸ್ಥಾಪಕ ನಿರ್ದೇಶಕ ಪ್ರಭುಲಿಂಗ, ನಿರ್ದೇಶಕ ಸಲಗೂರುಮಠ, ಬಿಜಿಎಂಎಲ್ ವ್ಯವಸ್ಥಾಪಕ ನಿರ್ದೇಶಕ ರಂಜಿತ್ ರಥ್, ಜಿಲ್ಲಾಧಿಕಾರಿ ಆರ್.ಸೆಲ್ವಮಣಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಲಕ್ಕಿಯಾ ಕರುಣಾಗರನ್, ನಗರಸಭೆ ಅಧ್ಯಕ್ಷ ವಳ್ಳಲ್‌ಮುನಿಸ್ವಾಮಿ, ನಗರಸಭೆ ಆಯುಕ್ತ ಮೋಹನ್‌ಕುಮಾರ್, ಉಪವಿಭಾಗಾಧಿಕಾರಿ ಸೋಮಶೇಖರ್, ತಹಶೀಲ್ದಾರ್ ಕೆ.ಎನ್.ಸುಜಾತ ಹಾಜರಿದ್ದರು.

ಅನುದಾನರಹಿತ ಶಾಲೆಗಳ ಶಿಕ್ಷಕರಿಗೆ ಪ್ಯಾಕೇಜ್: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಖಾಸಗಿ ಅನುದಾನರಹಿತ ಶಾಲೆಗಳ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗೆ ಸರ್ಕಾರದಿಂದ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು' ಎಂದು ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರಗಳ ವಿಧಾನಪರಿಷತ್ ಬಿಜೆಪಿ ಸದಸ್ಯರ ನಿಯೋಗ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ನೇತೃತ್ವದಲ್ಲಿ ಮುಖ್ಯಮಂತ್ರಿ ಅವರನ್ನು ಬುಧವಾರ ಬೆಳಿಗ್ಗೆ ಭೇಟಿ ಮಾಡಿದ ಸದಸ್ಯರು, 'ಈ ಸಮುದಾಯದ ದೈನಂದಿನ ಜೀವನ ನಿರ್ವಹಣೆಯೂ ದುಸ್ತರವಾಗಿದೆ. ಜೀವನ ನಡೆಸಲು ಹಲವರು ಹಣ್ಣು, ತರಕಾರಿ ಮಾರುತ್ತಿದ್ದಾರೆ. ಕೆಲವರು ಕೂಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ಆರ್ಥಿಕ ಪ್ಯಾಕೇಜ್ ಈ ಸಮುದಾಯಕ್ಕೆ ಆತ್ಮವಿಶ್ವಾಸ ತುಂಬಲು ಸಹಕಾರಿ ಆಗಲಿದೆ' ಎಂದರು.

ಮುಖ್ಯಾಂಶಗಳು

- ಪದವೀಧರ ಕ್ಷೇತ್ರಗಳ ವಿಧಾನಪರಿಷತ್ ಬಿಜೆಪಿ ಸದಸ್ಯರ ನಿಯೋಗ ಭೇಟಿ
- ಕೂಲಿ ಕೆಲಸ ಮಾಡುತ್ತಿರುವ ಶಿಕ್ಷಕರು; ಪ್ಯಾಕೇಜ್‌ನಿಂದ ಆತ್ಮವಿಶ್ವಾಸ– ನಿಯೋಗ

ಬಳಿಕ ಶಿಕ್ಷಕ, ಪದವೀಧರ ಕ್ಷೇತ್ರಗಳ ವಿಧಾನ ಪರಿಷತ್ ಸದಸ್ಯರು ಹಾಗೂ ಪದವಿಪೂರ್ವ ಶಿಕ್ಷಕರ ಸಂಘಟನೆಗಳ ಮುಖ್ಯಸ್ಥರ ಜೊತೆ ಸಭೆ ನಡೆಸಿದ ಸುರೇಶ್‌ಕುಮಾರ್, 'ಖಾಸಗಿ ಅನುದಾನ ರಹಿತ ಶಾಲಾ ಶಿಕ್ಷಕರ ನೆರವಿಗೆ ಸರ್ಕಾರಿ ಶಿಕ್ಷಕರು ಸಹಾಯಹಸ್ತ ಚಾಚಬೇಕು' ಎಂದು ಮನವಿ ಮಾಡಿದರು.

'ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರದ ಸದಸ್ಯರು ವೇತನ ನೀಡಲು ಮುಂದೆ ಬಂದಿದ್ದಾರೆ. ಇಲಾಖೆಯ ಆಂತರಿಕ ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣಕ್ಕೂ ಪ್ರಸ್ತಾವನೆ ಮಂಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಪ್ರೌಢ ಶಾಲಾ ಶಿಕ್ಷಕರ ಸಂಘಟನೆಯ ಮಂಜುನಾಥ್, ಪದವಿಪೂರ್ವ ಉಪನ್ಯಾಸಕರ ಸಂಘಟನೆಯ ಅಧ್ಯಕ್ಷ ನಿಂಗೇಗೌಡ ಅವರು ಸಚಿವರ ನಿಲುವಿಗೆ ಬದ್ಧ ಎಂದರು.

ಸಂಘಟನೆಯ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಲಿಖಿತ ಒಪ್ಪಿಗೆ ನೀಡುವುದಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಟನೆಯ ಅಧ್ಯಕ್ಷ ಶಂಭುಗೌಡನ ಪಾಟೀಲ ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಿ ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ವೈ.ಎ. ನಾರಾಯಣ ಸ್ವಾಮಿ, ಪುಟ್ಟಣ್ಣ, ಅರುಣ ಶಹಾಪುರ, ಶಶೀಲ್ ನಮೋಶಿ, ಎಸ್.ವಿ. ಸಂಕನೂರ, ಹಣಮಂತ ನಿರಾಣಿ ಮತ್ತು ಚಿದಾನಂದ ಗೌಡ ಇದ್ದರು.

ಸಿಎಸ್‌ಆರ್ ನಿಧಿ ಬಳಕೆಗೆ ಇನ್ನು 'ಆಕಾಂಕ್ಷಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಯೋಜನೆಗಳನ್ನು ರಾಜ್ಯಮಟ್ಟದಲ್ಲಿ ಕೈಗೊಳ್ಳಲು ಸರ್ಕಾರ ಮತ್ತು ದಾನಿಗಳ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸಲಿರುವ ಆನ್‌ಲೈನ್ ವೇದಿಕೆ 'ಆಕಾಂಕ್ಷಾ' ಪೋರ್ಟಲ್‌ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬುಧವಾರ ಚಾಲನೆ ನೀಡಿದರು.



'ಈ ವ್ಯವಸ್ಥೆಯಿಂದ ಸಿಎಸ್‌ಆರ್ ಅನುದಾನವನ್ನು ಅಗತ್ಯವಿರುವ ಕಾರ್ಯಕ್ರಮಗಳಿಗೆ ಸುಲಭವಾಗಿ ಹಾಗೂ ಪಾರದರ್ಶಕವಾಗಿ ಬಳಸಲು ಅನುಕೂಲವಾಗಲಿದೆ. ಆರೋಗ್ಯ ವಲಯಕ್ಕೆ ಈಗಾಗಲೇ ₹ 175 ಕೋಟಿ ಸಿಎಸ್‌ಆರ್ ನಿಧಿ ಸಂಗ್ರಹಿಸಲಾಗಿದೆ. ಕೋವಿಡ್ ಸಂಕಷ್ಟಕ್ಕೆ ಮತ್ತು ಇತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನೆರವು ನೀಡಲು ಬಯಸುವ ದಾನಿಗಳು ಪೋರ್ಟಲ್ ಮೂಲಕ ನೆರವು ನೀಡಬಹುದು' ಎಂದರು.

ದೇಶದಲ್ಲಿ ಪ್ರಥಮ ಬಾರಿಗೆ ರಾಜ್ಯದಲ್ಲಿ ಇಂಥ ಪೋರ್ಟಲ್ ಸಿದ್ಧಪಡಿಸಲಾಗಿದೆ. ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯುಎನ್‌ಡಿಪಿಯು ಇದಕ್ಕೆ ನೆರವು ನೀಡಿದೆ. ಕೋವಿಡ್ ನಿರ್ವಹಣೆ ಹಾಗೂ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗೂ ಇದು ಪೂರಕವಾಗಿದೆ' ಎಂದೂ ಹೇಳಿದರು.

'ತಾಲ್ಲೂಕು, ಜಿಲ್ಲಾಮಟ್ಟದ ಆಸ್ಪತ್ರೆಗಳ ಅಭಿವೃದ್ಧಿ, ಗ್ರಾಮೀಣ ಪ್ರದೇಶದಲ್ಲಿ ಮಕ್ಕಳಿಗೆ ಆನ್‌ಲೈನ್ ಶಿಕ್ಷಣ, ಕೇಂದ್ರ ಸರ್ಕಾರದ ಗುರುತಿಸಿರುವ ರಾಯಚೂರು ಮತ್ತು ಯಾದಗಿರಿ ಹಾಗೂ 114 ಹಿಂದುಳಿದ ತಾಲ್ಲೂಕುಗಳಿಗೆ ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಜನೋಪಯೋಗಿ ಕಾರ್ಯಗಳಿಗೆ ಬೇಕಾದ ಅಗತ್ಯಗಳನ್ನು ವಿವಿಧ ಇಲಾಖೆಗಳು ಈಗಾಗಲೇ ಈ ಪೋರ್ಟಲ್‌ನಲ್ಲಿ ಅಳವಡಿಸಿವೆ' ಎಂದೂ ಹೇಳಿದರು.

ನೀತಿ ಆಯೋಗದ ಮುಖ್ಯಕಾರ್ಯನಿರ್ವಹಣಾಧಿಕಾರಿ ಅಮಿತಾಬ್ ಕಾಂತ್ ಮಾತನಾಡಿ, 'ಸಿಎಸ್‌ಆರ್ ನಿಧಿಯನ್ನು ಅಗತ್ಯವಿರುವ ಜಿಲ್ಲೆಗಳ ಅಭಿವೃದ್ಧಿಗೆ ಬಳಸಲು ರಾಜ್ಯ ಸರ್ಕಾರಕ್ಕೆ ಈ ಪೋರ್ಟಲ್ ನೆರವಾಗಲಿದೆ. ಅಲ್ಲದೆ, ರಾಜ್ಯದ ಎಲ್ಲ ಭಾಗಗಳ ಸಮಾನ ಅಭಿವೃದ್ಧಿಗೂ ಸಾಧನವಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯುವಜನಸೇವೆ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವ ಕೆ.ಸಿ. ನಾರಾಯಣ ಗೌಡ ಉಪಸ್ಥಿತರಿದ್ದರು.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಸುತ್ತಲಿನ ಜನರ ಆತಂಕ

ಕಾಡಂಚಿನ ಗ್ರಾಮಗಳಲ್ಲಿ ಕರಡಿ ಓಡಾಟ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಸಮೀಪದ ಗ್ರಾಮಗಳಲ್ಲಿ ಕರಡಿಯೊಂದರ ಸಂಚಾರ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಬನ್ನೇರುಘಟ್ಟ ಸಮೀಪದ ಬೇಗೆಹಳ್ಳಿ, ಮಹಂತಲಿಂಗಾಪುರ, ಸಕಲವಾರ, ಭೂತಾನಹಳ್ಳಿ, ಬಿಲ್ವರದನಹಳ್ಳಿ, ಕ್ಯಾಸರಗುಪ್ಪೆ ಸೇರಿದಂತೆ ಹಲವು ಗ್ರಾಮಗಳಲ್ಲಿ ಕರಡಿಯೊಂದು ಪದೇ ಪದೇ ಕಾಣಿಸಿಕೊಳ್ಳುತ್ತಿದ್ದು, ಗ್ರಾಮಸ್ಥರಲ್ಲಿ ಆತಂಕ ತಂದಿದೆ. ಮಂಗಳವಾರ ರಾಗಿಹಳ್ಳಿ ಸಮೀಪದ ಅರಣ್ಯದಂಚಿನ ಮುತ್ತರಾಯಸ್ವಾಮಿ ದೇವಾಲಯದಲ್ಲಿ ಸಂಜೆ ವೇಳೆ ಕಾಣಿಸಿಕೊಂಡಿದೆ. ಹಗಲಿನ ವೇಳೆಯಲ್ಲಿಯೇ ರಸ್ತೆಯಲ್ಲಿ ಓಡಾಡುತ್ತಿದ್ದು ಕಾಡಿನಂಚಿನ ಗ್ರಾಮಗಳ ಜನರು ಓಡಾಡಲು ಭಯ ಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಮಾರ್ಚ್ 29ರಂದು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ತುಮಕೂರಿನಿಂದ ಸಂರಕ್ಷಿಸಿ ತರಲಾಗಿದ್ದ ಕರಡಿಯು ಆನೇಕಲ್ ಸಮೀಪದ ಶೆಟ್ಟಿಹಳ್ಳಿ, ಚಂದಾಪುರ, ತಟ್ನಹಳ್ಳಿ ಗ್ರಾಮಗಳಲ್ಲಿ ಸಂಚರಿಸಿ 9ಕ್ಕೂ ಹೆಚ್ಚು ಜನರ ಮೇಲೆ ದಾಳಿ ನಡೆಸಿತ್ತು. ಕರಡಿಯನ್ನು ಹಿಡಿಯುವ ಪ್ರಯತ್ನ ಸಫಲವಾಗಲಿಲ್ಲ. ಅರಣ್ಯ ಇಲಾಖೆ ನಿರಂತರವಾಗಿ ಪ್ರಯತ್ನ ನಡೆಸುತ್ತಲೇ ಇದೆ. ಇದೇ ಕರಡಿಯೇ ಗ್ರಾಮಗಳಲ್ಲಿ ಸಂಚರಿಸುತ್ತಿದೆಯೇ ಎಂಬ ಅನುಮಾನ ಜನರಲ್ಲಿ ಕಾಡುತ್ತಿದೆ. ಗ್ರಾಮಗಳಲ್ಲಿ ಕರಡಿ ಓಡಾಟ ಕಂಡುಬಂದರೂ ಜನರಿಗೆ ತೊಂದರೆ ನೀಡಿದ ಘಟನೆಗಳು ನಡೆದಿಲ್ಲ.



ರಾಗಿಹಳ್ಳಿಯ ಮುತ್ತರಾಯಸ್ವಾಮಿ ದೇವಾಲಯದ ಬಳಿ ಕಾಣಿಸಿಕೊಂಡ ಕರಡಿ

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಸಿಬ್ಬಂದಿ ಕರಡಿ ಹಿಡಿಯುವಲುವಾಗಿ ಹಾಸನದಿಂದ ಅನುಭವಿ ಶೂಟರ್‌ಗಳನ್ನು ಕರೆಯಿಸಿ ಕರಡಿ ಹಿಡಿಯುವ ಪ್ರಯತ್ನ ನಡೆಸಿದ್ದರು. ಆದರೂ, ಚಾಲಕಿ ಕರಡಿ ಅರಣ್ಯ ಇಲಾಖೆಯ ಕೈಗೆ ಸಿಗದೇ ಜನರ ಕಣ್ಣಿಗೆ ಕಾಣಿಸುತ್ತಿದೆ. ಕರಡಿಯನ್ನು ತ್ವರಿತವಾಗಿ ಹಿಡಿಯಬೇಕು ಎಂಬುದು ಸ್ಥಳೀಯರ ಒತ್ತಾಯ.

'ಕರಡಿಯನ್ನು ಅರಣ್ಯ ಇಲಾಖೆಯವರು ಸಂರಕ್ಷಿಸಿ ಜೈವಿಕ ಉದ್ಯಾನಕ್ಕೆ ನೀಡಬೇಕು. ಇಲ್ಲವಾದಲ್ಲಿ ದಟ್ಟ ಕಾಡಿಗೆ ಬಿಡಬೇಕು. ಇಲ್ಲವಾದಲ್ಲಿ ಅರಣ್ಯದಂಚಿನ ಗ್ರಾಮಗಳ ಜನರು ಆತಂಕದಲ್ಲಿಯೇ ಜೀವನ ನಡೆಸಬೇಕಾದ ಪರಿಸ್ಥಿತಿ ಉಂಟಾಗಿದೆ. ಹಾಗಾಗಿ ಅರಣ್ಯ ಇಲಾಖೆಯ ತ್ವರಿತ ಕ್ರಮ ಕೈಗೊಳ್ಳಬೇಕು' ಎಂದು ಬನ್ನೇರುಘಟ್ಟದ ಅನಿಲ್ ಒತ್ತಾಯಿಸಿದರು.

ಗ್ರಾಮ ಪಂಚಾಯಿತಿ ಸದಸ್ಯ ರವೀಶ್ ಮಾತನಾಡಿ, 'ಮೂರು ದಿನಗಳ ಹಿಂದೆ ಸಂಜೆ 7ರ ವೇಳೆಯಲ್ಲಿ ಬೂತಾನಹಳ್ಳಿ ರಸ್ತೆಯಲ್ಲಿಯೇ ಕರಡಿ ಕಾಣಿಸಿಕೊಂಡಿತ್ತು. ಇದನ್ನು ಹಿಡಿಯುವಂತೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದೆ. ಕೂಡಲೇ ಸೆರೆ ಹಿಡಿಯಬೇಕು' ಎಂದು ಒತ್ತಾಯಿಸಿದರು.

ಮುಖ್ಯಾಂಶಗಳು

- ರಸ್ತೆಯಲ್ಲಿ ಸಂಚರಿಸಲು ಜನರ ಆತಂಕ
- ಕರಡಿ ಹಿಡಿಯುವ ಕಾರ್ಯಾಚರಣೆ ಆರಂಭಕ್ಕೆ ಒತ್ತಾಯ
- ಜನರ ಆತಂಕ ದೂರ ಮಾಡಲು ಅರಣ್ಯ ಇಲಾಖೆಗೆ ಮನವಿ

ಚಿತ್ರಾವಳಿ



ಕೋರಮಂಗಲದ ಸೇವಾ ಇನ್ ಆ್ಯಕ್ಷನ್ ಸಂಸ್ಥೆಯ ಸಹಯೋಗದಲ್ಲಿ ಅಂಗವಿಕಲರಿಗೆ ಲಸಿಕೆ ಹಾಕುವ ಅಭಿಯಾನಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಬುಧವಾರ ಚಾಲನೆ ನೀಡಿದರು. ಸೇವಾ ಇನ್ ಆ್ಯಕ್ಷನ್ ಸಂಸ್ಥೆಯ ಮುಖ್ಯಸ್ಥೆ ಪದ್ಮಶ್ರೀ ಬಲರಾಮ್, ಕೋರಮಂಗಲದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವರ್ಧನ ರೆಡ್ಡಿ, ವೈದ್ಯಾಧಿಕಾರಿ ಡಾ.ಪ್ರವೀಣ್, ಆರೋಗ್ಯ ನಿರೀಕ್ಷಕ ಶಹಾಜ್ ಹೈದರ್ ಹಾಗೂ ಇತರರು ಇದ್ದರು.



ನಗರದ ಕಾಕ್ಸ್‌ಟೌನ್‌ನಲ್ಲಿ ಸ್ನೇಹದೀಪ ಡಿಸೇಬಲ್ಡ್ ಟ್ರಸ್ಟ್, ಭಾರತಿ ನಗರ ನಿವಾಸಿಗಳ ಒಕ್ಕೂಟದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಅಭಿಯಾನದಲ್ಲಿ ವೈದ್ಯಕೀಯ ಸಿಬ್ಬಂದಿ ದೃಷ್ಟಿದೋಷ ಹೊಂದಿರುವವರಿಗೆ ಕೋವಿಡ್ ಲಸಿಕೆ ಹಾಕಿದರು. ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನೂರಾಧಾ ಇದ್ದಾರೆ



ಬುದ್ಧ ಜಯಂತಿ ಪ್ರಯುಕ್ತ ಸದಾಶಿವನಗರದ ನಾಗಸೇನಾ ವಿದ್ಯಾಲಯದಲ್ಲಿ ಬುಧವಾರ ಪ್ರಾರ್ಥನೆ, ಪ್ರವಚನ ನೆರವೇರಿತು. ವಿದ್ಯಾಲಯದ ಅಧ್ಯಕ್ಷ ಡಾ.ಎಂ.ವೆಂಕಟಸ್ವಾಮಿ ಅವರು 'ಪ್ರಬುದ್ಧ ಭಾರತ ನಿರ್ಮಾಣ' ಕುರಿತು ಆನ್‌ಲೈನ್ ಸಂವಾದ ನಡೆಸಿದರು

ಕಬ್ಬಿಣ ಅದಿರು ರಫ್ತು ನಿಷೇಧ ತೆರವು: 'ಸುಪ್ರೀಂ'ಗೆ ಮೇಲ್ಮನವಿ

ಬೆಂಗಳೂರು: ರಾಜ್ಯದಿಂದ ವಿದೇಶಕ್ಕೆ ಕಬ್ಬಿಣದ ಅದಿರು ರಫ್ತು ಮಾಡಲು ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿರುವ ಕಾರಣ ಸುಪ್ರೀಂಕೋರ್ಟ್ ವಿಧಿಸಿರುವ ನಿಷೇಧವನ್ನು ತೆರವುಗೊಳಿಸುವಂತೆ ಮೇಲ್ಮನವಿ ಸಲ್ಲಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ತೀರ್ಮಾನಿಸಿದೆ.

ಕೇಂದ್ರ ಗಣಿ ಸಚಿವ ಪ್ರಲ್ಹಾದ ಜೋಶಿ ಜತೆ ಬುಧವಾರ ವರ್ಚುವಲ್ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗಣಿ ಸಚಿವ ಮುರುಗೇಶ ನಿರಾಣಿ ಈ ವಿಷಯ ತಿಳಿಸಿದರು.

ವಿದೇಶಗಳಿಗೆ ಕಬ್ಬಿಣ ಅದಿರು ರಫ್ತು ಮಾಡುವ ಸಂಬಂಧ ಕೇಂದ್ರ ಸರ್ಕಾರದ ಅಭಿಪ್ರಾಯ ಕೇಳಲಾಯಿತು. ತಮ್ಮ ಕಡೆಯಿಂದ ಯಾವುದೇ ಆಕ್ಷೇಪ ಇಲ್ಲ ಎಂದು ಅಭಿಪ್ರಾಯ ನೀಡಿದ್ದಾಗಿ ನಿರಾಣಿ ತಿಳಿಸಿದರು.

'ಬೇರೆ ಯಾವುದೇ ರಾಜ್ಯಗಳ ಮೇಲೂ ಕಬ್ಬಿಣ ರಫ್ತಿಗೆ ಸಂಬಂಧಿಸಿದಂತೆ ನಿಷೇಧ ಹೇರಿಲ್ಲ. ನಮ್ಮ ರಾಜ್ಯಕ್ಕೆ ಮಾತ್ರ ನಿಷೇಧ ವಿಧಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಬರುತ್ತಿದ್ದ ವರಮಾನ ನಿಂತು ಹೋಗಿದೆ. ಇದೀಗ ಕೇಂದ್ರ ಸರ್ಕಾರವೂ ಸಂಪೂರ್ಣ ಸಹಕಾರ ನೀಡಲು ಮುಂದಾಗಿದೆ. ನ್ಯಾಯಾಲಯದಲ್ಲಿ ಕಾನೂನಿನ ನೆರವು ನೀಡುವುದಾಗಿ ಜೋಶಿ ತಿಳಿಸಿದ್ದಾರೆ. ನಮ್ಮ ನಿಲುವನ್ನು ನ್ಯಾಯಾಲಯ ಒಪ್ಪುವ ಸಾಧ್ಯತೆ ಇದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ದಿನದ 24 ಗಂಟೆ ಗಣಿಗಾರಿಕೆ ನಡೆಸಲು ಅವಕಾಶ ಇದೆ. ಆದರೆ ಸಾಗಾಣಿಕೆಗೆ ಮಾತ್ರ 12 ಗಂಟೆಗಳ ಅವಕಾಶ ನೀಡಲಾಗಿದೆ. ಇದರಿಂದ ಉದ್ಯಮಗಳಿಗೆ ಸಮಸ್ಯೆ ಆಗಿದೆ ಎಂದು ಮನವಿ ಬಂದಿದೆ. ಈ ಬಗ್ಗೆ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಈಗ 35 ದಶಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರು ಉತ್ಪಾದನೆ ಆಗುತ್ತಿದೆ. 2030 ರ ವೇಳೆಗೆ 70 ದಶಲಕ್ಷ ಮೆಟ್ರಿಕ್ ಟನ್‌ಗೆ ಕೊಂಡೊಯ್ಯುವ ಗುರಿ ಹೊಂದಲಾಗಿದೆ ಎಂದರು.







ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಲಾಜಿಕಲ್ ರೀಸನಿಂಗ್ ಆಪ್ಟಿಟ್ಯೂಡ್ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಒಂದು ಸರಿಯಾದ ಉತ್ತರ ಅಥವಾ ಪರಿಹಾರಕ್ಕೆ ಬರಬೇಕಾದರೆ ತಾತ್ವಿಕ ಮಟ್ಟದ ವಿಶ್ಲೇಷಣೆ ಇರಬೇಕಾಗುತ್ತದೆ.

ಹೆಚ್ಚು ಅಂಕ ಗಳಿಕೆಗೆ

ಲಾಜಿಕಲ್ ರೀಸನಿಂಗ್

ಅದ್ವಿತ್ ಆರ್. ಕೊಪ್ಪಳ

ಲಾಜಿಕಲ್ ರೀಸನಿಂಗ್ ಎಂಬುದು ಬಹುತೇಕ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಮುಖ ವಿಭಾಗವಾಗಿದ್ದು, ಹೆಚ್ಚು ಅಂಕ ಗಳಿಸಬಹುದಾದ ವಿಷಯ ಎಂದೇ ಪರಿಗಣಿಸಲ್ಪಟ್ಟಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಆಪ್ಟಿಟ್ಯೂಡ್ ಟೆಸ್ಟ್ ಎಂಬುದು ಅವಿಭಾಜ್ಯ ಅಂಗ ಎನ್ನಬಹುದು. ಇದರಲ್ಲಿ ಎರಡು ಉಪ ವಿಭಾಗಗಳಿವೆ.

- ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್
- ಲಾಜಿಕಲ್ ರೀಸನಿಂಗ್

ಹೆಚ್ಚು ಕಡಿಮೆ ಎಲ್ಲಾ ಬಗೆಯ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ರೀಸನಿಂಗ್ ಎಬಿಲಿಟಿ ಎಂಬುದು ಎರಡು ಬಗೆಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಈ ಎರಡು ಬಗೆ ಯಾವುವೆಂದರೆ ಲಾಜಿಕಲ್ ರೀಸನಿಂಗ್ ಮತ್ತು ಅನಾಲಿಟಿಕಲ್ ರೀಸನಿಂಗ್. ಈ ಲೇಖನದಲ್ಲಿ ಲಾಜಿಕಲ್ ರೀಸನಿಂಗ್‌ನಲ್ಲಿರುವ ವಿಷಯಗಳು, ಅವುಗಳನ್ನು ಪರಿಹರಿಸುವ ಬಗೆಯನ್ನು ನೋಡೋಣ.

ಲಾಜಿಕಲ್ ರೀಸನಿಂಗ್ ಅಂದರೆ ಏನು?

ಲಾಜಿಕಲ್ ರೀಸನಿಂಗ್ ಆಪ್ಟಿಟ್ಯೂಡ್ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಒಂದು ಸರಿಯಾದ ಉತ್ತರ ಅಥವಾ ಪರಿಹಾರಕ್ಕೆ ಬರಬೇಕಾದರೆ ತಾತ್ವಿಕ ಮಟ್ಟದ ವಿಶ್ಲೇಷಣೆ ಇರಬೇಕಾಗುತ್ತದೆ.



ಲಾಜಿಕಲ್ ರೀಸನಿಂಗ್ ಅನ್ನು ಎರಡು ವಿಧಗಳಾಗಿ ವಿಭಾಗಿಸಬಹುದು.

- **ವರ್ಬಲ್ ರೀಸನಿಂಗ್:** ಕಾನ್ಸೆಪ್ಟ್ ಅನ್ನು ತಾತ್ವಿಕವಾಗಿ ಅರ್ಥ ಮಾಡಿಕೊಂಡು ಸಮಸ್ಯೆಯನ್ನು ಪರಿಹರಿಸುವುದು. ಇದನ್ನು ಶಬ್ದಗಳಲ್ಲಿ ವ್ಯಕ್ತಪಡಿಸಬೇಕಾಗುತ್ತದೆ. ಒಂದು ವಾಕ್ಯದಲ್ಲಿರುವ ಮಾಹಿತಿ ಹಾಗೂ ಅದರ ಗೂಢಾರ್ಥವನ್ನು ಹೊರತೆಗೆಯುವ ಸಾಮರ್ಥ್ಯದ ಪರೀಕ್ಷೆ ಇಲ್ಲಿ ನಡೆಯುತ್ತದೆ.
- **ನಾನ್ ವರ್ಬಲ್ ರೀಸನಿಂಗ್:** ಇಲ್ಲಿ ಕಾನ್ಸೆಪ್ಟ್ ಅನ್ನು ತಾತ್ವಿಕವಾಗಿ ಅರ್ಥ ಮಾಡಿಕೊಂಡು ಸಮಸ್ಯೆಯನ್ನು ಅಂಕಿಗಳು/ ಅಕ್ಷರಗಳು/ ಚಿತ್ರಗಳಲ್ಲಿ ಶಬ್ದಗಳ ಜೋಡಣೆಯ ಜೊತೆಗೆ ಪರಿಹರಿಸಬೇಕಾಗುತ್ತದೆ. ಇದು ಸಮಸ್ಯೆಯಲ್ಲಿ ಮಾಹಿತಿಯನ್ನು ಸೇರಿಸುವ ಅಥವಾ ಕಡಿಮೆ ಮಾಡುವ ಸಾಮರ್ಥ್ಯವನ್ನು ಒರೆಗೆ ಹಚ್ಚುತ್ತದೆ.

ಲಾಜಿಕಲ್ ರೀಸನಿಂಗ್ ಆಧರಿಸಿದ ಪ್ರಶ್ನೆಗಳನ್ನು ಪರಿಹರಿಸುವ ವಿಧಾನಗಳು

- ಮಾಹಿತಿಯನ್ನು ಸರಿಯಾಗಿ ಓದುವುದು ಮತ್ತು ಅರ್ಥ ಮಾಡಿಕೊಳ್ಳುವುದು.
- ಸೂಕ್ಷ್ಮವಾದ ಲಾಜಿಕಲ್ ಮಾಹಿತಿಯನ್ನು ವಿಶ್ಲೇಷಣೆ ಮಾಡುವುದು.
- ಎಲ್ಲಾ ಸಂಭವನೀಯ ಪರಿಹಾರಗಳ ಬಗ್ಗೆ ಚಿಂತಿಸುವುದು.
- ಬೇರೆ ಸಾಧ್ಯತೆಗಳಿಂದ ಬರುವ ಉತ್ತರಗಳ ಜೊತೆ ಹೋಲಿಕೆ ಮಾಡುವುದು.
- ಒಂದು ಸರಿಯಾದ ಲಾಜಿಕಲ್ ತೀರ್ಮಾನಕ್ಕೆ ಬರುವುದು.

ಲಾಜಿಕಲ್ ರೀಸನಿಂಗ್‌ನಲ್ಲಿ ಈ ಕೆಲವು ಪ್ರಶ್ನೆಗಳನ್ನು ನಿರೀಕ್ಷಿಸಬಹುದು.

- ವರ್ಬಲ್ ಪ್ರಶ್ನೆ: ಇದನ್ನು ವರ್ಬಲ್ ಆಗಿ ಬಿಡಿಸಬಹುದು. ಅಂದರೆ ಪೆನ್ ಮತ್ತು ಪೇಪರ್ ಅಗತ್ಯ ಇರುವುದಿಲ್ಲ.
- ಚಿತ್ರ ಆಧಾರಿತ ಪ್ರಶ್ನೆ: ಪ್ರಶ್ನೆಯಲ್ಲಿ ಮಿರರ್ ಇಮೇಜ್ ನೀಡಬಹುದು. ಇದೇ ರೀತಿಯ ಅಥವಾ ವಿಭಿನ್ನವಾದ ಚಿತ್ರವನ್ನು ಹುಡುಕುವಂತೆ ಪ್ರಶ್ನೆ ಕೇಳಬಹುದು.
- ಪಝಲ್ ಪ್ರಶ್ನೆ: ವಿವಿಧ ರೀತಿಯಲ್ಲಿ ಜನರು/ ದಿನ. ತಿಂಗಳು/ ಸ್ಥಳಗಳನ್ನು ಜೋಡಿಸುವಂತೆ ಕೇಳುತ್ತಾರೆ.
- ಸೀಕ್ವೆನ್ಸ್ ಪ್ರಶ್ನೆ: ಇದರಲ್ಲಿ ಜನರು/ ಅಂಕಿ/ ಅಕ್ಷರಗಳನ್ನು ಸರಣಿಯಾಗಿ ನೀಡಿ ಅದರ ಮೇಲೆ ಪ್ರಶ್ನೆಗಳನ್ನು ಕೇಳಬಹುದು.

ಸ್ಪರ್ಧಾರ್ಥಿಗಳು ಲಾಜಿಕಲ್ ರೀಸನಿಂಗ್ ವಿಭಾಗದಲ್ಲಿ ಈ ಕೆಳಗಿನವುಗಳನ್ನು ಅಭ್ಯಾಸ ಮಾಡಬೇಕಾಗುತ್ತದೆ. ಕ್ಯಾಲೆಂಡರ್, ರಕ್ತ ಸಂಬಂಧ, ಗಡಿಯಾರಗಳು, ಕೋಡಿಂಗ್– ಡಿಕೋಡಿಂಗ್, ಘನಾಕೃತಿ, ಪಝಲ್ಸ್, ಮಿರರ್ ಆಕೃತಿ, ನೀರಿನಲ್ಲಿ ಕಾಣುವ ಆಕೃತಿ, ದಿಕ್ಕುಗಳು, ಫಿಗರ್ ಮ್ಯಾಟ್ರಿಕ್ಸ್, ಪೇಪರ್ ಮಡಿಸುವುದು, ವಿಭಿನ್ನವಾಗಿರುವುದನ್ನು ಗುರುತಿಸುವುದು.

ಸ್ಪರ್ಧಾರ್ಥಿಗಳು ನಾನ್ ವರ್ಬಲ್ ರೀಸನಿಂಗ್‌ಗೆ ವಿಡಿಯೊ ನೋಡಿ ಅಭ್ಯಾಸ ಮಾಡುವುದು ಸೂಕ್ತ.

ಲಾಜಿಕಲ್ ರೀಸನಿಂಗ್ ಮೇಲಿರುವ ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಬಿಡಿಸಿದಷ್ಟೂ ಇದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು.

ಪ್ರಶ್ನೋತ್ತರ

ಸಾಮಾನ್ಯ ಅಧ್ಯಯನ

51) ವೇಲೆನ್ಸಿ ಎಲೆಕ್ಟ್ರಾನ್‌ಗಳು ಎಂದರೆ -
ಎ) ಪರಮಾಣುವಿನ ಮೊದಲ ಕವಚದ ಎಲೆಕ್ಟ್ರಾನ್‌ಗಳು
ಬಿ) ಪರಮಾಣುವಿನ ಎರಡನೇ ಕವಚದ ಎಲೆಕ್ಟ್ರಾನ್‌ಗಳು
ಸಿ) ಪರಮಾಣುವಿನ ಅತ್ಯಂತ ಹೊರ ಕವಚದ ಎಲೆಕ್ಟ್ರಾನ್‌ಗಳು
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ : (ಸಿ)
ವಿವರಣೆ : ಪರಮಾಣುವಿನ ಅತ್ಯಂತ ಹೊರ ಕವಚದಲ್ಲಿರುವ ಎಲೆಕ್ಟ್ರಾನ್‌ಗಳನ್ನು ವೇಲೆನ್ಸಿ ಎಲೆಕ್ಟ್ರಾನ್‌ಗಳು ಎಂದು ಕರೆಯುವರು. ಪರಮಾಣುವಿನ ಅತ್ಯಂತ ಹೊರ ಕವಚವು ಗರಿಷ್ಠ 8 ಎಲೆಕ್ಟ್ರಾನ್‌ಗಳನ್ನು ಹೊಂದಬಹುದು.

52) ಗಾಂಧೀಜಿಯವರು ಈ ಕೆಳಗಿನ ಯಾವ ಸತ್ಯಾಗ್ರಹದಲ್ಲಿ ನೀಲಿ ಬೆಳೆಗಾರರ ಪರವಾಗಿ ಭಾಗವಹಿಸಿದರು?
ಎ) ಚಂಪಾರಣ್ ಸತ್ಯಾಗ್ರಹ
ಬಿ) ಅಹಮದಾಬಾದ್ ಗಿರಣಿ ಮುಷ್ಕರ
ಸಿ) ಬೇಡರ ಸತ್ಯಾಗ್ರಹ ಡಿ) ಖಿಲಾಫತ್ ಚಳವಳಿ
ಉತ್ತರ : (ಎ)
ವಿವರಣೆ : ತಮ್ಮ ಒಟ್ಟು ಭೂಮಿಯ 3/20 ಭಾಗದಲ್ಲಿ 'ನೀಲಿ'ಯನ್ನು ಬೆಳೆಯಲೇಬೇಕೆಂಬ ಒತ್ತಡದಲ್ಲಿದ್ದ ಚಂಪಾರಣ್ಯದ ರೈತರ ಪರವಾಗಿ 1917 ರಲ್ಲಿ ಗಾಂಧೀಜಿಯವರು ಚಂಪಾರಣ್ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಇದು ಅವರ ಮೊದಲ ಸತ್ಯಾಗ್ರಹ ಚಳುವಳಿಯಾಗಿತ್ತು.

53) ಗಾಂಧೀಜಿಯವರು ಆಫ್ರಿಕಾದಿಂದ ಭಾರತಕ್ಕೆ ಬಂದ ವರ್ಷ ಯಾವುದು?
ಎ) 1915 ಬಿ) 1916 ಸಿ) 1917 ಡಿ) 1918
ಉತ್ತರ : (ಎ)
ವಿವರಣೆ : ಭಾರತದ ಇತಿಹಾಸದಲ್ಲಿ 1919 ರಿಂದ 1947 ರ ವರೆಗಿನ ಕಾಲವನ್ನು 'ಗಾಂಧೀ ಯುಗ' ಎಂದು ಕರೆಯುತ್ತಾರೆ. ಮಹಾತ್ಮ ಗಾಂಧೀಜಿಯವರು ಆಫ್ರಿಕಾದಲ್ಲಿ ಅಲ್ಲಿಯ ಸರ್ಕಾರದ ವರ್ಣ ಭೇದ ನೀತಿಯ ವಿರುದ್ಧ ಸತ್ಯಾಗ್ರಹ ಮತ್ತು ಅಹಿಂಸಾ ಮಾರ್ಗದ ಮೂಲಕ ಯಶಸ್ಸನ್ನು ಗಳಿಸಿ 1915 ರಲ್ಲಿ ಭಾರತಕ್ಕೆ ಬಂದರು.

54) 'ಭಾರತೀಯ ನಾಗರೀಕ ಸೇವೆಗಳ ಪರೀಕ್ಷೆ'ಯಲ್ಲಿ ಉತ್ತೀರ್ಣರಾದ ಮೊದಲ ಭಾರತೀಯ ಯಾರು?
ಎ) ದಾದಾಬಾಯಿ ನವರೋಜಿ
ಬಿ) ಸುರೇಂದ್ರನಾಥ ಬ್ಯಾನರ್ಜಿ ಸಿ) ಸತ್ಯೇಂದ್ರನಾಥ್ ಟ್ಯಾಗೋರ್ ಡಿ) ಸುಭಾಷ್ ಚಂದ್ರ ಬೋಸ್
ಉತ್ತರ : (ಸಿ)
ವಿವರಣೆ: ಸತ್ಯೇಂದ್ರನಾಥ್ ಟ್ಯಾಗೋರ್ 'ಭಾರತೀಯ ನಾಗರೀಕ ಸೇವೆಗಳ' ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೊದಲ ಭಾರತೀಯರಾಗಿದ್ದಾರೆ. ಇವರು ರವೀಂದ್ರನಾಥ್ ಟ್ಯಾಗೋರ್‌ರವರ ಎರಡನೇ ಅಣ್ಣ, ಸುರೇಂದ್ರನಾಥ್ ಬ್ಯಾನರ್ಜಿಯವರು ಭಾರತೀಯ ನಾಗರಿಕ ಸೇವೆಗಳ ಪರೀಕ್ಷೆ ಉತ್ತೀರ್ಣರಾದವರಲ್ಲಿ ಎರಡನೆಯವರಾಗಿದ್ದಾರೆ.

55) ಮಹಾತ್ಮ ಗಾಂಧೀಜಿಯವರು ಭಾರತಕ್ಕೆ ಬಂದಾಗ ಆಶ್ರಮವನ್ನು ಯಾವ ನದಿಯ ದಂಡೆಯ ಮೇಲೆ ನಿರ್ಮಿಸಿದರು.?
ಎ) ನರ್ಮದಾ ಬಿ) ಸಬರಮತಿ ಸಿ) ಲೂಸಿ ಡಿ) ತಪತಿ
ಉತ್ತರ : (ಬಿ)
ವಿವರಣೆ : ಭಾರತಕ್ಕೆ ಬಂದಾಗ ಗುಜರಾತಿನ ಅಹಮದಾಬಾದ್‌ನಲ್ಲಿ ಸಬರಮತಿ ನದಿಯ ದಂಡೆಯ ಮೇಲೆ 'ಸಬರಮತಿ' ಆಶ್ರಮವನ್ನು ಸ್ಥಾಪಿಸಿ 'ಸತ್ಯಾಗ್ರಹ' ಎಂಬ ಹೆಸರನ್ನು ಇಟ್ಟರು. ನಂತರ ತಮ್ಮ 'ರಾಜಕೀಯ ಗುರು' ಗೋಖಲೆಯನ್ನು ಭೇಟಿ ಮಾಡಿ ಅವರ ಸಲಹೆಯಂತೆ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು.

56) 'ಖಿಲಾಫತ್ ಚಳವಳಿ'ಯ ನೇತಾರರು ಯಾರು?
ಎ) ಮೌಲಾನ ಅಜಾದ್ ಮತ್ತು ಹಕೀಂ ಅಜ್ಮಲ್ ಖಾನ್
ಬಿ) ರಹಮತ್ ಅಲಿ
ಸಿ) ಶೌಕತ್ ಅಲಿ ಡಿ) ಮೇಲಿನ ಎಲ್ಲರೂ
ಉತ್ತರ : (ಡಿ)
ವಿವರಣೆ : ಖಲೀಫನಿಗಾದ ಅಪಮಾನದಿಂದ ಬ್ರಿಟಿಷರ ವಿರುದ್ಧ ಜಗತ್ತಿನಾದ್ಯಾಂತ ಮುಸ್ಲಿಮರು ಕೋಪಗೊಂಡಿದ್ದರು. ಈ ಸಮಿತಿಯನ್ನು ರಚಿಸಿ, ದೇಶದಾದ್ಯಂತ ಈ ಚಳವಳಿಗೆ ಕರೆ ನೀಡಿದರು. ಈ ಸಮಿತಿಯನ್ನು ಹಿಂದು-ಮುಸ್ಲಿಂ ಸ್ನೇಹವನ್ನು ಗಾಢಗೊಳಿಸುತ್ತದೆ ಎಂದು ಗಾಂಧೀಜಿ ಮತ್ತು ತಿಲಕ್‌ರವರು ನಂಬಿದರು.

57) ಯುಗಾಂತರ ಪತ್ರಿಕೆಯನ್ನು ಯಾರು ಆರಂಭಿಸಿದರು?
ಎ) ಮೇಡಂ ಕಾಮಾ ಬಿ) ಬರೀಂದ್ರ ಕುಮಾರ್ ಘೋಷ್
ಸಿ) ಸಚಿಂದ್ರನಾಥ್ ಸನ್ಯಾಲ್ ಡಿ) ಬ್ರಹ್ಮೋ ಉಪಾಧ್ಯಾಯ
ಉತ್ತರ : (ಬಿ)
ವಿವರಣೆ : ಯುಗಾಂತರ ಪತ್ರಿಕೆಯನ್ನು ಬರೀಂದ್ರ ಕುಮಾರ್ ಘೋಷ್‌ರವರು 1906ರಲ್ಲಿ ಆರಂಭಿಸಿದರು. ಮೇಡಂ ಕಾಮಾರವರು ವಂದೇ ಮಾತರಂ ಪತ್ರಿಕೆಯನ್ನು 1906ರಲ್ಲಿ, ಸಚೀಂದ್ರನಾಥ್ ಸನ್ಯಾಲ್‌ರವರು ಬಂದಿ ಜೀವನ್ ಮತ್ತು ಆತ್ಮಶಕ್ತಿ ಪತ್ರಿಕೆಗಳನ್ನು 1922ರಲ್ಲಿ ಮತ್ತು ಬ್ರಹ್ಮೋ ಉಪಾಧ್ಯಾಯರವರು ಸಂಧ್ಯಾ ಪತ್ರಿಕೆಯನ್ನು 1906ರಲ್ಲಿ ಆರಂಭಿಸಿದರು.

58) 'ಕಾಂಗ್ರೆಸ್ ಒಂದು ಭಿಕ್ಷೆ ಬೇಡುವ ಸಂಸ್ಥೆ' ಎಂದು ಯಾರು ಹೇಳಿದರು?
ಎ) ಸುಭಾಷ್ ಚಂದ್ರ ಬೋಸ್
ಬಿ) ಮೌಲಾನಾ ಕಲಂ ಅಜಾದ್ ಸಿ) ಬಿಪಿನ್ ಚಂದ್ರ ಪಾಲ್
ಡಿ) ಅರವಿಂದ್ ಘೋಷ್
ಉತ್ತರ : (ಡಿ)
ವಿವರಣೆ : ಅರವಿಂದ್ ಘೋಷ್‌ರು ಕಾಂಗ್ರೆಸ್ ಒಂದು ಭಿಕ್ಷೆ ಬೇಡುವ ಸಂಸ್ಥೆ ಎಂದು ಹೇಳಿದರು. ಅರಬಿಂದೋ ಘೋಷ್‌ರವರು 'ಧರ್ಮ ಕರ್ಮ ಯೋಗಿನ್ ' ಎಂಬ ಪತ್ರಿಕೆ ಆರಂಭಿಸಿದರು. ಅರಬಿಂದೋ ಘೋಷ್‌ರವರು ಇಂಗ್ಲೆಂಡ್‌ನಲ್ಲಿದ್ದಾಗ ಬಾಂಬ್ ತಯಾರಿಕೆ ಮತ್ತು ಅವುಗಳ ಉಪಯೋಗ ಕಲಿತರು. ಪುದುಚೇರಿಯಲ್ಲಿ ಅರವಿಂದ ಆಶ್ರಮವನ್ನು ಸ್ಥಾಪಿಸಿದರು.

59) ಈ ಕೆಳಗಿನ ಯಾವುದನ್ನು 'ಜಲ ಪಾಷಾಣ' ಎಂದು ಕರೆಯುವರು?
ಎ) ಕೆಂಪು ರಂಜಕ ಬಿ) ಬಿಳಿ ರಂಜಕ
ಸಿ) ಗಂಧಕ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ : (ಬಿ)
ವಿವರಣೆ : ಬಿಳಿ ರಂಜಕವು ಗಾಳಿಗೆ ತೆರೆದಿಟ್ಟ ಕೂಡಲೆ ಹೊತ್ತಿ ಉರಿಯುತ್ತದೆ. ಆದ್ದರಿಂದ ಇದನ್ನು ಯಾವಾಗಲೂ ನೀರಿನಲ್ಲಿ ಸಂಗ್ರಹಿಸಿ ಇಟ್ಟಿರುತ್ತಾರೆ. ಬಿಳಿ ರಂಜಕ ನೀರಿನಲ್ಲಿ ಕರಗುವುದಿಲ್ಲ. ಇದು ಅತ್ಯಂತ ವಿಷಕಾರಿ. ಆದ್ದರಿಂದ ಇದನ್ನು 'ಜಲ ಪಾಷಾಣ' ಎನ್ನುವರು.

(ಪ್ರಶ್ನೋತ್ತರ ಸಂಯೋಜನೆ: www.iasjnana.com ಸಂಪರ್ಕಕ್ಕೆ: 9916399276)

ಪ್ರಜಾವಾಣಿ ಉದ್ಯೋಗ ವಾರ್ತೆ

ರಾಜ್ಯದಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳು

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳ ಸಂಖ್ಯೆ: 3,533
- ಹುದ್ದೆ: ಪೊಲೀಸ್ ಕಾನ್‌ಸ್ಟೇಬಲ್
- ಸ್ಥಳ: ಕರ್ನಾಟಕದೆಲ್ಲೆಡೆ
- ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಜೂನ್ 25, 2021ಕ್ಕೆ ಅನ್ವಯವಾಗುವಂತೆ ಪಿಯುಸಿ ಅಥವಾ ತತ್ಸಮಾನ ಶಿಕ್ಷಣ ಮುಗಿಸಿರಬೇಕು.
- ವಯೋಮಿತಿ: ಅರ್ಜಿ ಸಲ್ಲಿಕೆಗೆ ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅನುಗುಣವಾಗಿ ಅಭ್ಯರ್ಥಿಗೆ ಕನಿಷ್ಠ 19 ವರ್ಷ ವಯಸ್ಸಾಗಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಗರಿಷ್ಠ 27, ಇತರ ಅಭ್ಯರ್ಥಿಗಳಿಗೆ ಗರಿಷ್ಠ 25 ವರ್ಷ. ಬುಡಕಟ್ಟು ಜನಾಂಗದ ಅಭ್ಯರ್ಥಿಗಳಿಗೆ ಗರಿಷ್ಠ 30 ಮೀರಿರಬಾರದು.
- ಅರ್ಜಿ ಶುಲ್ಕ: ಸಾಮಾನ್ಯ ವರ್ಗ, ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ₹ 400 ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ 1ರ ಅಭ್ಯರ್ಥಿಗಳಿಗೆ ₹ 200.
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 25, 2021ಹೆಚ್ಚಿನ ಮಾಹಿಗೆ: https://recruitment.ksp.gov.in/

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ


ಮೇಲ್ಮೈ ವಿಸ್ತೀರ್ಣಗಳು ಮತ್ತು ಘನಫಲಗಳು

ಎಸ್ಸೆಸ್ಸೆಲ್ಸಿ

ಗಣಿತ

ಪೀಠಿಕೆ


ನೀರು ಅಥವಾ ತೈಲವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆಗೆದುಕೊಂಡು ಹೋಗುವ ಲಾರಿಯ ಹಿಂಬದಿಯಲ್ಲಿ ಸಂಗ್ರಹಕವನ್ನು ನೀವು ನೋಡುತ್ತೀರಿ.



ಇದು ಮೇಲೆ ತೋರಿಸಿದ ನಾಲ್ಕು ಮೂಲ ಘನಾಕೃತಿಯ ಆಕಾರದಲ್ಲಿ ಯಾವ ಆಕೃತಿಯನ್ನು ಹೋಲುತ್ತದೆ? ಅದು ಒಂದು ಸಿಲಿಂಡರ್, ಎರಡು ಅರ್ಧಗೋಳಾಕಾರವನ್ನು ಅದರ ಎರಡು ಪಾದಗಳಲ್ಲಿ ಸೇರಿಸಿ ಮಾಡಿದೆ ಎಂದು ಊಹಿಸಬಹುದು.

ಜೋಡಿಸಿದ ಘನಗಳ ಮೇಲ್ಮೈ ವಿಸ್ತೀರ್ಣ

ಸಂಗ್ರಹಕವನ್ನು ನಾವು ಪುನಃ ತೆಗೆದುಕೊಳ್ಳೋಣ. ಇಂತಹ ಘನವಸ್ತುಗಳ ಮೇಲ್ಮೈ ವಿಸ್ತೀರ್ಣವನ್ನು ಹೇಗೆ ಕಂಡುಹಿಡಿಯಬಹುದು? ಒಂದು ಹೊಸ ಸಮಸ್ಯೆಯು ಯಾವಾಗಲಾದರೂ ನಮಗೆ ಎದುರಾದರೆ ಅದನ್ನು ನಾವು ಈಗಾಗಲೇ ಬಿಡಿಸಿದ ಚಿಕ್ಕ ಸಮಸ್ಯೆಯಾಗಿ ಮಾಡಿಕೊಳ್ಳಬೇಕು. ಈ ಘನಾಕೃತಿಯಲ್ಲಿ ಸಿಲಿಂಡರ್‌ನ ಎರಡು ಪಾದಗಳಲ್ಲಿ ಅರ್ಧಗೋಳವನ್ನು ಅಳವಡಿಸಲಾಗಿದೆ ಎಂದು ನಾವು ಕಾಣಬಹುದು. ಈ ಮೂರು ಭಾಗಗಳನ್ನು ಒಟ್ಟಿಗೆ ಸೇರಿಸಿದ ನಂತರ ಈ ರೀತಿ ಕಾಣುತ್ತದೆ.




ಹೊಸದಾಗಿ ರೂಪುಗೊಂಡ ಘನಾಕೃತಿಯ ಮೇಲ್ಮೈ ವಿಸ್ತೀರ್ಣವನ್ನು ಪರಿಗಣಿಸಿದರೆ ನಾವು ಎರಡು ಅರ್ಧಗೋಳದ ವಕ್ರಮೇಲ್ಮೈಯ ವಿಸ್ತೀರ್ಣಗಳನ್ನು ಮತ್ತು ಸಿಲಿಂಡರ್‌ನ ವಕ್ರ ಮೇಲ್ಮೈ ವಿಸ್ತೀರ್ಣವನ್ನು ಮಾತ್ರ ಕಾಣಬಹುದು. ಹೀಗಾಗಿ ಹೊಸದಾಗಿ ಉಂಟಾದ ಘನವಸ್ತುವಿನ ಒಟ್ಟು ಮೇಲ್ಮೈ ವಿಸ್ತೀರ್ಣವು ಪ್ರತಿ ಬಿಡಿ ಭಾಗಗಳ ವಕ್ರ ಮೇಲ್ಮೈ ವಿಸ್ತೀರ್ಣದ ಮೊತ್ತಕ್ಕೆ ಸಮವಾಗಿರುತ್ತದೆ.

ಮೇಲ್ಮೈ ವಿಸ್ತೀರ್ಣಗಳು ಮತ್ತು ಘನಫಲಗಳು

(ಹೊಸ ಘನದ ಒಟ್ಟು ಮೇಲ್ಮೈ ವಿಸ್ತೀರ್ಣ) = (ಮೊದಲ ಅರ್ಧಗೋಳದ ಪಾರ್ಶ್ವ ಮೇಲ್ಮೈ ವಿಸ್ತೀರ್ಣ) + (ಸಿಲಿಂಡರ್‌ನ ಪಾರ್ಶ್ವ ಮೇಲ್ಮೈ ವಿಸ್ತೀರ್ಣ) + (ಎರಡನೆಯ ಅರ್ಧಗೋಳದ ಪಾರ್ಶ್ವ ಮೇಲ್ಮೈ ವಿಸ್ತೀರ್ಣ).

ಜೋಡಿಸಿದ ಘನಾಕೃತಿ ಘನಫಲ



ಹಿಂದಿನ ವಿಭಾಗದಲ್ಲಿ ನಾವು ಎರಡು ಜೋಡಿಸಿದ ಮೂಲ ಘನಾಕೃತಿಗಳ ಮೇಲ್ಮೈ ವಿಸ್ತೀರ್ಣವನ್ನು ಹೇಗೆ ಕಂಡುಹಿಡಿಯಬಹುದು ಎಂದು ಚರ್ಚಿಸಿದ್ದೇವೆ. ಈಗ ನಾವು ಅವುಗಳ ಘನಫಲಗಳನ್ನು ಹೇಗೆ ಲೆಕ್ಕಿಸಬಹುದು ಎಂಬುದನ್ನು ನೋಡೋಣ. ಮೇಲ್ಮೈ ವಿಸ್ತೀರ್ಣವನ್ನು ಲೆಕ್ಕಿಸುವಾಗ ಗಮನಿಸಬೇಕಾದ್ದೇನೆಂದರೆ ನಾವು ಎರಡು ಘನಾಕೃತಿಗಳ ಮೇಲ್ಮೈ ವಿಸ್ತೀರ್ಣದ ಭಾಗಗಳನ್ನು ಸಂಕಲನ ಮಾಡಲಿಲ್ಲ. ಏಕೆಂದರೆ ಅವುಗಳನ್ನು ಸೇರಿಸುವ ಪ್ರಕ್ರಿಯೆಯಲ್ಲಿ ಮೇಲ್ಮೈ ವಿಸ್ತೀರ್ಣದ ಭಾಗಗಳನ್ನು ಸಂಕಲನ ಮಾಡಲಿಲ್ಲ. ಏಕೆಂದರೆ ಅವುಗಳನ್ನು ಸೇರಿಸುವ ಪ್ರಕ್ರಿಯೆಯಲ್ಲಿ ಮೇಲ್ಮೈ ವಿಸ್ತೀರ್ಣಗಳಾದ ಕೆಲವು ಭಾಗಗಳು ಕಾಣದಾದವು. ಆದರೆ ನಾವು ಘನಾಕೃತಿಯ ಘನಫಲವನ್ನು ಲೆಕ್ಕಿಸುವಾಗ ಹೀಗೆ ಆಗುವುದಿಲ್ಲ. ಎರಡು ಮೂಲ ಘನಾಕೃತಿಗಳನ್ನು ಸೇರಿಸಿ ಉಂಟಾದ ಘನಾಕೃತಿಯ ಘನಫಲವು ವಾಸ್ತವವಾಗಿ ಆ ಎರಡು ಘನಾಕೃತಿಗಳ ಘನಫಲಗಳ ಮೊತ್ತವಾಗಿರುತ್ತದೆ.

(ಮುಂದುವರಿಯುವುದು)

ಸಂಕುಲನ ದಕ್ಷತೆ


ದ್ವಿತೀಯ ಪಿಯುಸಿ

ರಸಾಯನ ಶಾಸ್ತ್ರ

ಘಟಕ ಕಣಗಳು ಯಾವುದೇ ನಿಕಟ ಜೋಡಣೆಯಿಂದ ಮಾಡಲ್ಪಟ್ಟಿವೆಯಾದರೂ ನಿರರ್ಥಕಗಳ ರೂಪದಲ್ಲಿ ಕೆಲವು ಖಾಲಿ ಜಾಗಗಳು ಉಳಿದಿರುತ್ತವೆ. ಸಂಕುಲನ ದಕ್ಷತೆಯು ಕಣಗಳಿಂದ ತುಂಬಿದ ಒಟ್ಟು ಜಾಗದ ಶೇಕಡಾವಾರು ಆಗಿದೆ.

hcp ಮತ್ತು ccp ರಚನೆಯ ಸಂಕುಲನ ದಕ್ಷತೆ:

ಘಟಕ ಕೋಶದ ಅಂಚಿನ ಉದ್ದವನ್ನು a ಎಂದು ಮತ್ತು ವಿಕರ್ಣ AC ಯನ್ನು b ಎಂದು ಪರಿಗಣಿಸೋಣ.



ΔABC ಯಲ್ಲಿ

$$AC^2 = AB^2 + BC^2$$

$$b^2 = a^2 + a^2$$

$$b^2 = 2a^2$$

$$b = \sqrt{2a}$$

r ಅನ್ನು ಗೋಳದ ತ್ರಿಜ್ಯವೆಂದು ತೆಗೆದುಕೊಂಡರೆ

$$r\,a = \frac{4r}{\sqrt{2}} = \sqrt[2]{2}\,r$$

$$b = 4r = \sqrt{2}a$$

(ಹೀಗೂ ಬರೆಯಬಹುದು $r = \frac{a}{\sqrt[2]{2r}}$)

ನಮಗೆ ತಿಳಿದಿರುವುದೇನೆಂದರೆ ccp ರಚನೆಯಲ್ಲಿ ಪ್ರತಿಯೊಂದು ಘಟಕ ಕೋಶವು ಪರಿಣಾಮಕಾರಿಯಾಗಿ 4 ಗೋಳಗಳನ್ನು ಹೊಂದಿದೆ. 4 ಗೋಳಗಳ ಒಟ್ಟು ಘನಫಲವು

$4 \times (\frac{4}{3})\pi r^3$ ಮತ್ತು ಘನದ ಘನಫಲವು a^3 ಅಥವಾ $(2\sqrt{2}r)^3$ ಆದ್ದರಿಂದ


$$\text{ಸಂಕಲನ ದಕ್ಷತೆ} = \frac{\text{ಘಟಕಕೋಶದಲ್ಲಿ 4 ಗೋಳಗಳು}}{\text{ಘಟಕಕೋಶದ ಒಟ್ಟು ಘನಗಳು}} \times 100$$

$$= \frac{4 \times (4/3)\pi r^3 \times 100}{(2\sqrt{2}r)^3}$$

$$= \frac{16/3\ \pi r^3 \times 100}{16\sqrt{2}r^3}$$

$$= 74 \text{ percent}$$

ಕಾಯಕೇಂದ್ರಿತ ಘನ ರಚನೆಯ ಸಂಕುಲನ ದಕ್ಷತೆ



(BCC) ΔEFD ಯಲ್ಲಿ $b^2 = a^2 + a^2 = 2a^2$

$$b = \sqrt{2a}$$

ಈಗ ΔAFD ಯಲ್ಲಿ $c^2 = a^2 + b^2 = a^2 + 2a^2 = 3a^2$

ವಿಕರ್ಣದ ಮೇಲಿರುವ ಎಲ್ಲಾ ಮೂರು ಗೋಳಗಳು ಪರಸ್ಪರ ತಾಗಿಕೊಂಡಿರುವುದರಿಂದ ಕಾಯದ ವಿಕರ್ಣದ ಉದ್ದ C ಯು 4 r ಆಗಿರುತ್ತದೆ.

ಆದ್ದರಿಂದ $\sqrt{3}a = 4\,r$

$$a = \frac{4r}{\sqrt{3}}$$

ನಾವು ಹೀಗೂ ಬರೆಯಬಹುದು $r = \frac{a}{\sqrt[2]{2r}}a$

ಈ ವಿಧದ ರಚನೆಯಲ್ಲಿ ಪರಮಾಣುಗಳ ಒಟ್ಟು ಸಂಖ್ಯೆ 2 ಆಗಿದ್ದು, ಅವುಗಳ ಘನಫಲವು $2 \times (\frac{3}{4})\pi r^3$

ಘನದ ಘನಫಲವು a3 ಇದು $(\frac{4}{\sqrt{3}}r)^3$ **ಗೆ ಸಮನಾಗಿರುತ್ತದೆ.**


ಅಥವಾ $a^3 = (\frac{4}{\sqrt{3}}r)^3$

$$\text{ಸಂಕುಲನ ದಕ್ಷತೆ} = \frac{\text{ಎರಡು ಗೋಳಗಳು ಆಕ್ರಮಿಸುತ್ತಿರುವ ಘನಫಲ}}{\text{ಘಟಕ ಕೋಶದ ಒಟ್ಟು ಘನಗಳು}} \times 100$$

$$= \frac{2 \times (4/3)\pi r^3 \times 100}{[4/\sqrt{3})r]^3}$$

$$\frac{(8/3)\pi r^3 \times 100}{64/(\sqrt[3]{3})r^3} = 68 \text{ percent}$$

ಸರಳ ಘನ ಜಾಲರಿಯ ಸಂಕುಲನ ದಕ್ಷತೆ



ಸರಳ ಘನ ಜಾಲರಿಯಲ್ಲಿ ಕಣಗಳು ಘನದ ಮೂಲೆಗಳಲ್ಲಿ ಮಾತ್ರ ಇರುತ್ತವೆ. ಈ ಕಣಗಳು ತುದಿಗಳಲ್ಲಿ ಒಂದಕ್ಕೊಂದು ತಾಗಿಕೊಂಡಿರುತ್ತವೆ. ಹಾಗಾಗಿ a ಅಂಚಿನ ಉದ್ದ ಅಥವಾ ಘನದ ಪಾರ್ಶ್ವ a ಮತ್ತು ಪ್ರತಿ ಕಣದ ತ್ರಿಜ್ಯ r ಈ ರೀತಿ ಸಂಬಂಧಿಸಲ್ಪಟ್ಟಿವೆ. a = 2r ಘನ ಘಟಕ ಕೋಶದ ಘನಫಲ = a3 = (2r)3 = 8r3 ಸರಳ ಘನ

ಘಟಕ ಕೋಶವು ಕೇವಲ ಒಂದು ಪರಮಾಣುವನ್ನು ಹೊಂದಿರುವುದರಿಂದ ಆಕ್ರಮಿತ ಜಾಗದ ಘನಫಲ

$$= \frac{3}{4}\pi r^3$$

$$\text{ಸಂಕುಲನ ದಕ್ಷತೆ} = \frac{\text{ಒಂದು ಪರಮಾಣುವಿನ ಘನಫಲ}}{\text{ಘಟಕ ಕೋಶದ ಒಟ್ಟು ಘನಫಲ}} \times 100$$

$$= \frac{4/3\sqrt{\ }r^3}{8r^3} \times 100$$

$$= \frac{\pi}{6} \times 100 = 52.36 = 52.4 \text{ percent}$$

ಹೀಗಾಗಿ ಸಿಸಿಪಿ ಮತ್ತು ಎನ್‌ಸಿಪಿ ರಚನೆಗಳು ಗರಿಷ್ಠ ಸಂಕುಲನ ದಕ್ಷತೆಯನ್ನು ಹೊಂದಿವೆ ಎಂದು ತೀರ್ಮಾನಿಸಬಹುದು.

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಎಲೆಕ್ಟ್ರೊ ಕೆಮಿಸ್ಟ್ರಿ– ಎಲೆಕ್ಟ್ರೊಲಿಟಿಕ್ ಸೆಲ್ಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3bWtlaj

ನಾಲ್ವರ ಬಂಧನ: 200 ಕೆ.ಜಿ. ಗಾಂಜಾ ವಶ

ಮಂಗಳೂರು: ಆಂಧ್ರಪ್ರದೇಶದಿಂದ ಗಾಂಜಾ ತಂದು ಕೇರಳ ಹಾಗೂ ಕರ್ನಾಟಕದಲ್ಲಿ ಮಾರಾಟ ಮಾಡುತ್ತಿದ್ದ ಜಾಲವನ್ನು ನಗರ ಪೊಲೀಸರು ಭೇದಿಸಿದ್ದು, ನಾಲ್ವರನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 200 ಕೆ.ಜಿ. ಗಾಂಜಾ, 3 ತಲವಾರ್, 1 ಚಾಕು ವಶಪಡಿಸಿಕೊಳ್ಳಲಾಗಿದೆ.

ಕಾಸರಗೋಡಿನ ಮುಹಮ್ಮದ್ ಫಾರೂಕ್, ಕುಶಾಲನಗರದ ಸಯ್ಯದ್ ಮುಹಮ್ಮದ್, ಮಂಗಳೂರು ಮುಡಿಪುವಿನ ಮುಹಮ್ಮದ್ ಅನ್ಸಾರ್, ಮಂಜೇಶ್ವರದ ಮೊಯ್ದಿನ್ ನವಾಝ್ ಬಂಧಿತರು ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಆಂಧ್ರ ಪ್ರದೇಶದ ವಿಶಾಖಪಟ್ಟಣ ಬಳಿ ಗ್ರಾಮವೊಂದರಿಂದ ಮಂಗಳೂರು ಹಾಗೂ ಕಾಸರಗೋಡು ಭಾಗಕ್ಕೆ ಗಾಂಜಾ ಮಾರುತ್ತಿರುವ ಮಾಹಿತಿ ದೊರೆತಿತ್ತು. ಈ ಗಾಂಜಾವನ್ನು ಹಾಸನ ಕಡೆಯಿಂದ ಮಂಗಳೂರಿಗೆ ತರಲಾಗುತ್ತಿದೆ ಎಂಬ ಮಾಹಿತಿಯೂ ಲಭಿಸಿತ್ತು. ಕಾರ್ಯಾಚರಣೆ ನಡೆಸಿದ ಮೂಡುಬಿದಿರೆ ಸಬ್ ಇನ್‌ಸ್ಪೆಕ್ಟರ್ ಸುದೀಪ್ ಮತ್ತು ಸಿಬ್ಬಂದಿ, ಕೆ.ಸಿ. ರೋಡ್ ಬಳಿ ಮೀನು ಸಾಗಣೆ ಲಾರಿ ಹಾಗೂ ಕಾರನ್ನು ತಪಾಸಣೆ ಮಾಡಿದಾಗ ಗಾಂಜಾ ಪತ್ತೆಯಾಗಿದೆ ಎಂದು ಹೇಳಿದ್ದಾರೆ.

ಸಕ್ರಿಯ ಪ್ರಕರಣ 4.09 ಲಕ್ಷಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖ ಕಂಡಿದ್ದು, 24 ಗಂಟೆಗಳ ಅವಧಿಯಲ್ಲಿ 26,811 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 4.09 ಲಕ್ಷಕ್ಕೆ ಇಳಿಕೆಯಾಗಿದೆ.

ಈ ತಿಂಗಳು ಮೂರನೇ ವಾರದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 6 ಲಕ್ಷದ ಗಡಿ ದಾಟಿತ್ತು. ರಾಜ್ಯದಲ್ಲಿ ಕೊರೊನಾ ಸೋಂಕಿತರಲ್ಲಿ ಬೆಂಗಳೂರಿನಲ್ಲಿ 285 ಮಂದಿ ಸೇರಿದಂತೆ ರಾಜ್ಯದಲ್ಲಿ 530 ಮಂದಿ ಸಾವಿಗೀಡಾಗಿರುವುದು ಬುಧವಾರ ದೃಢಪಟ್ಟಿದೆ. ಮರಣ ಪ್ರಮಾಣ ದರ ಶೇ 1.97ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 26,929ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.37 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 19.48ಕ್ಕೆ ಇಳಿಕೆಯಾಗಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 24.99 ಲಕ್ಷ ದಾಟಿದೆ. ಸೋಂಕಿತರಲ್ಲಿ 40,741 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 20.62 ಲಕ್ಷ ದಾಟಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರು ಗ್ರಾಮಾಂತರದಲ್ಲಿ 35 ಮಂದಿ, ಬಳ್ಳಾರಿಯಲ್ಲಿ 22 ಮಂದಿ, ತುಮಕೂರು, ಶಿವಮೊಗ್ಗ, ಮೈಸೂರು ಹಾಗೂ ಬೆಳಗಾವಿಯಲ್ಲಿ ತಲಾ 14 ಮಂದಿ ಮೃತಪಟ್ಟಿದ್ದಾರೆ.

ಬೆಂಗಳೂರಿನಲ್ಲಿ 24 ಗಂಟೆಗಳ ಅವಧಿಯಲ್ಲಿ 6,433 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರು (2,792), ಹಾಸನ (1,471), ತುಮಕೂರು (1,399), ದಾವಣಗೆರೆ (1,309), ಬೆಳಗಾವಿ (1,205) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.



‘ಲಸಿಕೆ: ಖಾಸಗಿ ಆಸ್ಪತ್ರೆ – ರಾಜ್ಯ ಸರ್ಕಾರ ಒಳ ಒಪ್ಪಂದ’

ಬೆಂಗಳೂರು: ‘ಖಾಸಗಿ ಆಸ್ಪತ್ರೆಗಳ ಜತೆ ರಾಜ್ಯ ಸರ್ಕಾರ ಒಳ ಒಪ್ಪಂದ ಮಾಡಿಕೊಂಡಿದೆ. ಆ ಮೂಲಕ, ಯುವ ಸಮುದಾಯಕ್ಕೆ ಕೋವಿಡ್ ಲಸಿಕೆ ಲಭ್ಯತೆ ದುಬಾರಿ ಆಗುವಂತೆ ಮಾಡುತ್ತಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಶಾಸಕ ರಾಮಲಿಂಗಾರೆಡ್ಡಿ ಆರೋಪಿಸಿದರು.

ಸಂಸದ ಡಿ.ಕೆ. ಸುರೇಶ್, ಶಾಸಕ ಯು.ಟಿ. ಖಾದರ್, ಪಕ್ಷದ ಮುಖಂಡ ಎಚ್.ಎಂ. ರೇವಣ್ಣ ಜತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘18ರಿಂದ 45ರ ವಯೋಮಾನದವರಿಗೆ ಕೋವಿಡ್ ಲಸಿಕೆ ನೀಡಿಕೆ ಉದ್ಘಾಟಿಸಿದ ಸರ್ಕಾರ ವಿತರಣೆ ನಿಲ್ಲಿಸಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಬೆಲೆಗೆ ಲಸಿಕೆ ಕೊಡಿಸುವ ಕಾರ್ಯಕ್ಕೆ ಉತ್ತೇಜನ ನೀಡಿ ಭ್ರಷ್ಟಾಚಾರಕ್ಕೆ ಮುಂದಾಗಿದೆ’ ಎಂದು ದೂರಿದರು.

‘ಸರ್ಕಾರಿ ಆಸ್ಪತ್ರೆಯಲ್ಲಿ ಲಸಿಕೆ ಲಭ್ಯ ಇಲ್ಲ. ಖಾಸಗಿ ಆಸ್ಪತ್ರೆಗಳಿಗೆ ಸಿಗುತ್ತಿದ್ದು, ₹ 750ರಿಂದ ₹ 1,400 ವಸೂಲು ಮಾಡಲಾಗುತ್ತಿದೆ. ಯಾರು ಬೇಕಾದರೂ ಹಣ ಕೊಟ್ಟು ಲಸಿಕೆ ಪಡೆಯಬಹುದು. ಇದು ಕಾಳಸಂತೆಗೆ ಅವಕಾಶ ಕೊಟ್ಟಂತೆ’ ಎಂದರು. ಈ ಬಗ್ಗೆ ‘ಪ್ರಜಾವಾಣಿ’ ಪತ್ರಿಕೆಯ ಮೇ 26ರ ಸಂಚಿಕೆಯಲ್ಲಿ ‘ಜನಸಾಮನ್ಯರಿಗೆ ದುಬಾರಿಯಾದ ಲಸಿಕೆ’ ಶೀರ್ಷಿಕೆಯಡಿ ವರದಿ ಪ್ರಕಟಗೊಂಡಿತ್ತು.

ಲಸಿಕೆ ಪ್ರಶ್ನಿಸಿದ ಅರ್ಜಿದಾರರಿಗೆ ದಂಡ

ಬೆಂಗಳೂರು: ವೈದ್ಯಕೀಯ ಪ್ರಯೋಗ ಪೂರ್ಣಗೊಳ್ಳದೆ ಕೋವಿಡ್ ಲಸಿಕೆ ನೀಡದಂತೆ ತಡೆ ಕೋರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ವ್ಯಕ್ತಿಗೆ ಹೈಕೋರ್ಟ್ ₹50 ಸಾವಿರ ದಂಡ ವಿಧಿಸಿದೆ.

ನಿವೃತ್ತ ಸೇನಾಧಿಕಾರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಅರ್ಜಿ ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿಲ್ಲ ಎಂದು ಅಭಿಪ್ರಾಯಪಟ್ಟಿತು.

‘ಎರಡು ಲಸಿಕೆಗಳಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. 2019ರ ಔಷಧ ನಿಯಮಾವಳಿಗಳಿಗೆ ಇದು ವಿರುದ್ಧವಾಗಿದೆ. ನಿಯಮಗಳನ್ನು ಗಾಳಿಗೆ ತೂರಲಾಗಿದೆ’ ಎಂದು ಅರ್ಜಿದಾರರ ಆರೋಪಿಸಿದ್ದರು. ‘ಲಸಿಕೆ ಅಭಿಯಾನ ಆರಂಭವಾಗಿ ಐದು ತಿಂಗಳು ಪೂರ್ಣಗೊಂಡಿದೆ. ಅದನ್ನು ಪ್ರಶ್ನಿಸಿ ಈಗ ಸಲ್ಲಿಕೆಯಾಗಿರುವ ಅರ್ಜಿಯನ್ನು ಪರಿಗಣಿಸಲು ಸಾಧ್ಯವಿಲ್ಲ. ಅರ್ಜಿ ಸಲ್ಲಿಸಿ ನ್ಯಾಯಾಲಯದ ಸಮಯ ವ್ಯರ್ಥ ಮಾಡಲಾಗಿದೆ’ ಎಂದು ಪೀಠ ತಿಳಿಸಿತು.

ಮಾಸ್ಕ್ ಧರಿಸಲು ಹೇಳಿದ್ದಕ್ಕೆ ಹತ್ಯೆ

ಪ್ರಜಾವಾಣಿ ವಾರ್ತೆ

ಭದ್ರಾವತಿ: ಮಾಸ್ಕ್ ಹಾಕಲು ಹಾಗೂ ಅನವಶ್ಯವಾಗಿ ಓಡಾಡಬೇಡಿ ಎಂದು ಹೇಳಿದ ಗುತ್ತಿಗೆ ಪೌರಕಾರ್ಮಿಕನ ಮೇಲೆ ಹಲ್ಲೆ ನಡೆಸಿ ಹತ್ಯೆ ಮಾಡಿರುವ ಪ್ರಕರಣ ಹಳೇನಗರ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ.

ಗುತ್ತಿಗೆ ಪೌರಕಾರ್ಮಿಕ ಸುನಿಲ್ (24) ಹತ್ಯೆಯಾದ ವ್ಯಕ್ತಿ. ಅವರೊಂದಿಗಿದ್ದ ಶ್ರೀಕಂಠ (23) ಅವರ ಮೇಲೂ ಹಲ್ಲೆ ನಡೆದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ಪುರಸಭೆಯಲ್ಲಿ ಬದಲಿ ನೌಕರನಾಗಿ ಕೆಲಸ ಮಾಡುತ್ತಿದ್ದಾರೆ.

ಘಟನೆ ವಿವರ: ಸುನಿಲ್ ಮತ್ತು ಶ್ರೀಕಂಠ ಜೈಭೀಮ್ ನಗರದ ತಮ್ಮ ಮನೆ ಬಳಿ ಮಂಗಳವಾರ ಸಂಜೆ ನಿಂತಿದ್ದ ವೇಳೆ ಗುಟ್ಕಾ ತೆಗೆದುಕೊಳ್ಳಲು ಬಂದ ನಿಶಾದ್ ಎಂಬುವರಿಗೆ, ‘ಪೊಲೀಸರು ನೋಡಿದರೆ ಬಯ್ಯುತ್ತಾರೆ, ಅನವಶ್ಯ ಓಡಾಟ ಮಾಡಬೇಡಿ. ಮಾಸ್ಕ್ ಹಾಕಿಕೊಳ್ಳಿ’ ಎಂದು ಹೇಳಿದರು. ಆಗ ಮಾತಿನ ಚಕಮಕಿ ನಡೆಯಿತು.

ಸಾರಿಗೆ ನೌಕರರ ಮುಷ್ಕರ: ಪ್ರತಿವಾದಿಗಳ ಸೇರ್ಪಡೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರ ಪ್ರಶ್ನಿಸಿ ಸಲ್ಲಿಕೆಗಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ನೌಕರರ 6 ಸಂಘಟನೆಗಳು ಮತ್ತು 2 ಸಾರಿಗೆ ನಿಗಮಗಳನ್ನು ಹೈಕೋರ್ಟ್ ಪ್ರತಿವಾದಿಯನ್ನಾಗಿಸಿದೆ.

ನೌಕರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸೂಚಿಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಸಮಿತಿ ರಚಿಸಲು ಕೋರಿ ವಕೀಲ ನಟರಾಜ್ ಶರ್ಮ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಸಾರಿಗೆ ನೌಕರರ ಕೂಟದ ಪರ ವಕೀಲ ಎನ್.ಪಿ. ಅಮೃತೇಶ್ ಮಧ್ಯಂತರ ಅರ್ಜಿ ಸಲ್ಲಿಸಿ, ಇತರೆ ನೌಕರ ಸಂಘಟನೆಗಳಾದ ಸಿಐಟಿಯು, ಐಎನ್‌ಟಿಯುಸಿ, ಎಐಟಿಯುಸಿ, ಬಿಎಂಎಸ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಯೂನಿಯನ್, ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಳ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಮಹಾಮಂಡಳ, ಈಶಾನ್ಯ ಹಾಗೂ ವಾಯುವ್ಯ ಸಾರಿಗೆ ನಿಗಮಗಳನ್ನೂ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಬೇಕು ಎಂದು ಕೋರಿದರು.

ಐದು ಜಿಲ್ಲೆಗಳ ಸೋಂಕಿತರಿಗೆ ಸಿಗಲಿದೆ ಉಚಿತ ಸೇವೆ
ಆಮ್ಲಜನಕ ಕೇಂದ್ರ ಆರಂಭಿಸಿದ ನಟ ಸೂದ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ ಹಾಗೂ ಸುತ್ತಮುತ್ತಲಿನ ನಾಲ್ಕು ಜಿಲ್ಲೆಗಳ ಕೋವಿಡ್ ರೋಗಿಗಳಿಗೆ ಉಚಿತವಾಗಿ ಆಮ್ಲಜನಕ ಸೇವೆ ಒದಗಿಸಲು ಬಾಲಿವುಡ್ ನಟ ಸೋನು ಸೂದ್ ವಾಣಿಜ್ಯ ನಗರಿಯಲ್ಲಿ ಬುಧವಾರ ‘ಕ್ಷಿಪ್ರ ಆಮ್ಲಜನಕ ಕೇಂದ್ರ’ ಆರಂಭಿಸಿದ್ದಾರೆ.

ಸೂದ್ ಚಾರಿಟಿ ಫೌಂಡೇಷನ್, ಬೆಂಗಳೂರಿನ ಸ್ವಾಗ್ ಸಂಸ್ಥೆ ಮತ್ತು ರೈಲ್ವೆ ಪೊಲೀಸ್ ಸಹಯೋಗದಲ್ಲಿ ರೈಲು ನಿಲ್ದಾಣದ ಆವರಣದಲ್ಲಿರುವ ರೈಲ್ವೆ ಪೊಲೀಸ್ ಠಾಣೆಯ ಪಕ್ಕದಲ್ಲಿ ಕೇಂದ್ರ ಕಾರ್ಯ ನಿರ್ವಹಿಸಲಿದೆ. ಫೌಂಡೇಷನ್ ಸ್ಥಳೀಯವಾಗಿ ಆಮ್ಲಜನಕ ತುಂಬಿಸಿಕೊಳ್ಳಲು ಕರ್ನಾಟಕ ಗ್ಯಾಸ್ ಏಜೆನ್ಸಿ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಧಾರವಾಡ, ಹಾವೇರಿ, ಗದಗ, ಬೆಳಗಾವಿ, ಕೊಪ್ಪಳ ಜಿಲ್ಲೆಗಳ ಸೋಂಕಿತರಿಗೆ ಈ ಸೇವೆ ಸಿಗಲಿದೆ.

ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಫೌಂಡೇಷನ್ ನಿರ್ದೇಶಕ ಅಮಿತ್ ಪುರೋಹಿತ್ ‘ಆಮ್ಲಜನಕ ಕೊರತೆಯ ಕಾರಣದಿಂದ ಯಾವೊಬ್ಬ ಸೋಂಕಿತರು ಸಾಯಬಾರದು ಎನ್ನುವ ಉದ್ದೇಶ ಸೋನು ಸೂದ್ ಅವರದ್ದು. ಹೀಗಾಗಿ ರಾಜ್ಯದ ಪ್ರಮುಖ ಊರುಗಳಲ್ಲಿ ಕೇಂದ್ರಗಳನ್ನು ಆರಂಭಿಸಲಾಗುತ್ತಿದೆ. ಈಗಾಗಲೇ ಬೆಂಗಳೂರಿನಲ್ಲಿ ಆರಂಭಿಸಲಾಗಿದೆ’ ಎಂದರು.

ರೈಲ್ವೆ ಪೊಲೀಸ್‌ನ ಡಿವೈಎಸ್‌ಪಿ ಎನ್. ಪುಷ್ಪಲತಾ ಇದ್ದರು.

ಸಹಾಯವಾಣಿ: ಚಾರಿಟಿ ಫೌಂಡೇಷನ್ ಆರಂಭಿಕ ಹಂತದಲ್ಲಿ 20 ಸಿಲಿಂಡರ್‌ಗಳನ್ನು ಹೊಂದಿದ್ದು, ಸಿಲಿಂಡರ್ ತೆಗೆದುಕೊಂಡು ಹೋದವರು ಬಳಕೆ ನಂತರ ವಾಪಸ್ ನೀಡಬೇಕು. ಆಮ್ಲಜನಕ ಬೇಕಾದವರು ಸಹಾಯವಾಣಿ ಮೊಬೈಲ್ 70699 99961 ಸಂಪರ್ಕಿಸಬಹುದು.



ಹುಬ್ಬಳ್ಳಿಯಲ್ಲಿ ಬುಧವಾರ ಸೂದ್ ಚಾರಿಟಿ ಫೌಂಡೇಷನ್ ವತಿಯಿಂದ ‘ರ್‍ಯಾಪಿಡ್ ಆಮ್ಲಜನಕ ಕೇಂದ್ರ’ ಆರಂಭಿಸಲಾಯಿತು


ಕೊರೊನಾ ಮುಕ್ತವಾಗಲೆಂದು ಅಷ್ಟದಿಗ್ಬಂಧನ

ಮುನವಳ್ಳಿ (ಬೆಳಗಾವಿ ಜಿಲ್ಲೆ): ಕೊರೊನಾ ಮುಕ್ತಗೊಳಿಸಲು ಹಾಗೂ ಲೋಕಕಲ್ಯಾಣಾರ್ಥವಾಗಿ ಶಿಂದೋಗಿ–ಮುನವಳ್ಳಿ ಗೋಶಾಲೆಯಲ್ಲಿ ಬುಧವಾರ ಮುಂಜಾನೆಯಿಂದ ಮಹಾರುದ್ರಯಾಗ, ಪ್ರಜ್ಞನಿ ಹೋಮ ನಡೆಸಲಾಯಿತು. ಹೋಮ–ಹವನದ ಬಳಿಕ ಅಷ್ಟದಿಗ್ಬಂಧನ ಜರುಗಿತು.

ಗುರು ಗಡದೇಶ್ವರ ಮತ್ತು ವೀರಭದ್ರಶಿವಯೋಗಿ ಶ್ರೀಗಳ ಸಾನ್ನಿಧ್ಯದಲ್ಲಿ ವಿಧಿ–ವಿಧಾನಗಳು ನಡೆದವು. ‘ಗೋ ಶಾಲೆಯಲ್ಲಿ ಸರ್ವರೋಗಕ್ಕೂ ಔಷಧವಿದೆ. ಭಕ್ತರು ಧೈರ್ಯದಿಂದ ಇದ್ದು, ಸರ್ಕಾರದ ನಿಯಮಗಳನ್ನು ಪಾಲಿಸಬೇಕು’ ಎಂದು ವೀರಭದ್ರ ಶ್ರೀಗಳು ಹೇಳಿದರು.

‘ಜಿಂದಾಲ್‌ಗೆ ಭೂಮಿ ಮಾರಾಟ: ಸರ್ಕಾರ ತಂದಿದ್ದಕ್ಕೆ ವ್ಯಥೆ’

ಮೈಸೂರು: ‘ಒಂದು ಎಕರೆಗೆ ₹ 1 ಕೋಟಿ ಬೆಲೆಬಾಳುವ 3,667 ಎಕರೆ ಭೂಮಿಯನ್ನು ₹ 1.12 ಲಕ್ಷದಂತೆ ಜಿಂದಾಲ್‌ಗೆ ಮಾರಾಟ ಮಾಡಲು, ಗುರುವಾರ (ಮೇ 27) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಕೊಡಬಾರದು’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್, ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.



ಎಚ್.ವಿಶ್ವನಾಥ್

‘ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಭೂಮಿ ಮಾರಾಟ ವಿರೋಧಿಸಿ, ಸದನದಲ್ಲೇ ಮೊಕ್ಕಾಂ ಹೂಡಿ ಪ್ರತಿಭಟಿಸಿದ್ದ ಆಗಿನ ವಿರೋಧ ಪಕ್ಷದ ನಾಯಕ, ಮುಖ್ಯಮಂತ್ರಿಯಾದ ಬಳಿಕ ಇದೀಗ ಅದನ್ನೇ ಮಾರಲು ಮುಂದಾಗಿದ್ದಾರೆ. ಈ ಸರ್ಕಾರ ತಂದಿದ್ದಕ್ಕೆ ವ್ಯಥೆಯಾಗುತ್ತಿದೆ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ನಿಧನ ವಾರ್ತೆ

ಎಂ.ಬಿ.ವಿಶ್ವನಾಥ್



ಮೈಸೂರು: ಕನ್ನಡ ಹೋರಾಟಗಾರ ಎಂ.ಬಿ.ವಿಶ್ವನಾಥ್ (80), ನಗರದ ಶ್ರೀಸಾಯಿ ನರ್ಸಿಂಗ್ ಕೇರ್ ಆಸ್ಪತ್ರೆಯಲ್ಲಿ ಬುಧವಾರ ಅನಾರೋಗ್ಯದಿಂದ ನಿಧನರಾದರು.

ಇವರಿಗೆ ಪುತ್ರಿ ಇದ್ದಾರೆ. ಗೋಕುಲಂ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು.

ಶ್ರದ್ಧಾನಂದ ಶ್ರೀ



ಕೆರೂರ (ಬಾಗಲಕೋಟೆ): ಮನುಕುಲದ ಒಳಿತಿಗಾಗಿ ಆರು ದಶಕಗಳ ಕಾಲ ಅಹಿರ್ನಿಶಿ ಶ್ರಮಿಸುವ ಮೂಲಕ ಭಕ್ತ ಸಮೂಹದಿಂದ ‘ನಡೆದಾಡುವ ದೇವರು’ ಎಂದೇ ಹೆಸರು ಗಳಿಸಿದ್ದ ಸದ್ಗುರು ಶ್ರದ್ಧಾನಂದ ಸ್ವಾಮೀಜಿ (89) ಬುಧವಾರ ವಿಜಯಪುರದಲ್ಲಿ ಲಿಂಗೈಕ್ಯರಾದರು.

ಇಲ್ಲಿಗೆ ಸಮೀಪದ ಅನವಾಲ (ಬಾದಾಮಿ ತಾಲ್ಲೂಕು) ಗ್ರಾಮ ಶ್ರದ್ಧಾನಂದರ ಹುಟ್ಟೂರು.

ಶ್ರದ್ಧಾನಂದರ ಇಚ್ಛೆಯಂತೆ ಬುಧವಾರ ಬೀಳಗಿ ತಾಲ್ಲೂಕಿನ ಗಲಗಲಿ ಗ್ರಾಮದ ಪೂರ್ಣಾನಂದ ಮಠದ ಆವರಣದಲ್ಲಿ ನಾಡಿನ ಅನೇಕ ಪೂಜ್ಯರ ಸಮ್ಮುಖದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ದೊಡ್ಡ ಕನಸು ಕಾಣಲು ಮತ್ತು ಅದನ್ನು ಕಾರ್ಯರೂಪಕ್ಕೆ ತರಲು ನಿಮಗೆ ಆಲಂಕಾರಿಕ ಪದವಿಯ ಅಗತ್ಯವಿಲ್ಲ. ಅದಕ್ಕೆ ಬೇಕಾಗಿರುವುದು ನಿಮ್ಮ ತಲೆ, ಹೃದಯ ಮತ್ತು ಕೈಗಳು.

-ರಶ್ಮಿ ಬನ್ಸಲ್

ದೇವರ ಹೆಸರಿನಲ್ಲಿ ಆಹಾರಧಾನ್ಯ ಪೋಲು ಮಾಡುವುದು ಅಮಾನವೀಯ

ಕೊರೊನಾ ಸೋಂಕಿನಿಂದ ಪಾರಾಗಲು ಪೂಜೆ, ಹೋಮ, ಹವನಗಳ ಹೆಸರಿನಲ್ಲಿ ಆಹಾರಧಾನ್ಯಗಳನ್ನು ಪೋಲು ಮಾಡುತ್ತಿರುವ ಪ್ರಸಂಗಗಳು ನಾಡಿನ ಕೆಲವು ಭಾಗಗಳಿಂದ ವರದಿಯಾಗಿವೆ. ಬಳ್ಳಾರಿ ಜಿಲ್ಲೆಯ ಎರಡು ಗ್ರಾಮಗಳಲ್ಲಿ, ಬೇಳೆಯೊಂದಿಗೆ ಬೇಯಿಸಿ ಮೊಸರಿನಲ್ಲಿ ಕಲಸಿದ ಅನ್ನವನ್ನು ಟ್ರ್ಯಾಕ್ಟರ್‌ನಲ್ಲಿ ತುಂಬಿ ಊರಿನ ಸುತ್ತ ಚೆಲ್ಲಲಾಗಿದೆ. ಚಾಮರಾಜನಗರದಲ್ಲಿ 'ಕೊರೊನಾ ಮಾರಮ್ಮ'ನನ್ನು ಪ್ರತಿಷ್ಠಾಪಿಸಿ ಕೋಳಿಗಳನ್ನು ಬಲಿ ಕೊಡಲಾಗಿದೆ. ಮಂಡ್ಯ ಜಿಲ್ಲೆಯ ಕೆಲವು ಗ್ರಾಮಗಳಲ್ಲೂ ದೇವಿಗೆ ಕೋಳಿಗಳನ್ನು ಬಲಿ ಕೊಡಲಾಗಿದೆ. ಬೆಳಗಾವಿಯಲ್ಲಂತೂ ಶಾಸಕರೊಬ್ಬರ ನೇತೃತ್ವದಲ್ಲಿ ಮನೆಗಳ ಎದುರು ಅಗ್ನಿಕುಂಡಗಳನ್ನು ಸ್ಥಾಪಿಸಿ, ಪೂಜಾದ್ರವ್ಯಗಳೊಂದಿಗೆ ಆಹಾರ ಪದಾರ್ಥಗಳನ್ನು ಸುಡಲಾಗಿದೆ. ಸಂಕಷ್ಟದ ಸಮಯದಲ್ಲಿ ಜನರು ದೇವರಿಗೆ ಮೊರೆ ಹೋಗುವುದು ಸಾಮಾನ್ಯ. ಜೀವಕ್ಕೆ ಕುತ್ತು ತರಬಹುದಾದ ಕೊರೊನಾ ವೈರಸ್ ಸೋಂಕು ತೀವ್ರವಾಗಿರುವ ಸಂದರ್ಭದಲ್ಲಿ ಜನ ಸಹಜವಾಗಿಯೇ ದೇವರ ಮೊರೆ ಹೋಗಿರಬಹುದು. ಜನರ ನಂಬಿಕೆ ಹಾಗೂ ದೇವರ ಆರಾಧನೆಯು ತೀರಾ ವೈಯಕ್ತಿಕ ವಿಚಾರ. ಆ ಕುರಿತು ಯಾರದೂ ತಕರಾರು ಇರಲಾರದು. ಆದರೆ, ಹಸಿದ ಕುಟುಂಬಗಳು ನಮ್ಮ ಸುತ್ತಮುತ್ತಲೇ ಇರುವಾಗ ಆಹಾರಧಾನ್ಯಗಳನ್ನು ಪೋಲು ಮಾಡುವುದಕ್ಕೆ ಯಾವ ಸಮರ್ಥನೆಯೂ ಇಲ್ಲ. ದೇವರ ಹೆಸರಿನಲ್ಲಿ ದುಂದುವೆಚ್ಚಗಳಿಗೆ ಇದು ಸಮಯವಲ್ಲ. ಅಸಹಾಯಕತೆ ಹಾಗೂ ಆತಂಕದ ಸಂದರ್ಭದಲ್ಲಿ ಪೂಜೆ- ಪುನಸ್ಕಾರವು ಜನರ ಮನಸ್ಸಿಗೆ ನೆಮ್ಮದಿ ತಂದುಕೊಡಬಹುದು. ಅದರ ಬಗ್ಗೆ ಯಾರದೂ ಆಕ್ಷೇಪ ಇರಲಾರದು. ಆದರೆ, ದೇವರ ಹೆಸರಿನಲ್ಲಿ ಟ್ರ್ಯಾಕ್ಟರ್‌ನಲ್ಲಿ ಅನ್ನವನ್ನು ತುಂಬಿಕೊಂಡು ಮಣ್ಣುಪಾಲು ಮಾಡುವುದು ಮೌಢ್ಯ, ಅಮಾನವೀಯ, ಅಕ್ಷಮ್ಯ. ಅನ್ನವನ್ನು ಅಗತ್ಯವಿದ್ದವರಿಗೆ ನೀಡಬೇಕೇ ಹೊರತು ಚೆಲ್ಲಬಾರದು ಎನ್ನುವುದು ಸಾಮಾನ್ಯಜ್ಞಾನ. ಇದನ್ನು ಅರ್ಥ ಮಾಡಿಕೊಳ್ಳಲು ವಿಶೇಷ ಪಾಂಡಿತ್ಯ ಬೇಕಾಗಿಲ್ಲ.



ಕೊರೊನಾ ವಿರುದ್ಧದ ಹೋರಾಟ ಹೆಚ್ಚು ಪರಿಣಾಮಕಾರಿ ಆಗಬೇಕಾದರೆ, ವೈಚಾರಿಕ ಮತ್ತು ವೈಜ್ಞಾನಿಕ ಪ್ರಜ್ಞೆ ಹೆಚ್ಚು ಹೆಚ್ಚು ಜಾಗೃತಗೊಳ್ಳಬೇಕು

ಜನಸಾಮಾನ್ಯರು ವೈಚಾರಿಕತೆಯನ್ನು ಮರೆತು ದೇವರಿಗೆ ಮೊರೆ ಹೋಗುತ್ತಿರುವುದರ ಹಿನ್ನೆಲೆಯಲ್ಲಿ ಅವರ ಅಸಹಾಯಕತೆಯನ್ನು ಗಮನಿಸಬೇಕು. ನಾಗರಿಕರ ಆತ್ಮವಿಶ್ವಾಸ ಕುಗ್ಗಲು ಹಾಗೂ ಅವರಲ್ಲಿ ಅಸಹಾಯಕತೆಯ ಭಾವನೆ ಉಂಟಾಗುವಲ್ಲಿ ವ್ಯವಸ್ಥೆಯ ಪಾತ್ರವೂ ಇದೆ. ಸುತ್ತಮುತ್ತಲೂ ರೋಗಬಾಧೆ ಹಾಗೂ ಸಾವಿನ ನೆರಳು ಕಾಣಿಸುತ್ತಿರುವಾಗ, ಜನಸಾಮಾನ್ಯರು ಮಾನಸಿಕವಾಗಿ ಕುಗ್ಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಭರವಸೆ ಕಳೆದುಕೊಂಡ ಜನರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ಸರ್ಕಾರ, ಧರ್ಮಗುರುಗಳು ಹಾಗೂ ಸಂಘಸಂಸ್ಥೆಗಳು ಮಾಡಬೇಕು. ದೇವರು, ಧರ್ಮದ ಹೆಸರಿನಲ್ಲಿ ಆಹಾರಧಾನ್ಯಗಳನ್ನು ಹಾಳು ಮಾಡುತ್ತಿರುವವರಲ್ಲಿ ಜಾಗೃತಿ ಮೂಡಿಸಬೇಕು. ಆದರೆ, ವೈಚಾರಿಕತೆ ಮೂಡಿಸಬೇಕಾದ ಜನನಾಯಕರೇ ತಪ್ಪು ಮಾದರಿಗಳನ್ನು ಹಾಕಿಕೊಡುತ್ತಿದ್ದಾರೆ. ಜನರ ಸಮಸ್ಯೆಗಳಿಗೆ ವಾಸ್ತವದ ನೆಲೆಗಟ್ಟಿನಲ್ಲಿ ಪರಿಹಾರ ಕಲ್ಪಿಸಬೇಕಾದ ಜನಪ್ರತಿನಿಧಿಗಳಲ್ಲಿ ಕೆಲವರು, ಕಾಯಿಲೆ ನಿವಾರಣೆಗೆ ಅವೈಜ್ಞಾನಿಕ ಮಾರ್ಗಗಳ ಮೊರೆ ಹೋಗಿದ್ದಾರೆ. ಕೋವಿಡ್ ಮಾರ್ಗಸೂಚಿಗಳನ್ನು ಉಲ್ಲಂಘಿಸುತ್ತಿದ್ದಾರೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರು ಕೋವಿಡ್ ಮಾರ್ಗಸೂಚಿಯನ್ನು ಉಲ್ಲಂಘಿಸಿ ನಂಜನಗೂಡಿನ ದೇವಸ್ಥಾನದಲ್ಲಿ ಪೂಜೆ ಮಾಡಿಸಿದ್ದಾರೆ. ಇಂತಹ ನಡೆ ಸಮಾಜಕ್ಕೆ ತಪ್ಪು ಸಂದೇಶ ರವಾನಿಸುತ್ತದೆ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಹೊಣೆ ಅರಿತು ನಡೆದುಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ಕೊರೊನಾ ಮೊದಲನೇ ಅಲೆಯ ಸಂದರ್ಭದಲ್ಲಿ ಮನೆಗಳ ಎದುರು ತಟ್ಟೆ- ಲೋಟ, ಜಾಗಟೆ ಬಡಿಯಲು ಹಾಗೂ ದೀಪ ಬೆಳಗಿಸಲು ಜನರಿಗೆ ಕರೆ ನೀಡಿದರು. ಕೊರೊನಾ ಯೋಧರಿಗೆ ಗೌರವ ಸಲ್ಲಿಸಲು ಹಾಗೆ ಮಾಡಿ ಎಂದು ಪ್ರಧಾನಿ ಹೇಳಿದ್ದನ್ನು ತಪ್ಪಾಗಿ ಗ್ರಹಿಸಿಕೊಂಡ ಕೆಲವರು, ಶಂಖ ಮತ್ತು ಜಾಗಟೆಯ ಸದ್ದಿಗೆ ವೈರಾಣು ಇಲ್ಲವಾಗುತ್ತದೆ ಎಂದು ಅರ್ಥೈಸಿಕೊಂಡಿದ್ದೂ ಇತ್ತು! ಸದ್ಯದ ಬಿಕ್ಕಟ್ಟಿನ ಸಂದರ್ಭದಲ್ಲಿ ವೈಚಾರಿಕ ಪ್ರಜ್ಞೆಯು ಪ್ರಜೆಗಳಿಗಷ್ಟೇ ಅಲ್ಲ, ಪ್ರಜಾಪ್ರತಿನಿಧಿಗಳಿಗೂ ಅಗತ್ಯವಾದುದು. ವೈಚಾರಿಕ ಮತ್ತು ವೈಜ್ಞಾನಿಕ ಪ್ರಜ್ಞೆ ಹೆಚ್ಚು ಹೆಚ್ಚು ಜಾಗೃತಗೊಂಡಂತೆಲ್ಲ ಕೊರೊನಾ ವಿರುದ್ಧದ ಹೋರಾಟ ಹೆಚ್ಚು ಪರಿಣಾಮಕಾರಿ ಆಗತೊಡಗುತ್ತದೆ.

ದಿನದ ಟ್ವೀಟ್

ಗೊಂದಲ...



ಆಂದೋಲನಗಳನ್ನು ಗೌರವಿಸುವ ನಾಡಿನಲ್ಲಿ ಮತ್ತೆ ಹುಟ್ಟಿ ಬನ್ನಿ ಎನ್ನಲೇ, ನೀವು ಮತ್ತೆ ಇಲ್ಲೇ ಹುಟ್ಟಿದರೆ ಆಂದೋಲನಗಳನ್ನು ಮಾಡಿಯೇ ಸರ್ಕಾರಗಳನ್ನು ಎಚ್ಚರಿಸಬೇಕಾದ ಪರಿಸ್ಥಿತಿ ಇರದಿರಲಿ ಎನ್ನಲೇ ಎಂಬ ಗೊಂದಲದಲ್ಲಿ, ನಾನು ಕಂಡ ಆಂದೋಲನಜೀವಿ ಎಚ್.ಎಸ್.ದೊರೆಸ್ವಾಮಿ ಅವರಿಗೆ ನನ್ನ ಹೃದಯಪೂರ್ವಕ ನಮನಗಳೊಂದಿಗೆ #ಓಂಶಾಂತಿ.

ಅನುಪಮಾ ಶೆಣೈ, ಮಾಜಿ ಪೊಲೀಸ್ ಅಧಿಕಾರಿ

25 ವರ್ಷಗಳ ಹಿಂದೆ

ಸೋಮವಾರ, 27-5-1996

- **ಸರ್ಕಾರ ಉಳಿಸುವ ನಿಟ್ಟಿನಲ್ಲಿ ಬಿಜೆಪಿ ವರಿಷ್ಠರ ಹಿಂಜರಿಕೆ**

ನವದೆಹಲಿ, ಮೇ 26 (ಪಿಟಿಐ, ಯುಎನ್‌ಐ)– ಲೋಕಸಭೆಯಲ್ಲಿ ಬಲಾಬಲ ಪ್ರದರ್ಶನಕ್ಕೆ ಇನ್ನು ಒಂದು ದಿನವಷ್ಟೇ ಬಾಕಿ ಉಳಿದಿರುವಾಗ ಬಿಜೆಪಿ ವರಿಷ್ಠ ನಾಯಕರು ಹಿಂಜರಿತದ ಹೇಳಿಕೆಗಳನ್ನು ನೀಡಿದ್ದು, ದೆಹಲಿಯಲ್ಲಿ ಅನಿಶ್ಚಿತ ಸ್ಥಿತಿ ಇನ್ನಷ್ಟು ದಟ್ಟವಾಗಿದೆ.

ಎಲ್ಲ ರಾಷ್ಟ್ರೀಯ ಪಕ್ಷಗಳು ವಿರೋಧ ಮನೋಭಾವ ಕೈಬಿಟ್ಟು ಕೇಂದ್ರದಲ್ಲಿ ಸ್ಥಿರ ಸರ್ಕಾರದ ಅಗತ್ಯದ ಬಗ್ಗೆ ಚಿಂತಿಸಬೇಕು ಎಂದು ಪ್ರಧಾನಿ ವಾಜಪೇಯಿ ಅಮೃತಸರದಲ್ಲಿ ಮನವಿ ಮಾಡಿದರೆ, ವಿಶ್ವಾಸಮತ ದೊರೆಯುವುದು ಖಚಿತವಿಲ್ಲ ಎಂಬುದನ್ನು ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಇದೇ ಮೊದಲ ಸಲ ಒಪ್ಪಿಕೊಂಡಿದ್ದಾರೆ. ವಾಜಪೇಯಿ ನೇತೃತ್ವದ ಸರ್ಕಾರ ನಾಳೆ ಲೋಕಸಭೆಯಲ್ಲಿ ವಿಶ್ವಾಸಮತ ನಿರ್ಣಯ ಮಂಡಿಸಲಿದೆ.

- **ನಿರಶನ ನಿಲ್ಲಿಸಲು ಸ್ವಾಮಿಗಳ ನಕಾರ**

ಕಲ್ಬುರ್ಗಿ, ಮೇ 26– ತಮ್ಮ ಪ್ರಾಣ ಹೋದರೂ ತಾವು ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನಿಡುವ ತನಕ ಆಮರಣಾಂತ ಉಪವಾಸವನ್ನು ಕೈಬಿಡುವುದಿಲ್ಲ ಎಂದು ಇಲ್ಲಿಯ ಕಾರಾಗೃಹದಲ್ಲಿರುವ 14 ಮಂದಿ ವೀರಶೈವ ಸ್ವಾಮೀಜಿಗಳು ಇಂದು ಸ್ಪಷ್ಟಪಡಿಸಿದರು. ಇದರಿಂದಾಗಿ ಪುನರ್‌ನಾಮಕರಣ ಸಮಸ್ಯೆ ಮತ್ತಷ್ಟು ಜಟಿಲಗೊಂಡಂತಾಗಿದೆ.

ರಾಷ್ಟ್ರೀಯ ಬಸವ ದಳದ ಮುಖ್ಯಸ್ಥೆ ಮಾತೆ ಮಹಾದೇವಿ ಇಂದು ಉಪವಾಸನಿರತರನ್ನು ಭೇಟಿ ಮಾಡಿ, ಈ ಕುರಿತು ನಿರ್ಧಾರ ಕೈಗೊಳ್ಳಲು ಸಮಯ ಕೇಳಿರುವ ಗೃಹ ಸಚಿವ ಪಿ.ಜಿ.ಆರ್.ಸಿಂಧ್ಯ ಅವರ ಮನವಿಯನ್ನು ರವಾನಿಸಿದರು.

50 ವರ್ಷಗಳ ಹಿಂದೆ

ಗುರುವಾರ, 27-5-1971

- **ಕಾಂಗ್ರೆಸ್ ಒಡಕಿಗೆ ನೀಲಂ ಕಾರಣ: ಗುರುಪಾದಸ್ವಾಮಿ**

ನವದೆಹಲಿ, ಮೇ 26– ನೀಲಂ ಸಂಜೀವ ರೆಡ್ಡಿ ಅವರು ಪಕ್ಷದ ಕಾರ್ಯಕಾರಿ ಸಮಿತಿಗೆ ರಾಜೀನಾಮೆ ನೀಡಿದ ಕ್ರಮವನ್ನು ಸಂಸ್ಥಾ ಕಾಂಗ್ರೆಸ್ ಸಂಸತ್ ಪಕ್ಷದ ಸರ್ವಸದಸ್ಯರ ಸಭೆಯು ಒಪ್ಪಲಿಲ್ಲ.

ಸಂಜೀವ ರೆಡ್ಡಿ ಅವರು ತಮ್ಮ ಈ ಕ್ರಮದಿಂದ ತಮಗೇ ಅಪಚಾರ ಮಾಡಿಕೊಂಡಿದ್ದಾರೆ. ತಮ್ಮ ಸಲುವಾಗಿಯೇ ಕಾಂಗ್ರೆಸ್ ಪಕ್ಷದಲ್ಲಿ ಒಡಕುಂಟಾಯಿತೆಂಬುದನ್ನು ರೆಡ್ಡಿಯವರು ಮನವರಿಕೆ ಮಾಡಿಕೊಳ್ಳದಿರುವುದು ವಿಷಾದನೀಯ ಎಂದು ರಾಜ್ಯಸಭೆಯಲ್ಲಿ ಸಂಸ್ಥಾ ಕಾಂಗ್ರೆಸ್ ಪಕ್ಷದ ನಾಯಕ ಎಂ.ಎಸ್. ಗುರುಪಾದಸ್ವಾಮಿ ನುಡಿದರು.

ಪಕ್ಷವು ಪ್ರಗತಿಪರ ಧೋರಣೆ ಹೊಂದಿರಬೇಕು; ಹಿರಿಯ ತಲೆಗಳು ಅಧಿಕಾರದಿಂದಿಳಿಯಬೇಕು ಮತ್ತು ಪಕ್ಷವು ತನ್ನ ಹಿಂದಿನ ತಪ್ಪುಗಳನ್ನು ಒಪ್ಪಿಕೊಳ್ಳಬೇಕೆಂದು ರೆಡ್ಡಿ ಅವರು ಮುಂಬೈ ಅಧಿವೇಶನದಲ್ಲಿ ಸೂಚಿಸಿದ ಪ್ರಶ್ನೆಗಳಿಗೆ ಈಗಾಗಲೇ ಉತ್ತರಿಸಲಾಗಿದೆ. ಇಂಥ ಕ್ರಮ ಕೈಗೊಳ್ಳಲು ಯಾವ ಕಾರಣವೂ ಇಲ್ಲ ಎಂದೂ ಅವರು ಅಭಿಪ್ರಾಯಪಟ್ಟರು.

- **'ಪಾಕ್ ದಾಳಿಗೆ ಭಾರತದ ಪಡೆ ಜಗ್ಗಿಲ್ಲ'**

ನವದೆಹಲಿ, ಮೇ 26– ಪೂರ್ವ ಬಂಗಾಳದಿಂದ ಭಾರತದ ಮೇಲೆ ದಾಳಿ ನಡೆಸುತ್ತಿರುವ ಪಾಕ್ ಸೈನಿಕರ ಮೇಲೆ ಭಾರತೀಯ ಗಡಿ ರಕ್ಷಣಾ ಪಡೆಯವರು ಸೂಕ್ತ ರೀತಿಯಲ್ಲಿ ಪ್ರತಿದಾಳಿ ನಡೆಸಿ, ಗಡಿಯನ್ನು ಉಲ್ಲಂಘಿಸಿದ ಸಂದರ್ಭಗಳ- ಲ್ಲೆಲ್ಲ ಅವರನ್ನು ಹಿಮ್ಮೆಟ್ಟಿಸಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಸ್ವರಣ್ ಸಿಂಗ್ ಇಂದು ರಾಜ್ಯಸಭೆಗೆ ತಿಳಿಸಿದರು.

ಜನಸೇವೆಗೆ ನಮೋ ಎನ್ನದಿದ್ದರೆ ನಾಮಬಲಕ್ಕೆ ನಮೋ ಎನ್ನುವವರು ಇರಲಾರರು

ನಾಮದ ಬಲವೊಂದಿದ್ದರೆ ಸಾಲದು!



ಅನುಸಂಧಾನ

ರವೀಂದ್ರ ಭಟ್ಟ

'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎಂದು ಪುರಂದರ ದಾಸರು ಹೇಳಿದರು. ಅಧ್ಯಾತ್ಮ ಸಾಧನೆಗೆ ನಾಮದ ಬಲವೊಂದಿದ್ದರೆ ಸಾಕಾಗಬಹುದು. ಆದರೆ ದೇಶವನ್ನು ಆಳಲು ನಾಮದ ಬಲ ಸಾಕಾಗುವುದಿಲ್ಲ ಎಂಬ ಅರಿವು ನಮ್ಮ ಪ್ರಧಾನಿಗೆ ಈಗ ಆಗಿರಬಹುದು.

ಪ್ರಧಾನಿ ನರೇಂದ್ರ ಮೋದಿ ಅವರು 2014ರಲ್ಲಿ ನಾಮದ ಬಲದಿಂದಲೇ ಅಧಿಕಾರದ ಗದ್ದುಗೆಯನ್ನು ಏರಿದರು. ಅದು ನಮೋ ನಾಮವಾಗಿರಬಹುದು, ರಾಮನಾಮವಾಗಿರಬಹುದು. ಅಂತೂ ನಾಮದ ಬಲ ಗಟ್ಟಿಯಾಗಿತ್ತು. 2019ರಲ್ಲಿಯೂ ನಾಮದ ಬಲ ಕೈಕೊಡಲಿಲ್ಲ. ನಂತರ ನಡೆದ ಬೇರೆ ಬೇರೆ ರಾಜ್ಯಗಳ ಚುನಾವಣೆಯಲ್ಲಿಯೂ 'ನಮೋ ನಮೋ' ಬಲ ಸಾಕಷ್ಟು ಕೆಲಸವನ್ನೇ ಮಾಡಿತು. ಆದರೆ ಇತ್ತೀಚೆಗೆ ನಡೆದ ಪಂಚರಾಜ್ಯಗಳ ಚುನಾವಣೆಯಲ್ಲಿ ನಾಮದ ಬಲ ಹೆಚ್ಚು ಕೆಲಸ ಮಾಡಲಿಲ್ಲ. ಕೊರೊನಾ ಕಾಲದ ಸಂಕಷ್ಟ ಸಮಯದಲ್ಲಿ ನಾಮದ ಬಲ ಇನ್ನಷ್ಟು ದುರ್ಬಲವಾಗ- ತೊಡಗಿದೆ. ರಾಮನಾಮವೂ ಫಲ ನೀಡಲಿಲ್ಲ. ನಮೋ ನಮೋ ಕೂಡ ಜಯ ತಂದುಕೊಡಲಿಲ್ಲ.

ಒಂದು ಕಾಲದಲ್ಲಿ ಇಂದಿರಾ ಕಾಂಗ್ರೆಸ್‌ನಿಂದ ಕತ್ತೆಯನ್ನು ನಿಲ್ಲಿಸಿದರೂ ಗೆಲ್ಲುತ್ತದೆ ಎಂಬ ಮಾತಿತ್ತು. ಆದರೆ ಈಗ ಕಾಂಗ್ರೆಸ್ ಕತೆ ಏನಾಗಿದೆ? ಇತಿಹಾಸ ಮರುಕಳಿಸುವ ಎಲ್ಲ ಸೂಚನೆಗಳೂ ಈಗ ಕಾಣುತ್ತಿವೆ. ಇತಿಹಾಸ ತಿಳಿಯದವ ಇತಿಹಾಸವನ್ನು ಸೃಷ್ಟಿಸಲಾರ ಎನ್ನುತ್ತಾರೆ. ಇತಿಹಾಸದ ಸಾಹಿತ್ಯ ಬದಲಾಯಿಸಿದರೆ ಇತಿಹಾಸ ಸೃಷ್ಟಿಯಾಗುವುದಿಲ್ಲ ಎಂಬುದೂ ಈಗ ನಿಜವಾಗತೊಡಗಿದೆ. ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ನಂತರ, ಅದರಲ್ಲೂ ಮುಖ್ಯವಾಗಿ ಪಶ್ಚಿಮ ಬಂಗಾಳದ ಫಲಿತಾಂಶ ಹೊರಬಿದ್ದ ನಂತರ ಬಿಜೆಪಿಗೆ ಸಾಕಷ್ಟು ಛಡಿ ಏಟಿನ ಅನುಭವ ಆಗತೊಡಗಿದೆ. ಅದಕ್ಕಾಗಿಯೇ ಈಗ ಮುಂದಿನ ದಿನಗಳಲ್ಲಿ ಬರುವ ಚುನಾವಣೆ ಬಗ್ಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ತೀವ್ರ ಎಚ್ಚರಿಕೆ ವಹಿಸಿವೆ. ಮೋದಿ, ಯೋಗಿ ನಾಮದ ಬಲವನ್ನು ಉಳಿಸುವ ಕಸರತ್ತು ಆರಂಭವಾಗಿದೆ.

ವಾಟ್ಸ್‌ಆ್ಯಪ್‌ನಲ್ಲಿ ಇತ್ತೀಚೆಗೆ ಒಂದು ಸಂದೇಶ ಹರಿದಾಡುತ್ತಿತ್ತು- ಗಂಗಾ ನದಿಯಲ್ಲಿ ತೇಲುತ್ತಿರುವ ಶವಗಳಲ್ಲಿ ಒಂದು ಶವ ತನ್ನನ್ನು ತಿನ್ನಲು ಬಂದ ಪ್ರಾಣಿಗೆ ಹೇಳಿತಂತೆ 'ನನ್ನ ದೇಹದ ಎಲ್ಲ ಭಾಗಗಳನ್ನೂ ತಿನ್ನು. ಆದರೆ ಕಣ್ಣುಗಳನ್ನು ತಿನ್ನಬೇಡ. ಯಾಕೆಂದರೆ ನಾನು ಅಚ್ಛೇ ದಿನ್ ನೋಡಬೇಕು' ಎಂದು- ಇದನ್ನು ಬರೆದವರು ಯಾರು ಎಂದು ಇನ್ನೂ ಹುಡುಕುವ ಕೆಲಸ ಆರಂಭಿಸಿಲ್ಲ. ಮುಂದೆ ಆರಂಭವಾಗಬಹುದು. ಯಾಕೆಂದರೆ 'ಕೊರೊನಾ ವ್ಯಾಕ್ಸಿನ್ ವಿದೇಶಕ್ಕೆ ಯಾಕೆ ರಫ್ತು ಮಾಡಿದಿರಿ' ಎಂದು ದೆಹಲಿಯಲ್ಲಿ ಭಿತ್ತಿಪತ್ರ ಅಂಟಿಸಿದವರ ಮೇಲೆ ಮೊಕದ್ದಮೆ ಹೂಡಲಾಗಿದೆ. 25 ಮಂದಿಯನ್ನು ಬಂಧಿಸಲಾಗಿದೆ. ಇವೆಲ್ಲ ನಾಮಬಲ ದಿಢೀರ್ ಕುಸಿತದ ಪರಿಣಾಮಗಳು. ಇಂತಹ ಪ್ರಯತ್ನಗಳು ನಾಮಬಲವನ್ನು ಇನ್ನಷ್ಟು ಪಾತಾಳಕ್ಕೆ ತಳ್ಳಬಹುದು.

ಕೊರೊನಾ ಮೊದಲ ಅಲೆಯಲ್ಲಿ ಅವರ ನಾಮದ ಬಲ ಎಷ್ಟಿತ್ತೆಂದರೆ, ಅವರು ಚಪ್ಪಾಳೆ ಹೊಡೆಯಿರಿ ಎಂದರೆ ಜನರು ಚಪ್ಪಾಳೆ ಹೊಡೆದರು. ಗಂಟೆ ಹೊಡೆಯಿರಿ ಎಂದರೆ ಗಂಟೆ ಹೊಡೆದರು. ದೀಪ ಹಚ್ಚಿ ಎಂದರೆ ದೀಪ ಹಚ್ಚಿದರು. ಮನೆಯಲ್ಲಿಯೇ ಇರಿ ಎಂದರೆ ಜನರು ಬಹುತೇಕ ಮನೆಯಲ್ಲಿಯೇ ಇದ್ದರು. 'ಮೋದಿ ಏನು ಹೇಳಿದರೂ ಮಾಡುತ್ತೇವೆ. ಅವರು ಏನೇ ಮಾಡಿದರೂ ಅದು ದೇಶದ ಒಳಿತಿಗಾಗಿ. ಅದಕ್ಕಾಗಿ ಅವರ ಜೊತೆಗೆ ಇರುತ್ತೇವೆ' ಎಂದು ಹೇಳುತ್ತಿದ್ದವರು ಈಗ ಕೊಂಚ ಬದಲಾಗಿದ್ದಾರೆ. 'ಅಯ್ಯೋ ನೀವೇ ಹೀಗೇಕೆ ಮಾಡಿದಿರಿ' ಎಂದು ಕೇಳುತ್ತಿದ್ದಾರೆ. ಮೊದಲ ಬಾರಿಯ ಲಾಕ್‌ಡೌನ್‌ನಿಂದ ಭಾರಿ ಪ್ರಮಾಣದ ಕೂಲಿ ಕಾರ್ಮಿಕರು ಸಂಕಷ್ಟ ಅನುಭವಿಸಿದರೂ ನಾಮಬಲದಲ್ಲಿ ಅದು ನಗಣ್ಯವೇ ಆಯಿತು. ಆದರೆ ಈಗ ಎರಡನೇ ಅಲೆಯಲ್ಲಿ ಅದೆಲ್ಲ ತಲೆಕೆಳಗಾಗಿದೆ. ಕೈಮುಗಿಯಿರಿ, ಚಪ್ಪಾಳೆ ಹೊಡೆಯಿರಿ, ಗಂಟೆ ಹೊಡೆಯಿರಿ, ದೀಪ ಹಚ್ಚಿ ಎಂದು ಹೇಳುವ ಧೈರ್ಯ ಅವರಿಗೂ ಇಲ್ಲ. ಹಾಗಂತ ಕರೆ ಕೊಟ್ಟರೆ ಅದನ್ನು ಕಣ್ಣು ಮುಚ್ಚಿ ಪಾಲಿಸುವ ಮನಃಸ್ಥಿತಿಯಲ್ಲಿ ಮತದಾರರೂ ಇಲ್ಲ.

ಮೊದಲ ಅಲೆಯ ಕೊರೊನಾಕ್ಕೂ ಎರಡನೇ ಅಲೆಯ ಕೊರೊನಾಕ್ಕೂ ವ್ಯತ್ಯಾಸ ಇದೆ. ವೈರಸ್ ರೂಪಾಂತರವಾದ ಮೇಲೆ ಅದಕ್ಕೆ ಔಷಧಿಯೂ ರೂಪಾಂತರಗೊಳ್ಳಬೇಕಿತ್ತು. ಎರಡನೇ ಅಲೆಯನ್ನು ನಿಯಂತ್ರಿಸಲು ಕೈಗೊಳ್ಳುವ ಕಾರ್ಯತಂತ್ರ ಕೂಡ ಬದಲಾಗಬೇಕಿತ್ತು. ಮೊದಲಿನ ಕೊರೊನಾಕ್ಕೆ ಕೊಟ್ಟ ಔಷಧಿಯನ್ನೇ ರೂಪಾಂತರಿ ಕೊರೊನಾಕ್ಕೂ ಕೊಟ್ಟರೆ ಅದು ಕಡಿಮೆಯಾಗುವುದಿಲ್ಲ. ಮೊದಲ ಅಲೆಯಲ್ಲಿ ಲಾಕ್‌ಡೌನ್ ಪರಿಣಾಮಕಾರಿಯಾ- ಗಿರಬಹುದು. ಆದರೆ ಎರಡನೇ ಅವಧಿಯಲ್ಲಿ ಅದು ಪರಿಣಾಮಕಾರಿಯಾಗಿಲ್ಲ ಎನ್ನುವುದು ಗೊತ್ತಾಗಿದೆ. ಕೊರೊನಾ ಸರಣಿ ಮುರಿಯಲು ಲಾಕ್‌ಡೌನ್ ಒಂದೇ ಮಾರ್ಗ ಅಲ್ಲ ಎನ್ನುವುದೂ ಈಗ ಗೊತ್ತಾಗಿದೆ.

ಮೊದಲ ಅಲೆಯಲ್ಲಿ ಮಾಸ್ಕ್ ಸಾಕಾಗಿತ್ತು. ಈಗ ನಿರಂತರ ಮಾಸ್ಕ್ ಧರಿಸುವುದರಿಂದ ಅನ್ಯ ರೋಗಗಳು ಬರುತ್ತವೆ ಎನ್ನುವುದು ತಿಳಿದಿದೆ. ಅದೇ ರೀತಿ ದೀರ್ಘಕಾಲದ ಲಾಕ್‌ಡೌನ್ ಕೂಡ ಸಾಮಾಜಿಕವಾಗಿ ಹೊಸ ಹೊಸ ರೋಗಗಳನ್ನು ತರುತ್ತದೆ. ಹಸಿವು ಹೆಚ್ಚಿದಷ್ಟೂ ತಿರಸ್ಕಾರ ಹೆಚ್ಚಾಗುತ್ತದೆ ಎಂಬ ಸಾಮಾನ್ಯ ಜ್ಞಾನ ನಮ್ಮನ್ನು ಆಳುವವರಿಗೆ ಇರಬೇಕಿತ್ತು.

ಹಾಗಿದ್ದರೆ ಎರಡನೇ ಅಲೆ ಅಥವಾ ಮೂರನೇ ಅಲೆ ತಡೆಯುವ ಉಪಾಯ ಯಾವುದು? ಅದಕ್ಕಿರುವ ಒಂದೇ ಉಪಾಯ ಎಂದರೆ, ಎಲ್ಲರೂ ವ್ಯಾಕ್ಸಿನ್ ಪಡೆಯುವುದು. ಪೋಲಿಯೊ ಲಸಿಕೆ ಹಾಕಿದ ಹಾಗೆ ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡುವುದೊಂದೇ ಪರಿಹಾರ. 'ದೇಶದಲ್ಲಿ ವ್ಯಾಕ್ಸಿನ್ ಆಂದೋಲನ ಶುರು ಮಾಡಿದಾಗ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ವ್ಯಾಕ್ಸಿನ್ ಬಗ್ಗೆ ಅಪಪ್ರಚಾರ ನಡೆಸಿದವು. ಅದರಿಂದ ಜನರು ವ್ಯಾಕ್ಸಿನ್ ಪಡೆಯಲು ಮುಂದೆ ಬರಲಿಲ್ಲ. ಸಾಕಷ್ಟು ವ್ಯಾಕ್ಸಿನ್ ನಷ್ಟವಾಯಿತು. ಈಗ ಒಂದೇ ಬಾರಿಗೆ ಎಲ್ಲರೂ ವ್ಯಾಕ್ಸಿನ್ ಕೊಡಿ, ವ್ಯಾಕ್ಸಿನ್ ಕೊಡಿ ಎಂದು ಮುಗಿಬಿದ್ದಿ- ದ್ದಾರೆ. ಎಲ್ಲರಿಗೂ ತಕ್ಷಣವೇ ವ್ಯಾಕ್ಸಿನ್ ಕೊಡಲು ಸಾಧ್ಯ- ವಾಗುತ್ತಿಲ್ಲ. ಅದಕ್ಕಾಗಿಯೇ ಗೊಂದಲ ಸೃಷ್ಟಿಯಾಗಿದೆ' ಎಂದು ಬಿಜೆಪಿಗರು ಹೇಳುತ್ತಾರೆ.

ರಾತ್ರಿ 8 ಗಂಟೆಗೆ ದೇಶವನ್ನು ಉದ್ದೇಶಿಸಿ ಮಾತನಾಡಿ, ಏಕಾಏಕಿ ನೋಟ್ ಬ್ಯಾನ್ ಮಾಡಿದಾಗ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಪ್ರಬಲ ವಿರೋಧವನ್ನೇ ಒಡ್ಡಿದ್ದವು. ಆದರೂ ನೋಟ್ ಬ್ಯಾನ್ ಕ್ರಮ ಯಶಸ್ವಿಯಾಯಿತು. ಜನರು ತಮಗೆ ಆದ ತೊಂದರೆಯನ್ನು ಲೆಕ್ಕಿಸದೆ ನರೇಂದ್ರ ಮೋದಿ ಅವರನ್ನು ಬೆಂಬಲಿಸಿದರು. ಆಗ ಕೈಕೊಡದ ನಾಮಬಲ ಈಗ ಯಾಕೆ ಕೈಕೊಟ್ಟಿತು? ಜನರು ವ್ಯಾಕ್ಸಿನ್ ತೆಗೆದುಕೊಳ್ಳಲು ಯಾಕೆ ಹಿಂಜರಿದರು? ಆಲೋಚಿಸಬೇಕಾದ ವಿಷಯ.

ಇಡೀ ದೇಶ ಸಂಕಷ್ಟದ ಕಾಲದಲ್ಲಿರುವಾಗ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಇನ್ನಷ್ಟು ಜವಾಬ್ದಾರಿಯಿಂದ ವರ್ತಿಸಬೇಕಿತ್ತು. ಎಲ್ಲ ಪಕ್ಷಗಳಿಗೂ ರಾಜಕೀಯಕ್ಕಿಂತ ಜನರ ಕ್ಷೇಮವೇ ಮುಖ್ಯವಾಗಬೇಕಿತ್ತು. ಜನರ ನೋವಿಗೆ ಸ್ಪಂದಿಸಲು ರಾಜಕೀಯದ ಗಡಿಯನ್ನು ದಾಟಿ ಶ್ರಮಿಸಬೇಕಿತ್ತು. ಇಂತಹ ಸಂದರ್ಭದಲ್ಲಿ ತಾಯಿ ಹೃದಯದ ಆಡಳಿತ ಪಕ್ಷ ಬೇಕು. ಅತ್ತೆ ಅಥವಾ ಸೊಸೆಯಂತೆ ಸದಾ ಕಚ್ಚಾಡುವ ವಿರೋಧ ಪಕ್ಷಗಳೂ ಇರಬಾರದು.

ಸಾಮಾನ್ಯ ಜನರು ಧರ್ಮದ ಗಡಿಯನ್ನು ದಾಟಿ ನೆರವಿನ ಹಸ್ತ ಚಾಚಿದ್ದಾರೆ. ಮುಸ್ಲಿಮರ ಹೆಣಕ್ಕೆ ಹಿಂದೂಗಳು, ಹಿಂದೂಗಳ ಶವಕ್ಕೆ ಮುಸ್ಲಿಮರು ಅಂತ್ಯಸಂಸ್ಕಾರ ಮಾಡಿದ್ದಾರೆ. ಅದೇ ನಮ್ಮ ದೇಶದ ಆತ್ಮ, ಸೌಂದರ್ಯ. ಇಂತಹ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಹೆಣದ ಮೇಲೆ ಹೋಳಿಗೆ ತಿನ್ನುವ ಚಟವನ್ನು ಬಿಟ್ಟು ಜನಸೇವೆಗೆ ಮುಂದಾಗದಿದ್ದರೆ ನಾಮ ಬಲ ಹೋದೀತು. ಹಣೆ ಮೇಲೆ ನಾಮ ಮಾತ್ರ ಉಳಿದೀತು. ಜನರೂ ಮೂರು ನಾಮ ಹಾಕಬಹುದು.



ಚುರುಮುರಿ



ಮಂಕುರೋಗ

• ಮಣ್ಣೆರಾಜು

'ಏನಾದ್ರೂ ಸಮಸ್ಯೆ ಇದೆಯೇ?...' ಎನ್ನುತ್ತಾ ಬಂದರು ಅಂಗನವಾಡಿ ಮೇಡಂ.

'ಬನ್ನಿ, ನಮ್ಮ ಸಮಸ್ಯೆ ಒಂದಾ ಎರಡಾ... ಮನೆ ಸಾಲದ ಕಂತು ಕಟ್ಟಿಲ್ಲ, ಕೊರೊನಾ ಕಾಟ ಶುರುವಾಗಿ ಗಂಡನಿಗೆ ಅರ್ಧ ಸಂಬಳ, ಜೀವನ ಕಷ್ಟ ಆಗಿಬಿಟ್ಟಿದೆ' ಸುಮಿ ಸಂಕಟ ಹೇಳಿಕೊಂಡಳು.

'ಆರ್ಥಿಕ ಸಮಸ್ಯೆ ಅಲ್ಲ, ಆರೋಗ್ಯ ಸಮಸ್ಯೆ ಹೇಳಿ'.

'ಪಕ್ಕದ ಮನೆಯವರ ನಾಯಿ ಅಟ್ಟಿಸಿಕೊಂಡು ಬಂದು ನನ್ನ ಮಗ ಬಿದ್ದು ಗಾಯ ಮಾಡಿಕೊಂಡ. ನೋಡಿ, ಇನ್ನೂ ಬ್ಯಾಂಡೇಜ್ ಬಿಚ್ಚಿಲ್ಲ. ನಾಯಿ ಹಿಡಿಯುವವರು ಇದ್ದರೆ ಹೇಳಿ, ನಾಯಿ ಜೊತೆಗೆ ಪಕ್ಕದ ಮನೆಯವಳನ್ನೂ ಹಿಡುಕೊಂಡು ಹೋಗ್ಲಿ...' ಸುಮಿಗೆ ಸಿಟ್ಟು.

'ಅದಲ್ಲಾ ಮೇಡಂ, ನಿಮ್ಮಲ್ಲಿ ಯಾರಿಗಾದರೂ ಕೊರೊನಾ ಲಕ್ಷಣಗಳಿವೆಯಾ?'

'ಯಾರ ಮುಖದಲ್ಲೂ ಲಕ್ಷಣ ಇಲ್ಲ, ಬರೀ ಅವಲಕ್ಷಣ...' ರೂಮಿನಿಂದ ಬಂದು ಶಂಕ್ರಿ ಹೇಳಿದ.

'ಇಲ್ಲಬಿಡಿ, ಎಲ್ಲರಿಗೂ ಕಷಾಯ ಕುಡಿಸಿ ಕುಟುಂಬದ ಆರೋಗ್ಯ ಕಾಪಾಡಿದ್ದೇವೆ. ಗಂಡ, ಮಕ್ಕಳು ಹೊರ ಹೋಗಲು ಬಿಟ್ಟಿಲ್ಲ' ಅಂದಳು ಸುಮಿ.

'ದಿನವಿಡೀ ಮನೇಲಿ ಕುಳಿತು ಇತ್ತ ತಿರುಗಿದರೆ ಹೆಂಡ್ತಿಯ ಮುಖದಲ್ಲಿ ಆತಂಕ, ಆಕ್ರೋಶ; ಅತ್ತ ತಿರುಗಿದರೆ ಮಕ್ಕಳ ಮುಖದಲ್ಲಿ ಆಕಳಿಕೆ, ತೂಕಡಿಕೆ. ಯಾವುದೂ ಬೇಡ ಅಂತ ಟಿ.ವಿ ಕಡೆ ತಿರುಗಿದರೆ ನ್ಯೂಸ್ ಚಾನೆಲ್‌ಗಳಲ್ಲಿ ಕೊರೊನಾ ಕ್ರೈಂ... ನನಗಂತೂ ತಲೆ ತಿರುಗುವಂತಾಗಿದೆ, ಇದ್ಯಾವ ಸೋಂಕು?' ಶಂಕ್ರಿ ಕೇಳಿದ.

'ಅದು ಸೋಂಕು ಅಲ್ಲ, ಮಂಕು ಅನ್ನುವ ಮನೆರೋಗ. ವಾರಗಟ್ಟಲೆ ಮನೇಲಿರುವವರಲ್ಲಿ ಮಂಕುರೋಗ ಕಾಣಿಸಿಕೊಳ್ಳುತ್ತದೆ'.

'ಹೊರ ಹೋದರೆ ಸೋಂಕು, ಮನೆಯ- ಲ್ಲಿದ್ದರೆ ಮಂಕು, ನಾವು ಹೇಗೆ ಬಾಳೋದು?' ಸುಮಿಗೆ ಸಂಕಟ.

'ಧೈರ್ಯವಾಗಿರಿ, ಲಾಕ್‌ಡೌನ್ ಮುಗಿದ ಮೇಲೆ ಮಂಕುರೋಗ ನಿವಾರಣೆಯಾಗುತ್ತದೆ...' ಎಂದು ಹೊರಟರು ಅಂಗನವಾಡಿ ಮೇಡಂ.

ಸಂಗತ

ಕಾಯಕ: ಪರಿಣಾಮಕಾರಿ 'ವ್ಯಾಕ್ಸಿನ್'!

ಆರಾಮದಾಯಕ ಪರಿಧಿಯಲ್ಲಿ ಎಂದಿಗೂ ಬೆಳವಣಿಗೆ ಸಾಧ್ಯವಿಲ್ಲ

• ಮಲ್ಲಿಕಾರ್ಜುನ ಹೆಗ್ಗಳಗಿ

ಜಪಾನೀಯರಿಗೆ ಸಮುದ್ರದ ದಂಡೆಯಲ್ಲಿ ಫ್ರೈ ಮಾಡಿದ ಮೀನು ತಿನ್ನುವುದು ಬಹಳ ಇಷ್ಟ. ಆದರೆ, ದೇಶದ ಎಲ್ಲೆಡೆ ತಾಜಾ ಮೀನು ಸಿಗುವುದು ಸಾಧ್ಯವಿಲ್ಲ. ಹೀಗಾಗಿ, ದೊಡ್ಡ ನೀರಿನ ಟ್ಯಾಂಕುಗಳಲ್ಲಿ ಮೀನುಗಳನ್ನು ಬೆಳೆಸುವ ಸಂಪ್ರದಾಯ ಆರಂಭವಾಯಿತು. ಆದರೆ ಇವುಗಳಿಗೆ ಸಮುದ್ರದ ಮೀನುಗಳಷ್ಟು ರುಚಿ ಬರಲಿಲ್ಲ. ಅವರಿಗೆ ಕಾರಣ ಗೊತ್ತಾಯಿತು. ತಾವು ಸಾಕುವ ಮೀನುಗಳ ನೀರಿನ ಟ್ಯಾಂಕುಗಳಲ್ಲಿ ಒಂದೆರಡು ಷಾರ್ಕ್ ಮೀನುಗಳನ್ನು ಬಿಡತೊಡಗಿದರು. ಈ ಷಾರ್ಕ್ ಮೀನುಗಳು ಕೆಲವು ಮೀನುಗಳನ್ನು ತಿನ್ನುತ್ತವೆ ನಿಜ, ಆದರೆ ಉಳಿದ ಮೀನುಗಳು ಬದುಕುಳಿಯಲು ಪ್ರಯತ್ನಿಸಿ ತುಂಬಾ ಓಡಾಡುತ್ತವೆ. ಈ ಹೋರಾಟ ಮತ್ತು ಬದುಕಬೇಕೆಂಬ ಛಲ ಅವುಗಳ ಫ್ರೆಶ್‌ನೆಸ್ ಕಾಪಾಡುತ್ತದೆ. ಇದು ಮನುಷ್ಯ ಜೀವಿಗಳಿಗೆ ಹೆಚ್ಚು ಅನ್ವಯವಾಗುವ ಸಂದೇಶ.

ಈ ಕೋವಿಡ್ ಸಂಕಷ್ಟದ ದಿನಗಳಲ್ಲಿ ಶ್ರಮದ ದುಡಿಮೆ ಕಡಿಮೆಯಾಗುತ್ತಿದೆ. ದೈಹಿಕ ಶ್ರಮವಿಲ್ಲದೆ ಆರೋಗ್ಯವಿಲ್ಲ. ಕೆಲಸವೂ ಒಂದು ಧ್ಯಾನ. ಅದು ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ. ವರ್ಕ್ ಫ್ರಮ್ ಹೋಮ್ ಎನ್ನುವ ಕಲ್ಪನೆಯಲ್ಲಿ ಕೆಲವರು ಆಫೀಸ್ ಕೆಲಸದಲ್ಲಿ ತೊಡಗಿದ್ದಾರೆ. ಆದರೆ ಶ್ರಮದ ದುಡಿಮೆ ಬೇಕೇ ಬೇಕು. ಸುಮ್ಮನೆ ಇದ್ದು ಹೋಗುವುದಕ್ಕೆ ಈ ಬದುಕು ಹೇಳಿ ಮಾಡಿಸಿದ್ದಲ್ಲ. ಸಂಪಾದನೆ, ಸಾಧನೆ, ಕೀರ್ತಿ, ಅಧಿಕಾರ, ಅಂತಸ್ತು ಮುಂತಾದ ಹೆಗ್ಗಳಿಕೆಗಳಿಗಾಗಿ ಈ ಜೀವ ಸದಾ ತುಡಿಯುತ್ತಿರುತ್ತದೆ. ಇದು ಜೀವಂತಿಕೆಯ ಲಕ್ಷಣ. ಬದುಕಿನ ಎಲ್ಲ ಸಾಧನೆ ಸಿದ್ಧಿಗಳಿಗೆ ಹುಮ್ಮಸ್ಸು ದೊಡ್ಡ ಬಂಡವಾಳ.

ಕಾಯಕ ಮಾರ್ಗದ ಹಿರಿಮೆಯನ್ನು ಶರಣ ಆಯ್ದಕ್ಕಿ ಮಾರಯ್ಯ ತಮ್ಮ ಒಂದು ವಚನದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ.

ಕಾಯಕದಲ್ಲಿ ನಿರತನಾದಡೆ, ಗುರು ದರ್ಶನವಾದಡೂ ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ
ಕಾಯಕದೊಳಗು

ನಮ್ಮ ಮನೆಯ ಹೊರಾಂಗಣದಲ್ಲಿ ಸಂಜೆ ಪತ್ರಿಕೆ- ಗಳನ್ನು ಓದುತ್ತ ಕುಳಿತುಕೊಳ್ಳುವುದು ನನಗೆ ತುಂಬ ಖುಷಿ ಕೊಡುತ್ತದೆ. ಆದರೆ, ಹಾಯಾಗಿ ಕುಳಿತುಕೊಳ್ಳುವುದಕ್ಕೆ ಸೊಳ್ಳೆಗಳು ಬಿಡುವುದಿಲ್ಲ. ಅವುಗಳನ್ನು ಸಂಹರಿಸಲು ಎಲೆಕ್ಟ್ರಿಕ್ ಬ್ಯಾಟ್ ಬೀಸಿದಾಗ ಪ್ರಾಣ ರಕ್ಷಣೆಗಾಗಿ ಅವು ಹಾರಿ ಹೋಗುತ್ತವೆ. ಆಗೊಂದು ಈಗೊಂದು ಸೊಳ್ಳೆ ಸುಟ್ಟುಕೊಂಡು ಸಾಯುತ್ತದೆ. ಗಮನಾರ್ಹ ಸಂಗತಿಯೆಂದರೆ, ಬ್ಯಾಟ್ ಎಂಬ ಆಯುಧ ಕೈಯಲ್ಲಿದ್ದರೂ ಸೊಳ್ಳೆಗಳು ಕಚ್ಚುವ ಪ್ರಯತ್ನ- ವನ್ನು ಮಾತ್ರ ನಿಲ್ಲಿಸವು. ಹೊಂಚು ಹಾಕಿಬಂದು ಕಚ್ಚಿ ಪಾರಾಗುತ್ತವೆ. ಇದು ಅವುಗಳ ಬದುಕುವ 'ಕಾಯಕ'.

ಸ್ವಾತಂತ್ರ್ಯ ಚಳವಳಿಯ ದಿನಗಳಲ್ಲಿ ಮಹಾತ್ಮ ಗಾಂಧಿ, ವಿನೋಬಾ ಭಾವೆ ಮುಂತಾದ ನಾಯಕರು ಜೈಲಿನಲ್ಲಿ ಕಳೆದ ಕ್ರಿಯಾಶೀಲ ದಿನಗಳು ಮಾದರಿಯಾಗಿವೆ. ಮುಖ್ಯವಾಗಿ ಎಲ್ಲರೂ ನೂಲುತ್ತಿದ್ದರು. ಜನಜಾಗೃತಿಯ ಲೇಖನಗಳನ್ನು ಬರೆಯುತ್ತಿದ್ದರು. ನೆಹರೂ ಅಲಹಾಬಾದ್ ಜೈಲನ್ನು ಸುಂದರ ಉಪವನವನ್ನಾಗಿ ರೂಪಿಸಿದರು. ಮೂಲ ಬಂಗಾಳಿ ಭಾಷೆಯಲ್ಲಿರುವ 'ಗೀತಾಂಜಲಿ' ಓದಲು ಅನೇಕ ಸ್ವಾತಂತ್ರ್ಯ ಯೋಧರು ಜೈಲಿನಲ್ಲಿ ಬಂಗಾಳಿ ಭಾಷೆ ಕಲಿತರು. ತಿಲಕರು ಜಗತ್ಪ್ರಸಿದ್ಧ 'ಗೀತಾ ರಹಸ್ಯ' ಕೃತಿ ರಚಿಸಿದರು. ತಮ್ಮ ಆತಂಕದ ದಿನಗಳಲ್ಲಿ ಇವರೆಲ್ಲ ಕ್ರಿಯಾಶೀಲರಾಗಿದ್ದರಿಂದಲೇ ದೊಡ್ಡ ನಾಯಕರಾಗಿ ಬೆಳೆದರು.

ಜನರು ನಡಿಗೆಯ ಗಮ್ಮತ್ತು ಕಳೆದುಕೊಳ್ಳುತ್ತಿದ್ದಾರೆ. ಸಮೀಪದ ಡೇರಿಗೆ ಹೋಗಿ ಹಾಲು ತರಲೂ ವಾಹನ ಬೇಕು. ನಡಿಗೆ ಎಂಬುದು ಅರಿವಿನ ಹಾದಿ. ಅದನ್ನು ಕಳೆದುಕೊಳ್ಳಬಾರದು. ಹಾಗೆಯೇ ಮನೆಯಲ್ಲಿ ನಮ್ಮ ಬಟ್ಟೆ ನಾವೇ ಸ್ವಚ್ಛ ಮಾಡಿಕೊಳ್ಳಬೇಕು. ಸಣ್ಣ ಸಣ್ಣ ಕೆಲಸಗಳು ಬದುಕಿಗೆ ದೊಡ್ಡ ಸಂತೋಷ ಕೊಡುತ್ತವೆ.

ಕೊರೊನಾ ಮತ್ತು ಇತರ ವೈರಸ್ ಜೊತೆಗೆ ನಾವು ಇಂದು ಮತ್ತು ಮುಂದೆಯೂ ಬದುಕಬೇಕಾಗಿದೆ. ಕೆಲಸ ಗೇಡಿಗಳಾಗಿ ಕುಳಿತುಕೊಳ್ಳುವುದರಿಂದ ಶಾರೀರಿಕ ಚಟುವಟಿಕೆಗಳಿಲ್ಲದೆ ಸೊರಗಬಹುದು. ಮನುಷ್ಯ ಸ್ವಾರ್ಥಿಯಾಗಬಹುದು. ಖಿನ್ನತೆಗೆ ಒಳಗಾಗುವವರ ಸಂಖ್ಯೆ ಹೆಚ್ಚಬಹುದು. ಇವುಗಳನ್ನು ಸರಳವಾಗಿ ಪರಿಣಾಮಕಾರಿಯಾಗಿ ಗೆಲ್ಲಲು ಕೆಲಸವೇ ದಿವ್ಯ ಔಷಧಿ. ಆರಾಮದಾಯಕ ಪರಿಧಿಯಲ್ಲಿ ಎಂದಿಗೂ ಬೆಳವಣಿಗೆ ಸಾಧ್ಯವಿಲ್ಲ.



ಮಹಾಲಿಂಗಪುರ ಪಟ್ಟಣದಲ್ಲಿ ರುದ್ರಪ್ಪ ಕರಡಿ ಎಂಬ 95 ವರ್ಷದ ಕಲಾವಿದರೊಬ್ಬರಿದ್ದಾರೆ. ಎದ್ದು ನಿಲ್ಲುವುದು ಕಷ್ಟ. ಆದರೆ ಕರಡಿ ವಾದ್ಯ ನುಡಿಸಲು ಹೇಳಿದರೆ ಭಾರವಾದ ಕರಡಿ ವಾದ್ಯವನ್ನು ಕೊರಳಲ್ಲಿ ಹಾಕಿಕೊಂಡು ಕುಣಿ ಕುಣಿದು ನುಡಿಸುತ್ತಾರೆ. ನೆಹರೂ, ದೇವರಾಜ ಅರಸು ಅವರ ಮುಂದೆ ತಾವು ಕರಡಿ ನುಡಿಸಿದ್ದ ಕಥೆಯನ್ನು ಹೇಳುತ್ತಾರೆ. ನಮ್ಮ ನಮ್ಮ ಆಸಕ್ತಿಯ ಕಲೆಗಳಲ್ಲಿ ತಲ್ಲೀನರಾದರೆ ಆರೋಗ್ಯ ಗಟ್ಟಿಯಾಗಿ ಉಳಿಯುತ್ತದೆ.

ಸರ್ಕಾರಿ ಕಚೇರಿಗಳಲ್ಲಿ ತಪ್ಪಿತಸ್ಥ ಉದ್ಯೋಗಿಗಳಿಗೆ ಯಾವುದೇ ಕೆಲಸ ಕೊಡದೆ ಸುಮ್ಮನೆ ಕುಳಿತು ಹೋಗುವ ಶಿಕ್ಷೆ ವಿಧಿಸುವ ಪದ್ಧತಿ ಇದೆ. ವಿವಿಧ ದೇಶಗಳಲ್ಲಿಯೂ ಇಂಥ ಶಿಕ್ಷೆಯ ವಿಧಾನ ಇದೆ. ಕೆಲಸ ಇಲ್ಲದೆ ಸುಮ್ಮನೆ ಕುಳಿತುಕೊಳ್ಳುವುದು 'ಶಿಕ್ಷೆ'. ಈಗ ಅಂಥ ಒಂದು 'ಶಿಕ್ಷೆ'ಯನ್ನು ನಮ್ಮ ಮೇಲೆ ಎಳೆದುಕೊಂಡಿದ್ದೇವೆ ಎಂಬ ಅನುಭವವಾಗುತ್ತಿದೆ.

ವಾಚಕರ ವಾಣಿ

ಕೋವಿಡ್ ಹರಡುವ ಸಾಧ್ಯತೆ

ಕೋವಿಡ್‌ಗೆ ಸಣ್ಣ ಪುಟ್ಟ ಆಸ್ಪತ್ರೆಗಳು ಸಹ ಚಿಕಿತ್ಸೆ ನೀಡಲು ಮುಂದಾಗಿವೆ. ಈ ಎಲ್ಲ ಆಸ್ಪತ್ರೆಗಳಲ್ಲೂ ಕೋವಿಡ್ ವಾರ್ಡ್‌ಗಳಿವೆ. ದುರಂತವೆಂದರೆ, ಇದೇ ಈಗ ಕೋವಿಡ್ ಹೆಚ್ಚಿನ ಮಟ್ಟದಲ್ಲಿ ಹರಡಲು ಕಾರಣವಾಗುವ ಆತಂಕ ಇದೆ. ಇತರ ಆರೋಗ್ಯ ಸಮಸ್ಯೆಗಳಿಗೆ ಅದೇ ಆಸ್ಪತ್ರೆಗೆ ಭೇಟಿ ನೀಡುವ ಸಾಮಾನ್ಯ ರೋಗಿಗಳಿಗೂ ಕೋವಿಡ್ ಹರಡುವ ಸಾಧ್ಯತೆ ಇದೆ. ಬಹುತೇಕ ಆಸ್ಪತ್ರೆಗಳಲ್ಲಿ ಕೋವಿಡ್ ವಾರ್ಡ್‌ನಲ್ಲಿ ಚಿಕಿತ್ಸೆ ನೀಡುವ ವೈದ್ಯರೇ ಸಾಮಾನ್ಯ ರೋಗಿಗಳ ವಾರ್ಡ್‌ಗೂ ಭೇಟಿ ನೀಡಿ ರೋಗಿಗಳನ್ನು ಪರೀಕ್ಷಿಸುತ್ತಾರೆ. ಹಾಗೆಯೇ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸುವ ಸಿಬ್ಬಂದಿಯೂ ಎಲ್ಲ ವಾರ್ಡ್‌ಗಳಲ್ಲೂ ಓಡಾಡುತ್ತಾರೆ. ಒ.ಪಿ.ಡಿ ಮುಂತಾದೆಡೆ ಎಲ್ಲ ರೀತಿಯ ರೋಗಿಗಳು ಓಡಾಡುತ್ತಾರೆ.

ಕೋವಿಡ್ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಪ್ರವೇಶ ಇರುವುದಿಲ್ಲ. ಬೇರೆ ಸಾಮಾನ್ಯ ಸಮಸ್ಯೆ ಬಗೆಹರಿಸಿಕೊಳ್ಳಲು ಹೋಗಿ ಮಹಾಮಾರಿಯನ್ನು ಮನೆಗೆ ಕೊಂಡೊಯ್ಯುವಂತಾಗಿದೆ. ಹಾಗಾಗಿ ಪ್ರತ್ಯೇಕ ಸಿಬ್ಬಂದಿ, ಪ್ರತ್ಯೇಕ ಪ್ರವೇಶ ದ್ವಾರ ಇಲ್ಲದ ಆಸ್ಪತ್ರೆಗಳಿಗೆ ಕೋವಿಡ್ ಚಿಕಿತ್ಸೆ ನೀಡಲು ಅವಕಾಶ ನೀಡಬಾರದು. ಇಲ್ಲವಾದಲ್ಲಿ ಕೇವಲ ಕೋವಿಡ್ ಚಿಕಿತ್ಸೆಗೆ ಅಂತಹ ಆಸ್ಪತ್ರೆಗಳನ್ನು ನಿಯೋಜಿಸಿ, ಸಾಮಾನ್ಯ ರೋಗಿಗಳಿಗೆ ಬೇರೆ ಆಸ್ಪತ್ರೆ ವ್ಯವಸ್ಥೆ ಮಾಡಬೇಕು.

ಎಸ್.ರವಿ, ಮೈಸೂರು

ಕೃಪಾಂಕ ನೀಡಲಿ, ಅಭ್ಯರ್ಥಿಗಳನ್ನು ಸೆಳೆಯಲಿ

ಕೊರೊನಾ ಹಾವಳಿ ತಡೆಯಲು ರಾಜ್ಯ ಸರ್ಕಾರವು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಆದರೂ ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞವೈದ್ಯರ ಕೊರತೆ ಇದೆ. ಶುಶ್ರೂಷಕ- ಡಿ ದರ್ಜೆ ನೌಕರರ ಹುದ್ದೆಗಳೂ ಖಾಲಿ ಇವೆ. ಇವುಗಳನ್ನು ತುಂಬಲು ಹಲವಾರು ಜಿಲ್ಲೆಗಳಲ್ಲಿ ಅರ್ಜಿ ಕರೆದರೆ ಬಹಳ ಜನ ಮುಂದೆ ಬರುತ್ತಿಲ್ಲ. ಆದರೆ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರು, ಸಿಬ್ಬಂದಿಯ ಕೊರತೆ ಅಷ್ಟಾಗಿ ಕಾಡುತ್ತಿಲ್ಲ.

ಕಳೆದ ವರ್ಷದ ಕೊರೊನಾ ಸಂಕಷ್ಟದ ಸಮಯದಲ್ಲಿ ವೈದ್ಯರು– ಸಿಬ್ಬಂದಿಯನ್ನು ಬಳಸಿಕೊಂಡು ನಂತರದಲ್ಲಿ ಅವರಲ್ಲಿ ಬಹುತೇಕರನ್ನು ಕೈಬಿಡಲಾಯಿತು. ಅಲ್ಲದೆ ಕೇವಲ 6-11 ತಿಂಗಳ ಗುತ್ತಿಗೆ ಅವಧಿಗೆ ಅರ್ಜಿ ಕರೆಯಲಾಗಿದೆ. ತತ್ಪರಿಣಾಮವಾಗಿ ಈ ಬಾರಿ ಹೆಚ್ಚು ಜನರು ಆಸಕ್ತಿ ತೋರುತ್ತಿಲ್ಲ. ಬದಲಾಗಿ, ಈ ಸಂದಿಗ್ಧ ಸನ್ನಿವೇಶದಲ್ಲಿ ಕಾರ್ಯನಿರ್ವಹಿಸುವ ವೈದ್ಯರು-ಸಿಬ್ಬಂದಿಗೆ ಪೂರ್ಣಾವಧಿ ನೇಮಕಾತಿ ಸಂದರ್ಭಗಳಲ್ಲಿ ಹೆಚ್ಚುವರಿ ಕೃಪಾಂಕ, ಮೀಸಲಾತಿಯಂಥ ಅವಕಾಶ ನೀಡಿದಲ್ಲಿ ಅವರು ಆಸಕ್ತಿ ತೋರಬಹುದು.

ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಮೌಢ್ಯ ಬಿತ್ತುವ ಕೆಲಸ ಸಲ್ಲದು

ಕೊರೊನಾ ತೊಲಗಿಸಲು ರಾಜ್ಯದ ವಿವಿಧ ಭಾಗಗಳಲ್ಲಿ ಜನರು ಮೌಢ್ಯದ ಮೊರೆ ಹೋಗಿರುವ ಕುರಿತ ವರದಿ (ಪ್ರ.ವಾ., ಮೇ 26) ನಮ್ಮ ಸಮಾಜದಲ್ಲಿರುವ ಅಜ್ಞಾನವನ್ನು ತೆರೆದಿಟ್ಟಿದೆ. ಧಾರ್ಮಿಕ ಆಚರಣೆಗಳಿಗೆ ಯಾವುದೇ ತಂಟೆ ತಕರಾರು ಇರದು. ಆದರೆ ಕೊರೊನಾ ತೊಲಗಿಸಲು ಟ್ರ್ಯಾಕ್ಟರ್ ತುಂಬುವಷ್ಟು ಅಕ್ಕಿ ಬೇಳೆಯನ್ನು ಬೇಯಿಸಿ ಚೆಲ್ಲಿದ್ದು ಅಮಾನವೀಯ.

ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಬೇಕಾದ ಜನಪ್ರತಿನಿಧಿಗಳೇ ಮೌಢ್ಯ ಬಿತ್ತುವ ಕಾರ್ಯದಲ್ಲಿ ನಿರತರಾಗಿರುವುದು ಆತಂಕಕಾರಿ. ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು ಸಾಧ್ಯವಾದರೆ ಕೊರೊನಾ ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸಿ, ನೊಂದವರಿಗೆ ಸಹಾಯ, ಸಹಕಾರ ನೀಡಲಿ. ಇಲ್ಲವಾದರೆ ಸುಮ್ಮನಿದ್ದುಬಿಡಲಿ. ಉಪಯುಕ್ತ ವಸ್ತುಗಳನ್ನು ವ್ಯರ್ಥ ಮಾಡಿ ಸಮಾಜದಲ್ಲಿ ಮೌಢ್ಯ ಬಿತ್ತುವುದು ಬೇಡ.

ಮಹದೇವ್ ಬೆಂಕಿಪುರ, ಹುಣಸೂರು

ಖೇಲೋ ಇಂಡಿಯಾ ಕೇಂದ್ರ: ಜಿಲ್ಲಾ ಕೇಂದ್ರಕ್ಕೆ ಬೇಡ

ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ತಲಾ ಒಂದು ಖೇಲೋ ಇಂಡಿಯಾ ಕ್ರೀಡಾ ಸೌಲಭ್ಯ ಕೇಂದ್ರ ಸ್ಥಾಪನೆಗೆ ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯವು ಮಂಜೂರಾತಿ ನೀಡಿರುವುದು ಸಂತಸದ ಸಂಗತಿ. ಆದರೆ, ಈ ಕೇಂದ್ರಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸದೆ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶವನ್ನು ಗಣನೆಗೆ ತೆಗೆದುಕೊಂಡು, ಜಿಲ್ಲೆಯ ಮಧ್ಯ ಭಾಗದಲ್ಲಿರುವ ದೊಡ್ಡ ಹಳ್ಳಿ ಅಥವಾ ಪಟ್ಟಣದಲ್ಲಿ ಆರಂಭಿಸಬೇಕು. ಇದರಿಂದ ಜಿಲ್ಲೆಯ ಯಾವುದೇ ಗಡಿ ಭಾಗದ ಆಸಕ್ತರಿಗೆ ಕೇಂದ್ರವು ತುಂಬಾ ದೂರವಿದೆ ಅನ್ನಿಸದು. ಆ ಹಳ್ಳಿ ಅಥವಾ ಪಟ್ಟಣ ಪ್ರದೇಶ ಅಭಿವೃದ್ಧಿ ಹೊಂದಲು ಒಂದು ಅವಕಾಶವೂ ಸಿಕ್ಕಂತೆ ಆಗುತ್ತದೆ. ಈಗಿರುವ ಜಿಲ್ಲಾ ಕೇಂದ್ರಗಳ ಮೇಲಿರುವ ನೀರು, ರಸ್ತೆ, ವಿದ್ಯುತ್, ಜನಸಂದಣಿ, ಮಾಲಿನ್ಯಗಳ ಒತ್ತಡವನ್ನು ತುಸುವಾದರೂ ತಡೆಯಬಹುದು. ಆಯಾ ಭಾಗದ ಹಳ್ಳಿ ಅಥವಾ ಪಟ್ಟಣ ಪ್ರದೇಶದ ಜನಪ್ರತಿನಿಧಿಗಳು ಈ ದಿಸೆಯಲ್ಲಿ ಪ್ರಯತ್ನಿಸಬೇಕು.

ಮದನ ಮೋಹನ ರಾವ್, ರಾಯಚೂರು

ಸಂಸದರ ಈ ನಡೆ ಸರಿಯಲ್ಲ

'ಸಂಸದ ತೇಜಸ್ವಿ ಸೂರ್ಯ ನಡೆಗೆ ಆಕ್ರೋಶ' ಎಂಬ ಸುದ್ದಿ (ಪ್ರ.ವಾ., ಮೇ 26) ಓದಿ ಮನಸ್ಸಿಗೆ ತುಂಬಾ ಬೇಸರವಾಯಿತು. ಕೋವಿಡ್ ಲಸಿಕೆಗೆ ಬೇಡಿಕೆ ಇರುವುದನ್ನು ಮನಗಂಡು, ಜನಪ್ರತಿನಿಧಿಯಾದ ತೇಜಸ್ವಿ ಸೂರ್ಯ ಹಾಗೂ ಇತರರು ತಮ್ಮ ಕ್ಷೇತ್ರದ ಜನರಿಂದ, ಅದರಲ್ಲೂ ಉಳ್ಳವರಿಂದ ಹಣ ಪಡೆದುಕೊಂಡು ಕೋವಿಡ್ ಲಸಿಕೆ ಒದಗಿಸುತ್ತಿರುವುದು ಸರಿಯಲ್ಲ. ಸಮಸ್ತ ಜನರೂ ತೆರಿಗೆದಾರರಾಗಿದ್ದಾರೆ. ಲಸಿಕೆಯನ್ನು ಉಚಿತವಾಗಿ ಪಡೆಯುವುದು ಎಲ್ಲರ ಹಕ್ಕು. ಹೀಗಿರುವಾಗ ಆರ್ಥಿಕ ಸಾಮರ್ಥ್ಯ ಉಳ್ಳವರಿಗೆ ಮಾತ್ರ ಅವಕಾಶ ಒದಗಿಸಿಕೊಡುವುದು ಎಷ್ಟು ಸರಿ?

ಸಂವಿಧಾನದತ್ತವಾದ ಹಕ್ಕುಗಳು ಎಲ್ಲರಿಗೂ ಸಮಾನವಾಗಿ ಲಭ್ಯವಾಗುವಂತೆ ಜನಪ್ರತಿನಿಧಿಗಳು ನೋಡಿಕೊಳ್ಳಬೇಕು. ಇತ್ತೀಚೆಗೆ ಹಳ್ಳಿಗಳಿಗೂ ಆವರಿಸಿರುವ ಕೊರೊನಾ ಸೋಂಕಿನ ನಿಯಂತ್ರಣಕ್ಕೆ ಹೆಚ್ಚಿನ ಆದ್ಯತೆ ನೀಡಲಿ. ಕೊರತೆಯಿರುವ ಲಸಿಕೆಯನ್ನು ಲಭ್ಯವಾಗಿಸಲು ವ್ಯವಸ್ಥೆ ಮಾಡಲಿ. ಬಹಳಷ್ಟು ಜನ ಮೊದಲನೇ ಹಂತದ ಲಸಿಕೆಯನ್ನೇ ಪಡೆದುಕೊಂಡಿಲ್ಲ. ಅಂತಹವರಿಗೆ ಲಸಿಕೆ ನೀಡಲು ಕ್ರಮ ಕೈಗೊಳ್ಳಲಿ.

ಡಾ. ಎ.ಆರ್.ಗೋವಿಂದಸ್ವಾಮಿ ನಾಯಕ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹೋರಾಟನಿರತರ ಬೆಸೆಯುವ ಚುಂಬಕ ಶಕ್ತಿ

● ಸಿರಿಮನೆ ನಾಗರಾಜ್

ಹೋರಾಟದ ಹಾದಿಯಲ್ಲಿ ಹೇಗಿರಬೇಕು? ದೇಶ ಮತ್ತು ಸಮಾಜದ ಕುರಿತು ಹೇಗೆ ಯೋಚಿಸಬೇಕು? ಮತ್ತು ಜನರ ನಡುವೆ ನಾವು ಹೇಗೆ ಇರಬೇಕು ಎಂಬುದಕ್ಕೆ ಎಚ್.ಎಸ್. ದೊರೆಸ್ವಾಮಿಯವರು ಒಂದು ಆದರ್ಶಪ್ರಾಯ ಮಾದರಿಯಾಗಿ ನಮ್ಮೊಂದಿಗೆ ಇದ್ದರು.

ಸಮಯ ಸಿಕ್ಕಾಗ, ಶನಿವಾರ ಅಥವಾ ಭಾನುವಾರ ಪುರುಸೊತ್ತು ಇದ್ದಾಗ ಮಾತ್ರ ಹೋರಾಟಗಳನ್ನು ಮಾಡಬಾರದು ಎಂಬುದು ಅವರ ನಿಲುವು ಆಗಿತ್ತು. ಜನರು ತಪ್ಪು ಎಂದು ಅರ್ಥೈಸುವ ರೀತಿಯಲ್ಲಿ ಯಾವತ್ತೂ ಹೋರಾಟವನ್ನು ಮಾಡಲೇಬಾರದು ಎಂಬ ತತ್ವಕ್ಕೆ ಅವರು ಅಂಟಿಕೊಂಡಿದ್ದರು. ಯಾವುದೇ ಒಂದು ವಿಷಯದ ಕುರಿತು ಹೋರಾಟ ಕೈಗೆತ್ತಿಕೊಂಡರೆ ಅದು ಬಗೆಹರಿಯುವವರೆಗೂ ಹೋರಾಟ ಮುಂದುವರಿಸಬೇಕು ಎಂಬ ನಿಲುವನ್ನು ಅವರು ಜೀವನದ ಕೊನೆಯವರೆಗೂ ಸಡಿಲಿಸಲೇ ಇಲ್ಲ. ಅವರ ಉಪಸ್ಥಿತಿ ಇರುವ ಎಲ್ಲ ಹೋರಾಟಗಳೂ ಸಂಘಟಿತ ರೂಪ ಪಡೆದುಕೊಳ್ಳುತ್ತಿದ್ದವು. ಎಲ್ಲ ಹೋರಾಟಗಾರರನ್ನೂ ಒಂದು ವೇದಿಕೆಗೆ ಸೆಳೆಯುವ ಚುಂಬಕ ಶಕ್ತಿಯಂತೆ ಅವರು ಕೆಲಸ ಮಾಡುತ್ತಿದ್ದರು. ಆ ವಿಚಾರದಲ್ಲಿ ಬಾಧಿತರಾಗಿರುವ ಎಲ್ಲ ಜನರು ಮತ್ತು ಅದೇ ವಿಚಾರದಲ್ಲಿ ಹೋರಾಟ ನಡೆಸುತ್ತಿರುವ ಎಲ್ಲ ಸಂಘಟನೆಗಳನ್ನೂ ಒಗ್ಗೂಡಿಸಿ ಮುನ್ನಡೆಯಬೇಕು ಎಂಬುದನ್ನು ಹೋರಾಟಗಾರರಿಗೆ ಸದಾ ನೆನಪಿಸುತ್ತಿದ್ದರು. ಕೊನೆಯ ದಿನದವರೆಗೂ ಈ ಪ್ರಯತ್ನ ಮುಂದುವರಿಸಿದ್ದರು. ರೈತ ಸಂಘಟನೆಗಳ ಎಲ್ಲ ಬಣಗಳು ಒಂದಾಗಬೇಕು, ದಲಿತ ಸಂಘಟನೆಗಳ ಎಲ್ಲ ಗುಂಪುಗಳು ಒಗ್ಗೂಡಬೇಕು, ಎಡ ಪಕ್ಷಗಳೂ ಒಟ್ಟಾಗಬೇಕು ಎಂಬ ಆಸೆ ಅವರಲ್ಲಿತ್ತು.

ಜನರು ತಮ್ಮ ಹಕ್ಕುಗಳನ್ನು ಪಡೆಯಲು ಯಾರಿಗೂ ತಲೆ ಬಾಗಬಾರದು. ಹಕ್ಕಿಗಾಗಿ ಹೋರಾಟ ನಡೆಸಬೇಕು. ಅನಿವಾರ್ಯ ಆದಲ್ಲಿ ಜೈಲಿಗೆ ಹೋಗುವುದಕ್ಕೂ ಸಿದ್ಧರಾಗಿರಬೇಕು ಎಂಬುದು ಅವರ ತತ್ವವಾಗಿತ್ತು. ದೇಶದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ಅವರಿಗೆ ಗಾಢವಾದ ಅಭಿಮಾನ ಇತ್ತು. ದೇಶದಲ್ಲಿ ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರಿಗೆ ಪರಭಾರೆ ಮಾಡುವ ನಿರ್ಣಯಗಳು ಆದ ಸಂದರ್ಭಗಳಲ್ಲಿ ಅತಿಯಾಗಿ ನೊಂದುಕೊಳ್ಳುತ್ತಿದ್ದರು. 'ಸಾರ್ವಜನಿಕ ಆಸ್ತಿಗಳ ವಿಕ್ರಯದಿಂದ ಜನರ ಸ್ವಾತಂತ್ರ್ಯದ ಹರಣ ಆಗುತ್ತಿದೆ' ಎಂದು ಬೇಸರ ಪಟ್ಟಿಕೊಳ್ಳುತ್ತಿದ್ದರು.

'ಸಮಾಜ ಸೇವೆಯಲ್ಲಿ ಇರುವವನು ಸ್ವಯಂಪ್ರೇರಿತವಾಗಿ ಬಡತನವನ್ನು ಅಪ್ಪಿಕೊಳ್ಳಬೇಕು' ಎಂಬ ಮಹಾತ್ಮ ಗಾಂಧಿಯವರ ಮಾತನ್ನು ಜೀವನದುದ್ದಕ್ಕೂ ಪಾಲಿಸಿದವರು ದೊರೆಸ್ವಾಮಿ. ಪ್ರೌಢಶಾಲಾ ದಿನಗಳಲ್ಲಿ ಪುಸ್ತಕವೊಂದರಲ್ಲಿ ಗಾಂಧಿಯವರ ಮಾತನ್ನು ಓದಿದ್ದ ಅವರು, ಕಟ್ಟಕಡೆಯವರೆಗೂ ಅದನ್ನು ಅಕ್ಷರಶಃ ಅನುಕರಿಸಿದರು. ಕೆಂಗಲ್ ಹನುಮಂತಯ್ಯ ಅವರು ಮುಖ್ಯಮಂತ್ರಿಯಾದ ಬಳಿಕ ದೊರೆಸ್ವಾಮಿ ಅವರನ್ನು ಕರೆದು ಸಂಪುಟ ದರ್ಜೆ ಸಚಿವ ಸ್ಥಾನ ನೀಡುವುದಾಗಿ ಹೇಳಿದ್ದರು. 'ಸಚಿವನಾದರೂ ನಾನು ಈಗ ಇದ್ದಂತೆಯೇ ಇರುವೆ. ತಪ್ಪು ಕಂಡಾಗ ನೇರವಾಗಿ ಹೇಳುತ್ತೇನೆ. ಅದಕ್ಕೆ ಸಮ್ಮತವಿದ್ದರೆ ಸಚಿವ ಸ್ಥಾನ ಕೊಡಬಹುದು' ಎಂದು ದೊರೆಸ್ವಾಮಿ ಪ್ರತಿಕ್ರಿಯಿಸಿದ್ದರಂತೆ. 'ಅದೆಲ್ಲ ಅಸಾಧ್ಯ. ತಪ್ಪಿನ ಬಗ್ಗೆ ಮಾತನಾಡಬಾರದು' ಎಂದು ಕೆಂಗಲ್ ಹೇಳಿದಾಗ, 'ನಿಮ್ಮ ಕಿವಿಯಲ್ಲಾದರೂ ಹೇಳುವ ಸ್ವಾತಂತ್ರ್ಯ ಇರಬೇಕಲ್ಲ' ಎಂದು ಪ್ರತ್ಯುತ್ತರ ನೀಡಿ ಸಚಿವ ಸ್ಥಾನವನ್ನು ನಿರಾಕರಿಸಿದ್ದರು.



1974ರಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಗಾರರ ಸಮಾವೇಶದಲ್ಲಿ ದೊರೆಸ್ವಾಮಿ

ಜೀವನ ಪೂರ್ತಿ ಬಾಡಿಗೆ ಮನೆಯಲ್ಲೇ ಕಳೆದವರು ದೊರೆಸ್ವಾಮಿ. ಮೂರು ವರ್ಷಗಳ ಹಿಂದೆ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮವೊಂದರಲ್ಲಿ ದೊರೆಸ್ವಾಮಿ ದಂಪತಿಯನ್ನು ಭೇಟಿಮಾಡಿದ್ದರು. ಅವರು ಬಾಡಿಗೆ ಮನೆಯಲ್ಲೇ ಇರುವ ವಿಚಾರ ತಿಳಿದ ಸಿದ್ದರಾಮಯ್ಯ, ದೊಡ್ಡ ಮನೆ ಮತ್ತು ಆಳುಗಳನ್ನು ಒದಗಿಸುವ ವ್ಯವಸ್ಥೆ ಮಾಡುವುದಾಗಿ ಕೇಳಿದ್ದರು. ದೊರೆಸ್ವಾಮಿಯವರ ಪತ್ನಿ ಈ ಕುರಿತು ಪತಿಯಲ್ಲಿ ಹೇಳಿದಾಗ, 'ನೀನು ಬೇಕಾದರೆ ಅಲ್ಲಿಗೆ ಹೋಗು. ನಾನು ಗಾಂಧಿ ಭವನದಲ್ಲಿ ಇರುತ್ತೇನೆ' ಎಂದಿದ್ದರು. ಹೋರಾಟದ ಹಾದಿಯಲ್ಲಿ ಮುಕ್ತ ಸ್ವಾತಂತ್ರ್ಯ ಬಯಸಿದ್ದ ಕಾರಣಕ್ಕಾಗಿಯೇ ಅವರು ಮಕ್ಕಳು, ಮೊಮ್ಮಕ್ಕಳ ಜತೆ ವಾಸಿಸಲಿಲ್ಲ. ಮಕ್ಕಳ ಜತೆಗಿದ್ದರೆ ಅವರಿಗೆ ತೊಂದರೆ ಆಗಬಹುದು ಮತ್ತು ತಮಗೂ ಹೋರಾಟದಲ್ಲಿ ಭಾಗವಹಿಸಲು ಅಡ್ಡಿಗಳು ಎದುರಾಗಬಹುದು ಎಂಬುದು ಅವರ ನಿಲುವಾಗಿತ್ತು.

ಜಾತಿ, ಧರ್ಮ ಸೇರಿದಂತೆ ಯಾವ ವಿಚಾರದಲ್ಲೂ ಜನರಲ್ಲಿ ಭೇದ ತೋರುತ್ತಿರಲಿಲ್ಲ. ಶತಮಾನ ಪೂರೈಸಿದರೂ ಅಗಾಧವಾದ ನೆನಪಿನ ಶಕ್ತಿ ಅವರಲ್ಲಿತ್ತು. ಸಾಹಿತ್ಯ, ಕ್ರೀಡೆ ಸೇರಿದಂತೆ ಎಲ್ಲ ವಿಚಾರಗಳಲ್ಲೂ ಆಸಕ್ತಿ ಇತ್ತು. ಕ್ರಿಕೆಟ್ ಬಗ್ಗೆ ಅತೀವ ಪ್ರೀತಿ ಇತ್ತು ಅವರಿಗೆ. ಸಮ ಸಮಾಜದ ಕನಸು ಅವರ ಕಣ್ಣಲ್ಲಿ ಇತ್ತು. ಅದನ್ನು ಸದಾ ಕಾವ್ಯೂ ಜತೆಗಿರುವವರಿಗೆ ನೆನಪಿಸುತ್ತಲೇ ಇದ್ದ ಜೀವ ದೊರೆಸ್ವಾಮಿ.

ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಅವರ ಕನಸಿನ ಫಲವಾಗಿಯೇ ರೂಪುಗೊಂಡಿತ್ತು. ಹೆಚ್ಚು ಜನರನ್ನು ಕಾಡುತ್ತಿರುವ ಯಾವುದಾದರೂ ಒಂದು ಸಮಸ್ಯೆಯನ್ನು ಕೈಗೆತ್ತಿಕೊಂಡು ನಿರಂತರ ಹೋರಾಟ ನಡೆಸಬೇಕು ಎಂದು ಬಯಸಿದ್ದರು. ಅವರ ಸೂಚನೆಯಂತೆ ಆರು ತಿಂಗಳ ಕಾಲ ಅಧ್ಯಯನ ನಡೆಸಿದ ಬಳಿಕ ಭೂಮಿ ಮತ್ತು ವಸತಿ ವಂಚಿತರ ಪರವಾಗಿ ಹೋರಾಟ ಆರಂಭಿಸಲು ನಿರ್ಧರಿಸಲಾಯಿತು. ಅದೇ ಉದ್ದೇಶಕ್ಕಾಗಿ ಹೋರಾಟ ನಡೆಸುತ್ತಿದ್ದ ಎಲ್ಲ ಸಂಘಟನೆಗಳನ್ನೂ ಒಗ್ಗೂಡಿಸುವ ಪ್ರಯತ್ನ ಮಾಡಲಾಯಿತು. ಹಲವು ಸಂಘಟನೆಗಳು ಒಗ್ಗೂಡಿದವು. ನಿರಂತರ ಹೋರಾಟವೂ ನಡೆಯಿತು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕೆಲವು ಸಮಸ್ಯೆಗಳಿಗೆ ಪರಿಹಾರ ದೊರಕಿತು. ದಿಡ್ಡಳ್ಳಿಯ ಆದಿವಾಸಿಗಳಿಗೆ ವಸತಿ ಸೌಕರ್ಯ ಕಲ್ಪಿಸಲು ಆಗ್ರಹಿಸಲು ನಡೆಸಿದ ಹೋರಾಟಕ್ಕೂ ಅವರೇ ಮಾರ್ಗದರ್ಶಕರಾಗಿದ್ದರು. ಹೋರಾಟದ ಫಲವಾಗಿ 328 ಕುಟುಂಬಗಳಿಗೆ ಸುಸಜ್ಜಿತವಾದ ವಸತಿ ವ್ಯವಸ್ಥೆ ದೊರಕಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ವಿಷಯದಲ್ಲಿ ಏನೂ ಪ್ರಗತಿ ಆಗಲಿಲ್ಲ. ಈ ಬಗ್ಗೆ ದೊರೆಸ್ವಾಮಿ ಅವರಿಗೆ ಬಹಳ ಕೊರಗು ಇತ್ತು.

ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿಯ ವಿರುದ್ಧದ ಹೋರಾಟಗಳಲ್ಲೂ ದೊರೆಸ್ವಾಮಿ ಸಕ್ರಿಯರಾಗಿದ್ದರು. ಕೇಂದ್ರ ಸರ್ಕಾರ ಜನರ ಗಮನ ಬೇರೆಡೆ ಸೆಳೆಯಲು ಇಂತಹ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಅರಿತಿದ್ದ ಅವರು, ಬಿಜೆಪಿ ಹಿಂದೆ ನೀಡಿದ್ದ ಭರವಸೆಗಳನ್ನು ಮುಂದಿಟ್ಟುಕೊಂಡು 2024ರವರೆಗೂ ನಿರಂತರ ಹೋರಾಟ ನಡೆಸುವ ಪ್ರಸ್ತಾವ ಮುಂದಿಟ್ಟಿದ್ದರು.



ಬೆಂಗಳೂರಿನಲ್ಲಿ ನಡೆದ ಹೋರಾಟವೊಂದರ ಮುಂಚೂಣಿಯಲ್ಲಿ

ಅದಕ್ಕೆ ಪೂರಕವಾಗಿ ಪ್ರತಿ ತಿಂಗಳು ಮೂರರಿಂದ ನಾಲ್ಕು ದಿನಗಳ ಕಾಲ ಹೋರಾಟ ನಡೆಸಲು ತೀರ್ಮಾನಿಸಲಾಗಿತ್ತು. 2020ರಲ್ಲಿ ನಾಲ್ಕು ದಿನಗಳ ಪ್ರತಿಭಟನೆಯನ್ನೂ ನಡೆಸಲಾಗಿತ್ತು. 2020ರ ಮಾರ್ಚ್‌ನಿಂದ ಕೊರೊನಾ ಕಾರಣದಿಂದ ಲಾಕ್‌ಡೌನ್ ಜಾರಿಯಾಗಿ ಹೋರಾಟಕ್ಕೆ ತಡೆ ಬಿತ್ತು. ಜೀವನದ ಕೊನೆಯ ಹಂತದಲ್ಲಿ ಆರಂಭಿಸಿದ್ದ ಹೋರಾಟವೊಂದನ್ನು ಮುಂದುವರಿಸಲು ಆಗಲಿಲ್ಲ ಎಂಬ ನೋವು ಅವರನ್ನು ಕಾಡುತ್ತಲೇ ಇತ್ತು.

ಲೇಖಕ: ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯ ಪ್ರಮುಖ



ಭಗವತಿ ಕೆರೆಗೆ ಕೊನೆಗೂ 'ದೊರೆ' ಬರಲಿಲ್ಲ

ಕೆಲವು ವರ್ಷಗಳ ಹಿಂದೆ ಹೋರಾಟಗಾರರೊಬ್ಬರು ಗ್ರ್ಯಾನೈಟ್ ದಂಧೆಯ ವಿರುದ್ಧ ಹೋರಾಟಕ್ಕಿಳಿದಿದ್ದರು. ಪರಿಹಾರ ಸಿಗದಿದ್ದಾಗ ಎತ್ತರದ ಮರ ಏರಿ ಕುಳಿತುಬಿಟ್ಟಿದ್ದರು. ನಾನು ಸೇರಿದಂತೆ ಉಳಿದವರು, ಅಧಿಕಾರಿಗಳು, ಪೊಲೀಸರು ಎಷ್ಟೇ ಪ್ರಯತ್ನಿಸಿದರೂ ಆತ ಕೆಳಗೆ ಇಳಿಯಲು ಒಪ್ಪಿರಲಿಲ್ಲ. ಕೊನೆಗೆ ನನಗೆ ಹೊಳೆದದ್ದು ದೊರೆಸ್ವಾಮಿ. ಬಹುಶಃ ಅವರ ಮಾತಿಗೆ ಮನ್ನಣೆ ನೀಡಬಹುದು ಎಂದು ತಕ್ಷಣ ಅವರ ಮನೆಗೆ ಧಾವಿಸಿದೆ. ಆರೋಗ್ಯ ಸರಿ ಇಲ್ಲದೇ ಮಲಗಿದ್ದ ಅವರು ನನ್ನ ನೋಡಿ ಎದ್ದು ಕುಳಿತರು. ಇಂತಹ ಸಮಯದಲ್ಲಿ ಅವರನ್ನು ಕರೆದುಕೊಂಡು ಹೋಗುವುದು ಬೇಡ ಎಂದು ನಿರ್ಧರಿಸಿದೆ. ಒತ್ತಾಯ ಮಾಡಿದಾಗ ವಿಷಯ ಹೇಳಿದೆ. ತಕ್ಷಣ ಪತ್ನಿಯ ಬಳಿ ಸ್ವಲ್ಪ ಮೊಸರನ್ನು ತರಿಸಿಕೊಂಡು ತಿಂದು, ಅಂಗಿ ಹಾಕಿಕೊಂಡು ಹೊರಟೇ ಬಿಟ್ಟರು. ನಮ್ಮನ್ನು ಸತಾಯಿಸಿದ್ದ ನಮ್ಮ ಹೋರಾಟಗಾರ ಅವರು ಬರುತ್ತಿದ್ದಂತೆ ಮರು ಮಾತನಾಡದೇ ಕೆಳಗೆ ಇಳಿದು ಬಂದ. ಅದು ದೊರೆಸ್ವಾಮಿ ಅವರ ತಾಕತ್ತು.

ಹೋರಾಟಗಳಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳುವಾಗ ಅವರ ಸಲಹೆ ಎಂದೂ ತಳ್ಳಿಹಾಕಿಲ್ಲ. ಅವರಿದ್ದಾರೆ ಎಂದರೆ ಅದೇನೋ ಆನೆಬಲ. ಅವರ ಮಾತು ಅಷ್ಟೆ ತೂಕ. ಅವರ ಜತೆ ಹಲವು ಹೋರಾಟಗಳಲ್ಲದೆ ಮಂತ್ರಮಾಂಗಲ್ಯ, ಪುಸ್ತಕ ಬಿಡುಗಡೆಗೆ ಜತೆಯಾಗಿದ್ದೆ. ಬೆಂಗಳೂರಿಗೆ ಹೋದರೆ ಅವರ ಮನೆಯಲ್ಲೇ ಉಳಿಯುತ್ತಿದ್ದೆವು. ಪತ್ನಿ ಹೋದ ಬಳಿಕ ಮಾನಸಿಕವಾಗಿ ಕುಗ್ಗಿದ್ದರು. ಅವರಿಲ್ಲದ ನಮ್ಮ ಹೋರಾಟ ಕಲ್ಪಿಸಿಕೊಳ್ಳಲೂ ಆಗದು. ಅಂಥವರು ಇಂದಿನ ಕಾಲಘಟ್ಟದಲ್ಲಿ ಅಪರೂಪ. ಭದ್ರಾವತಿ ತಾಲ್ಲೂಕಿನ ಭಗವತಿ ಕೆರೆಯ ನಮ್ಮ ಮನೆಗೆ ಪ್ರತಿಸಾರಿ ಕರೆದಾಗಲೂ ಮತ್ತೊಮ್ಮೆ ಬರುವೆ ಎನ್ನುತ್ತಿದ್ದರು. ಕೊನೆಗೂ 'ದೊರೆ' ಬರಲಿಲ್ಲ. ಆ ಕೊರಗು ಕೊನೆಯವರೆಗೂ ಉಳಿಯಲಿದೆ.

ಕಡಿದಾಳು ಶಾಮಣ್ಣ, ರೈತ

ಯಾರನ್ನೂ ಮೆಚ್ಚಿಸುವ ಕೆಲಸ ಮಾಡುತ್ತಿರಲಿಲ್ಲ

ಐದು ದಿನಗಳ ಹಿಂದೆ, ಆಸ್ಪತ್ರೆಯಲ್ಲಿದ್ದ ಎಚ್.ಎಸ್.ದೊರೆಸ್ವಾಮಿ ಅವರನ್ನು ಭೇಟಿಯಾಗಲು ಹೋಗಿದ್ದ ರವಿಕೃಷ್ಣಾ ರೆಡ್ಡಿ ಅವರ ಮೊಬೈಲ್‌ನಿಂದ ಕರೆ ಮಾಡಿ ನನ್ನ ಜತೆ ಮಾತನಾಡಿದ್ದರು. 'ಆನಂದದಿಂದ ಹೋಗುತ್ತಿದ್ದೇನೆ ರಾಮಸ್ವಾಮಿಯವರೇ. ಅಲ್ಲೂ ನಿಮ್ಮ ಸ್ಮರಣೆ ಮಾಡುತ್ತೇನೆ' ಅಂದ್ರು. ಆ ಮಾತು ಮನಸ್ಸಿಗೆ ತುಂಬಾ ನೋವು ಉಂಟು ಮಾಡಿತು. ಪುರಭವನದ ಮುಂದೆ ಭೂ ಕಬಳಿಕೆ ವಿರುದ್ಧ ನಡೆದ ಹೋರಾಟದಲ್ಲಿ 39 ದಿನವೂ ಪಾಲ್ಗೊಂಡಿದ್ದರು. 'ಇಳಿ ವಯಸ್ಸಿನಲ್ಲೂ ಆರೋಗ್ಯದಿಂದ ಇರುವುದರ ಗುಟ್ಟೇನು?' ಅಂತ ಕೇಳಿದಾಗ, ನಕ್ಕು ಸುಮ್ಮನಾಗಿದ್ದರು. ಮತ್ತೆ ಕೇಳಿದಾಗ, 'ಬಡತನ' ಎಂದಿದ್ದರು.

ನೇರ–ನಿಷ್ಠುರವಾದಿಯಾಗಿದ್ದ ಅವರು ಯಾರನ್ನೂ ಮೆಚ್ಚಿಸುವ ಕೆಲಸ ಮಾಡುತ್ತಿರಲಿಲ್ಲ. ಯಾವಾಗಲೂ ಸಮಾಜಮುಖಿ ಕೆಲಸ. ಇಂದು ಗಾಂಧಿವಾದ, ಅಹಿಂಸಾವಾದ ಕೆಲಸ ಮಾಡುವುದಿಲ್ಲ ಎಂಬ ಭಾವನೆ ಹಲವರಲ್ಲಿದೆ. ಆದರೆ. ಈ ಎರಡಕ್ಕೂ ಜಯವಿದೆ ಎಂಬುದನ್ನು ತೋರಿಸಿಕೊಟ್ಟರು. ನೊಂದವರು, ಅಸಹಾಯಕರಿಗೆ ಯಾವಾಗಲೂ ಸ್ಪಂದಿಸುತ್ತಿದ್ದರು. ಸುಖ ಜೀವನಕ್ಕೆ ಎಂದೂ ಮಾರು ಹೋದವರಲ್ಲ. ತ್ಯಾಗ ಜೀವನವೇ ಶ್ರೇಷ್ಠ ಎಂಬ ಅಚಲ ನಂಬಿಕೆ ಇತ್ತು. ಸತ್ಯ, ಅಹಿಂಸೆ ಅವರ ಜೀವನದ ಸತ್ವಗಳಾಗಿದ್ದವು.

ಬೆಂಗಳೂರಿನಲ್ಲಿ ಕಸದ ವಿಲೇವಾರಿ ಸಮಸ್ಯೆ ಕುರಿತು ಅವರೊಂದಿಗೆ ಚರ್ಚಿಸುವಾಗ, 'ಕಸ ಒಂದು ಸಮಸ್ಯೆಯಲ್ಲ. ಕಸ ತಿನ್ನುವವರಿಂದ ಕಸದ ಸಮಸ್ಯೆ ಸೃಷ್ಟಿಯಾಗಿದೆ' ಎಂದು ಅವರು ಹೇಳಿದ ಮಾತು ಈಗಲೂ ನೆನಪಿದೆ. ಅವರು ಸ್ವಾತಂತ್ರ್ಯ ಹೋರಾಟಗಾರ ಮಾತ್ರವಲ್ಲ, ಸಾಮಾಜಿಕ ಸ್ವಾಸ್ಥ್ಯದ ಬಗ್ಗೆಯೂ ಕಾಳಜಿ ಇತ್ತು.

ಎ.ಟಿ.ರಾಮಸ್ವಾಮಿ, ಅರಕಲಗೂಡು ಕ್ಷೇತ್ರದ ಶಾಸಕ

ಧರೆಯ ಮಡಿಲಿಗೆ ಹೋರಾಟದ ದೊರೆ

ಒಂದನೇ ಪುಟದಿಂದ...

ಹೃದಯ ಸಮಸ್ಯೆ ಎದುರಿಸುತ್ತಿದ್ದ ಅವರು, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಅವರಿಗೆ ಹೃದಯ ಕಾಯಿಲೆ, ಅಧಿಕ ರಕ್ತದೊತ್ತಡ, ಬ್ರಾಂಕೈಟಿಸ್ (ಶ್ವಾಸನಾಳಗಳ ಒಳಪೊರೆಯ ಉರಿಯೂತ) ಸೇರಿದಂತೆ ವಿವಿಧ ವಯೋಸಹಜ ಅನಾರೋಗ್ಯ ಸಮಸ್ಯೆಗಳು ಇದ್ದವು. ಕೊರೊನಾ ಸೋಂಕು ಕೂಡ ತಗುಲಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಬುಧವಾರ ಮಧ್ಯಾಹ್ನ 1.30ಕ್ಕೆ ಮೃತಪಟ್ಟರು. ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. 2019ರಲ್ಲಿ ಅವರ ಪತ್ನಿ ಲಲಿತಮ್ಮ ನಿಧನರಾಗಿದ್ದರು.

ಚಾಮರಾಜಪೇಟೆಯಲ್ಲಿರುವ ಟಿ.ಆರ್. ಮಿಲ್ ಚಿತಾಗಾರದಲ್ಲಿ ಸಂಜೆ 6.30ಕ್ಕೆ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಅವರು ತಮ್ಮ ದೇಹವನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾನ ಮಾಡಿದ್ದರು. ಆದರೆ, ಕೋವಿಡ್ ಕಾರಣದಿಂದ ಅದು ಸಾಕಾರವಾಗಲಿಲ್ಲ.

ಮೇ 6ರಂದು ಜಯದೇವ ಹೃದ್ರೋಗ ಆಸ್ಪತ್ರೆಗೆ ದಾಖಲಾಗಿದ್ದರು. ಜ್ವರ, ನೆಗಡಿ ಹಾಗೂ ಕೆಮ್ಮಿನ ಲಕ್ಷಣಗಳು ಇದ್ದ ಕಾರಣ ಕೋವಿಡ್ ಪರೀಕ್ಷೆ ನಡೆಸಲಾಗಿತ್ತು. ಆಗ ಕೊರೋನಾ ಸೋಂಕು ಖಚಿತಪಟ್ಟಿತ್ತು. 12ರಂದು ಚೇತರಿಸಿಕೊಂಡು ನಿವಾಸಕ್ಕೆ ತೆರಳಿದ್ದರು.

'103 ವರ್ಷದ ನನಗೇಕೆ ಚಿಕಿತ್ಸೆ'


'ನನಗೆ 103 ವರ್ಷ. ಈ ಇಳಿವಯಸ್ಸಿನಲ್ಲಿ ನನಗೇಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತೀರಿ. ಇದೇ ಹಾಸಿಗೆಯನ್ನು ಅಗತ್ಯ ಇರುವ ಯುವ ರೋಗಿಗೆ ಬಳಸಿಕೊಳ್ಳಬಹುದು. ಅವರು ದೇಶದ ಆಸ್ತಿ'– ದೊರೆಸ್ವಾಮಿ ಅವರು ಕಡೆಯ ಬಾರಿ ಜಯದೇವ ಹೃದ್ರೋಗ ಸಂಸ್ಥೆಗೆ ದಾಖಲಾದಾಗ ವೈದ್ಯರ ಜತೆಗೆ ಹಂಚಿಕೊಂಡ ಮಾತುಗಳಿವು ಎಂದು ಡಾ.ಸಿ.ಎನ್. ಮಂಜುನಾಥ್ ನೆನಪಿಸಿಕೊಂಡರು.

ಎಚ್.ಎಸ್. ದೊರೆಸ್ವಾಮಿ

ಶ್ರೀನಿವಾಸ್ ಅಯ್ಯರ್ ಮತ್ತು ಲಕ್ಷ್ಮಮ್ಮ ದಂಪತಿಗೆ ನಾಲ್ಕನೇ ಮಗನಾಗಿ 1918ರ ಏ.10ರಂದು ದೊರೆಸ್ವಾಮಿ ಜನಿಸಿದರು. ಹಾರೋಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಬಳಿಕ ಬೆಂಗಳೂರಿಗೆ ಬಂದರು. 5ನೇ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡರು. ಕೋಟೆ ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ 'ಕಿರಿಯ ತರುಣರ ಸಂಘ' ಸ್ಥಾಪಿಸಿದ್ದರು.

ಗಾಂಧೀಜಿ ಅವರ 'ಮೈ ಅರ್ಲಿ ಲೈಫ್' ಪುಸ್ತಕದಿಂದ ಅವರು ಪ್ರಭಾವಿತರಾಗಿದ್ದರು. ಕಾಲೇಜು ಶಿಕ್ಷಣದ ಅವಧಿಯಲ್ಲಿ ಬೆಂಗಳೂರಿನ ಕಬ್ಬನ್ ಪೇಟೆ ಬಳಿಯ ಬನಪ್ಪ ಉದ್ಯಾನದಲ್ಲಿ ನಡೆದ ಸ್ವಾತಂತ್ರ್ಯ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 1942ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಪೂರ್ಣಗೊಳಿಸಿದರು. 1942ರ ಆಗಸ್ಟ್‌ನಲ್ಲಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದರು. ಬಾಂಬ್ ಎಸೆತ ಪ್ರಕರಣವೊಂದರ ಆರೋಪದ ಮೇಲೆ 14 ತಿಂಗಳು ಸೆಂಟ್ರಲ್ ಜೈಲಿನಲ್ಲಿ ಇರಿಸಲಾಗಿತ್ತು.

ಗಾಂಧಿ ಸೇವಾ ಪುರಸ್ಕಾರ, ಬಸವ ಪುರಸ್ಕಾರ, ರಾಮನಾಥ ಗೋಯೆಂಕಾ ಪತ್ರಿಕೋದ್ಯಮ ಪುರಸ್ಕಾರ ಸೇರಿ ವಿವಿಧ ಪ್ರಶಸ್ತಿಗಳು ಸಂದಿವೆ.


ಸ್ವಾತಂತ್ರ್ಯ ಹೋರಾಟಗಾರ ಎಚ್‌.ಎಸ್‌.ದೊರೆಸ್ವಾಮಿ ಹಾಗೂ ಅವರ ಪತ್ನಿ ಲಲಿತಮ್ಮ

'ತಾತನ ಸರಳತೆಯೇ ನಮಗೆ ಶಿಕ್ಷಣ'

ತಾತನ ಸರಳತೆಯೇ ನಮ್ಮ ಕುಟುಂಬಕ್ಕೆ ದೊರೆತ ದೊಡ್ಡ ಶಿಕ್ಷಣ. ಸರಳ ಜೀವನಶೈಲಿ ಇರಬೇಕು ಎಂದು ಹೇಳುತ್ತಿದ್ದ ಅವರು ಅದೇ ರೀತಿ ಬದುಕಿ ತೋರಿಸಿದರು.

ಯಾರಿಗೇ ಅನ್ಯಾಯವಾದರೂ ಅದನ್ನು ಪ್ರಶ್ನಿಸಬೇಕು, ಪ್ರತಿಭಟಿಸಬೇಕು ಎಂದು ಯಾವಾಗಲೂ ಹೇಳುತ್ತಿದ್ದರು. ಸಿಂಪಲ್ ಲಿವಿಂಗ್, ಹೈ ಥಿಂಕಿಂಗ್ ಎಂಬ ಮಾತು ಅವರನ್ನು ನೋಡಿಯೇ ಮಾಡಿದ್ದಾರೇನೋ ಎನಿಸುತ್ತಿತ್ತು. ಅವರು ಎಷ್ಟು ಸರಳವಾಗಿರುತ್ತಿದ್ದರೋ, ದೇಶ ಮತ್ತು ನಾಡಿನ ಆಗು–ಹೋಗುಗಳ ಬಗ್ಗೆ ಅವರಿಗೆ ಅಷ್ಟೇ ಜ್ಞಾನ ಇರುತ್ತಿತ್ತು.


ಜನಪರವಾದ ಯಾವುದೇ ಹೋರಾಟ ಇದ್ದಾಗ ಯಾರೇ ಕರೆದರೂ ಅವರು ಆ ಹೋರಾಟಕ್ಕೆ ಧುಮುಕುತ್ತಿದ್ದರು. ಈ ರೀತಿಯ ಹೋರಾಟದ ಹಾದಿಯಲ್ಲಿಯೇ ನೀವೂ ನಡೆಯಬೇಕು ಎಂದು ಕಿವಿಮಾತು ಹೇಳುತ್ತಿದ್ದರು.

ಇತ್ತೀಚೆಗೆ ಅವರ ಬಗ್ಗೆ ಕೆಲವರು ಟೀಕೆ ಮಾಡಿದಾಗಲೂ ಅವರು ತಲೆ ಕೆಡಿಸಿಕೊಳ್ಳಲಿಲ್ಲ. ಅವೆಲ್ಲ ತಲೆ–ಕಾಲಿಲ್ಲದ ಹೇಳಿಕೆಗಳು ಎನ್ನುತ್ತಿದ್ದ ಅವರು ತಮ್ಮ ಹೋರಾಟದ ಹಾದಿ ಮುಂದುವರಿಸಿದ್ದರು.

ಲಾಕ್‌ಡೌನ್‌ನಿಂದ ಜನರು ಎದುರಿಸುತ್ತಿದ್ದ ಕಷ್ಟಗಳನ್ನು ಕಂಡು ಮರುಕ ಪಡುತ್ತಿದ್ದರು. ಈ ಸಂದರ್ಭದಲ್ಲಿ ಹೋರಾಟ ನಡೆಸಲು, ಪ್ರಶ್ನಿಸಲು ಆಗುತ್ತಿಲ್ಲವಲ್ಲ ಎಂದು ಆ ಇಳಿವಯಸ್ಸಿನಲ್ಲಿಯೂ ಅವರು ಪರಿತಪಿಸಿದ್ದನ್ನು ನೋಡಿದ್ದೇನೆ. ಅವರ ಕೆಲಸ ಮತ್ತು ಜೀವನವೇ ನಮಗೆಲ್ಲ ಮಾರ್ಗದರ್ಶನವಾಗಿದೆ.

ಮೀನಾಕ್ಷಿ ಶೇಷಾದ್ರಿ, ದೊರೆಸ್ವಾಮಿ ಮೊಮ್ಮಗಳು

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಹಸ್ತಮುದ್ರೆಯಲ್ಲಿ ಸಂವಾದ

ಮರುದಿನ ರಾಜ ಆ ಐದು ಸ್ತ್ರೀಯರನ್ನು ಕರೆದು ಕೇಳಿದ, 'ನೀವು ಮಹೋಷಧಕುಮಾರ ಮತ್ತು ಪರಿವ್ರಾಜಿಕೆ ಮಾತನಾಡುವುದನ್ನು ಕೇಳಿದೆವು ಎಂದಿರಿ. ನೀವು ಕೇಳಿದ್ದು ಏನು?'. ಅವರು ಹೇಳಿದರು, 'ಮಹಾರಾಜಾ, ಅವರಿಬ್ಬರೂ ಬಾಯಿಬಿಟ್ಟು ಮಾತನಾಡಲಿಲ್ಲ. ಕೇವಲ ಸಂಜ್ಞೆ ಮಾಡುತ್ತಿದ್ದರು'. 'ಆಯ್ತು, ಆ ಸಂಜ್ಞೆಗಳೇನು? ಅವುಗಳಿಗೆ ಅರ್ಥವೇನು?' ಕೇಳಿದ ರಾಜ. ಒಬ್ಬ ಮಹಿಳೆ ಹೇಳಿದಳು, 'ಪ್ರಭೂ, ಕುಮಾರನನ್ನು ಪಡಸಾಲೆಯಲ್ಲಿ ಕಾಣುತ್ತಲೇ ತನ್ನ ಕೈಗಳನ್ನು ಚಾಚಿ ಈ ರಾಜನನ್ನು ಕೈಗೊಂಬೆಯಂತೆ ಹಿಡಿದುಕೊಂಡು ಕಟ್ಟಿ ಹಾಕಿ, ರಾಜ್ಯವನ್ನು ನಿನ್ನ ಕೈಗೆ ತೆಗೆದುಕೊಳ್ಳುವುದು ಕಷ್ಟವೇ? ಎಂದು ಕೇಳಿದಳು. ಆಗ ಬೋಧಿಸತ್ವ ಕುಮಾರ, ತನ್ನ ಬಿಗಿಮುಷ್ಠಿಯನ್ನು ತೋರಿಸಿ - ಇರು, ಸ್ವಲ್ಪ ದಿನಗಳಲ್ಲೇ ಅವನನ್ನು ಬಿಗಿ ಹಿಡಿದು ರಾಜ್ಯವನ್ನು ಕೈಗೆ ತೆಗೆದುಕೊಳ್ಳುತ್ತೇನೆ ಎಂದ. ಆಗ ಆ ಮಾಯಗಾತಿ ಪರಿವ್ರಾಜಿಕೆ ತನ್ನ ಕೈಗಳನ್ನು ತಲೆಯ ಮೇಲಿಟ್ಟುಕೊಂಡು - ಬಿಡಬೇಡ, ಅವನ ತಲೆಯನ್ನೇ ಕತ್ತರಿಸಿ ಬಿಡು – ಎಂಬಂತೆ ಸೂಚನೆ ಕೊಟ್ಟಳು. ಆಗ ಆತ ತನ್ನ ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡು – ಚಿಂತಿಸಬೇಡ, ತಲೆಯೊಂದಿಗೆ ಅವನ ಮಧ್ಯಭಾಗವನ್ನು ಕತ್ತರಿಸುತ್ತೇನೆ – ಎನ್ನುವಂತೆ ಸಂಜ್ಞೆ ಮಾಡಿದ. ಆದ್ದರಿಂದ ಮಹಾರಾಜಾ, ನೀನು ತುಂಬ ಎಚ್ಚರದಿಂದ ಇರಬೇಕು. ಈ ಮಹೋಷಧಕುಮಾರನನ್ನು ಬೇಗನೆ ಕೊಲ್ಲಿಸಿಬಿಡು'. ಆಕೆಯ ಮಾತಿಗೆ ಉಳಿದ ಸ್ತ್ರೀಯರೂ ತಲೆ ಅಲ್ಲಾಡಿಸಿದರು.

ರಾಜ ಈ ಮಾತುಗಳನ್ನು ಚಿಂತಿಸಿದ. ಮಹೋಷಧಕುಮಾರನ ನಿಷ್ಠೆ ನನಗೆ ಗೊತ್ತು, ಆತ ಮೋಸ ಮಾಡಲಾರ. ಈಕೆ ಹೇಗಿದ್ದರೂ ಪರಿವ್ರಾಜಿಕೆ. ಆಕೆಯನ್ನೇ ಕೇಳಿ ನೋಡುತ್ತೇನೆ ಎಂದುಕೊಂಡು ಮರುದಿನ ಪರಿವ್ರಾಜಿಕೆ ಊಟ ಮಾಡುವಾಗ ಅವಳ ಬಳಿಗೆ ಬಂದು ಕೇಳಿದ, 'ಆರ್ಯೆ, ನಿನ್ನೆ ನೀನು ಮಹೋಷಧಕುಮಾರನನ್ನು ಕಂಡಿದ್ದೇಯಾ?' ಆಕೆ, 'ಹೌದು, ನಿನ್ನೆ ಊಟ ಮಾಡಿ ಹೋಗುವಾಗ ಮೊಗಸಾಲೆಯಲ್ಲಿ ಅವನನ್ನು ಕಂಡಿದ್ದೆ' ಎಂದಳು. 'ಅವನ ಜೊತೆಗೆ ಹಸ್ತಮುದ್ರೆಯಲ್ಲಿ ಮಾತನಾಡಿದೆಯಂತಲ್ಲ? ಏನು ಮಾತದು?' ಎಂದು ರಾಜ ಕುತೂಹಲದಿಂದ ಕೇಳಿದ. ಆಕೆ ನಿರಾಳವಾಗಿ ಹೇಳಿದಳು. 'ಆತ ಪಂಡಿತ, ಬುದ್ಧಿವಂತನೆಂದು ಎಲ್ಲರೂ ಹೇಳಿದ್ದರಿಂದ, ಅವನನ್ನು ಪರೀಕ್ಷಿಸಲು ಮುದ್ರಾಶಾಸ್ತ್ರದಲ್ಲಿ ಸಂವಾದ ಮಾಡಿದೆ. ಮೊದಲು ನನ್ನ ಕೈ ಚಾಚಿದೆ. ಅದರರ್ಥ, ನಿನ್ನನ್ನು ಕರೆದುಕೊಂಡು ಬಂದ ರಾಜ, ನಿನ್ನ ವಿಷಯದಲ್ಲಿ ಮುಕ್ತನಾಗಿದ್ದಾನೋ ಅಥವಾ ನಿನಗೆ ಸ್ವಾತಂತ್ರ್ಯವನ್ನು ಕೊಟ್ಟಿಲ್ಲವೇ? ಅದಕ್ಕೆ ಆತ ಪ್ರತಿಯಾಗಿ ತನ್ನ ಮುಷ್ಠಿ ಬಿಗಿ ಹಿಡಿದು ತೋರಿಸಿದ. ಅದರ ಅರ್ಥ. ರಾಜ ನನಗೆ ಮಾತು ಕೊಟ್ಟು, ಕರೆಸಿಕೊಂಡು, ಈಗ ಕೈ ತುಂಬ ಬಿಗಿ ಮಾಡಿದ್ದಾನೆ, ಅಧಿಕಾರ, ಹಣ ಯಾವುದನ್ನೂ ಕೊಡುತ್ತಿಲ್ಲ. ಆಗ ನಾನು ನಿನಗೆ ತುಂಬ ಕಷ್ಟವಾಗುತ್ತಿದ್ದರೆ, ನನ್ನ ಹಾಗೆ ಪ್ರವ್ರಜಿತನಾಗು ಎಂದು ಹೇಳುವಂತೆ, ನನ್ನ ಕೈಗಳನ್ನು ತಲೆಯ ಮೇಲೆ ಇಟ್ಟುಕೊಂಡೆ. ಅದಕ್ಕೆ ಅವನು, ತನ್ನ ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡು - ನನ್ನ ಮೇಲೆ ಅನೇಕ ಜನರು ಅವಲಂಬಿತರಾಗಿದ್ದಾರೆ, ಅವರ ಜವಾಬ್ದಾರಿ ನನ್ನದು, ಆದ್ದರಿಂದ ಪ್ರವ್ರಜಿತನಾಗಲಾರೆ – ಎಂದು ಸಂಜ್ಞೆ ಮಾಡಿದ....' ಎಂದು ವಿವರಿಸಿದಳು. ರಾಜ ಮಹೋಷಧಕುಮಾರನನ್ನು ಅದೇ ರೀತಿ ಪ್ರಶ್ನೆ ಮಾಡಿದಾಗ ಆತನೂ ಪರಿವ್ರಾಜಿಕೆ ನೀಡಿದ ಉತ್ತರವನ್ನೇ ನೀಡಿದ. ರಾಜನಿಗೆ ಅಂತಃಪುರದ ಸ್ತ್ರೀಯರಿಗೆ ಈ ಸಂಜ್ಞೆಗಳು ಅರ್ಥವಾಗಿಲ್ಲವೆಂಬುದು ಸ್ಪಷ್ಟವಾಗಿ, ಕುಮಾರನಿಗೆ ಸೇನಾಪತಿ ಹುದ್ದೆಯನ್ನು ನೀಡಿ, ಅಪಾರ ಹಣವನ್ನು ಕೊಟ್ಟ.

ದಿನ ಭವಿಷ್ಯ

ಗುರುವಾರ ಮೇ 27, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೋಹಿಣಿ ಪ್ರತಿಪದೆ ಗಂ. 21-51 (ಹ. 2-44) ಗುರುವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 47-16 (ರಾ. 12-54) ಸಿದ್ಧ ನಾಮ ಯೋಗ ಗಂ 37-52 ಕೌಲವ ಕರಣ ಗಂ. 21-51 ವಿಷ ಗಂ. 4-19 ಅಮೃತ ಗಂ. 26-47: ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 5-56 ಸೂರ್ಯಾಸ್ತ: 6-37 ಅದೃಷ್ಟ ಸಂಖ್ಯೆ 2, 9

ಮೇಷ: ಕಲಾವಿದರಿಗೆ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಅವಕಾಶಗಳು ದೊರೆತು ಪ್ರತಿಭಾ ಪ್ರದರ್ಶನಕ್ಕೆ ಅವಕಾಶ. ಉನ್ನತ ವ್ಯಾಸಂಗಾಕಾಂಕ್ಷಿಗಳಿಗೆ ತಾಂತ್ರಿಕ ವಿದ್ಯೆಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸಫಲತೆ.

ವೃಷಭ: ಸ್ನೇಹಿತರು, ಬಂಧು ಬಾಂಧವರ ಸಹಕಾರದೊಂದಿಗೆ ಕೈಗೊಂಡ ಕಾರ್ಯದಲ್ಲಿ ಯಶಸ್ಸು. ಹಿರಿಯರೊಂದಿಗೆ ಚರ್ಚಿಸಿ ಮನೆ ಕಟ್ಟಿಸುವ ಯೋಜನೆಯನ್ನು ಕೈಗೆತ್ತಿ ಕೊಳ್ಳುವಿರಿ. ಹಣಕಾಸಿನ ಅನುಕೂಲತೆ.

ಮಿಥುನ: ಕುಟುಂಬದವರೊಂದಿಗೆ ಸ್ನೇಹ, ಸಹನೆಯಿಂದಾಗಿ ಎದುರಾದ ಬಿಕ್ಕಟ್ಟುಗಳು ಸಹಜವಾಗಿ ತೇಲಿ ಹೋಗುವವು. ದೂರದ ಸಂಬಂಧಿಗಳು ನಿಮ್ಮ ಸಹಾಯ ಬಯಸಿ ಬರುವ ಸಾಧ್ಯತೆ. ದೇವತಾ ದರ್ಶನಕ್ಕಾಗಿ ಪ್ರವಾಸ ಸಾಧ್ಯತೆ.

ಕರ್ಕಾಟಕ: ನಿಮ್ಮನ್ನು ಅರ್ಥಮಾಡಿಕೊಳ್ಳಲು ಆಗದವರಿಂದ ಮುಜುಗರ. ಯೋಗ್ಯರಿಗೆ ಮಾತ್ರ ಸಲಹೆ ಸೂಚನೆಗಳನ್ನು ಕೊಡುವುದು ಉತ್ತಮ. ವಾಹನ ಖರೀದಿ ಮತ್ತು ಪ್ರಯಾಣ ಮಾಡುವವರಿಗೆ ಉತ್ತಮ ದಿನವಾಗುವುದು.

ಸಿಂಹ: ಸಮಾಜದ ಒಳಿತಿಗಾಗಿ ತೊಡಗಿಕೊಂಡ ಕೆಲಸವನ್ನು ಶತಾಯ ಗತಾಯ ಮಾಡಿ ಪೂರೈಸುವಿರಿ. ಸಮಾಜ ಬಾಂಧವರ ಸಹಾಯ ಸಹಕಾರಗಳೂ ಉತ್ತಮವಾಗಿಯೇ ದೊರಕಲಿದೆ. ಗೌರವಾದರ ಸಿಗಲಿದೆ.

ಕನ್ಯಾ: ಸಮಾಜದಲ್ಲಿ ಉನ್ನತ ಸ್ಥಾನಮಾನ, ಕೀರ್ತಿ ಇತ್ಯಾದಿಗಳು ಲಭಿಸುವ ಸಾಧ್ಯತೆ. ಅಪಾಯವೊಂದು ಬಂದೆರಗಿದರೂ ಕಾಣದ ಕೈಗಳಿಂದ ರಕ್ಷಣೆಯನ್ನು ಹೊಂದುವಿರಿ. ದೇವತಾರಾಧನೆಯಿಂದ ಯಶಸ್ಸು ನಿಮ್ಮದಾಗಲಿದೆ.

ತುಲಾ: ಆದಾಯವನ್ನು ಅನುಸರಿಸಿ ವೆಚ್ಚವನ್ನು ಸರಿದೂಗಿಸಿಕೊಳ್ಳುವುದರಿಂದ ತೊಂದರೆಗಳಿಂದ ದೂರವಾಗುವಿರಿ. ಹಿರಿಯರ ಪ್ರಶಂಸೆಗೆ ಪಾತ್ರರಾಗುವುದರ ಜೊತೆಗೆ ಸಂಗಾತಿಯಿಂದಲೂ ಉತ್ತಮ ಸಹಕಾರ ಪಡೆದು ಸಂತಸಗೊಳ್ಳುವಿರಿ.

ವೃಶ್ಚಿಕ: ವಾಸ್ತು ವಿನ್ಯಾಸ ಮುಂತಾದ ಉದ್ಯೋಗಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ದಿನವಾಗಿದ್ದು ವಿಪುಲವಾದ ಅವಕಾಶಗಳು ದೊರಕುವವು. ಸಂಗಾತಿಯೊಂದಿಗೆ ತಾಳ್ಮೆ ವಿಶ್ವಾಸದಿಂದ ವ್ಯವಹರಿಸಿ.

ಧನು: ಅನೇಕ ಯೋಜನೆಗಳನ್ನು ಒಂದೇ ಬಾರಿಗೆ ಕೈಗೆತ್ತಿಕೊಳ್ಳುವುದರಿಂದ ಅನಾವಶ್ಯಕ ತೊಂದರೆ ಅನುಭವಿಸುವ ಸಾಧ್ಯತೆ. ಕೋರ್ಟು, ನ್ಯಾಯ ಇತ್ಯಾದಿಗಳಿಗೆ ಸಂಬಂಧಿಸಿದ ವಿಚಾರಗಳು ಮುಂದೂಡಲ್ಪಡುವವು.

ಮಕರ: ಬೇರೆಯವರನ್ನು ಅವಹೇಳನ ಮಾಡುವ ಭರದಲ್ಲಿ ನಿಮ್ಮ ಘನತೆ–ವ್ಯಕ್ತಿತ್ವಕ್ಕೆ ಚ್ಯುತಿಯನ್ನುಂಟು ಮಾಡಿಕೊಳ್ಳುವ ಸಾಧ್ಯತೆ. ಗೆಳೆತನ ಮಾಡುವಾಗ ಮತ್ತೊಮ್ಮೆ ಯೋಚಿಸುವುದು ಉತ್ತಮ.

ಕುಂಭ: ಯೋಚಿಸಿ ಕಾರ್ಯಪ್ರವೃತ್ತರಾಗುವುದು ಒಳಿತು. ದುಡುಕಿನಿಂದಾಗಿ ಅಪಾರ ದಂಡ ತೆರಬೇಕಾದೀತು. ವಿದ್ಯಾರ್ಥಿವೃಂದಕ್ಕೆ ಶುಭ ಸಮಾಚಾರವೊಂದು ಲಭಿಸಲಿದೆ. ದ್ರವ ಪದಾರ್ಥಗಳ ವ್ಯಾಪಾ ಲಾಭ.

ಮೀನ: ಆತ್ಮಗೌರವಕ್ಕೆ ಚ್ಯುತಿ ಬಾರದಂತಿರಲು ಅಳೆದು ತೂಗಿ ಸಹವಾಸ ಮಾಡುವುದು ಒಳಿತು. ಹಣಕಾಸಿನ ವಿಚಾರದಲ್ಲಿ ಅತ್ಯಂತ ಜಾಗರೂಕರಾಗಿರುವುದು ಉತ್ತಮ. ಆರೋಗ್ಯದ ವಿಚಾರದಲ್ಲಿ ಎಚ್ಚರಿಕೆ ವಹಿಸುವುದು.

ನಿಮ್ಮ ಜನ್ಮದಿನ 27-ಮೇ ಈ ದಿನ ಅತ್ಯಂತ ಶುಭಕರ. ಆರೋಗ್ಯಕರ ಶಾರೀರವನ್ನು ಹೊಂದಿದ್ದರೂ, ಮಾನಸಿಕವಾಗಿ ಅನೇಕ ಕಿರಿಕಿರಿಯನ್ನು ಅನುಭವಿಸುತ್ತೀರಿ. ಸಂಗಾತಿ ಮತ್ತು ಕುಟುಂಬದವರೊಂದಿಗೆ ಅನೇಕ ಘರ್ಷಣೆಗಳನ್ನು ಎದುರಿಸಬೇಕಾದೀತು. ಸಕಾಲದಲ್ಲಿ ಸಂಗಾತಿಯ ಕಡೆಯಿಂದ ಬರುವ ಸಲಹೆ, ಸಹಕಾರದಿಂದ ಪರಿಹಾರವನ್ನು ಕಂಡುಕೊಳ್ಳುವಿರಿ.

ಪದಬಂಧ 4609


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರವಾಸಿಗರ ಹತ್ತಿರವೇ ಕಾಣಿಸಿದ ನೆರೆ (3)
4.ರಾಜ್ಯವನ್ನು ಆಳುವ ವ್ಯವಸ್ಥೆ (4)
6.ಇಡೀ ಜಗತ್ತಿಗೆ ಸಂಬಂಧಿಸಿದ್ದು (4)
8.ಖನಿಯಲ್ಲಿ ಸಿಕ್ಕಿದುದು (3)
11.ಹೀಗೆ ಪರ್ಯಾಲೋಚಿಸು (3)
13.ಭೇದಿಯಾಗಲು ನೀಡುವ ಔಷಧ ದೀರ್ಘವಾಗಿಯಲ್ಲಾ? (4)
17.ಕಾಸು ನೀಡಿ ಖರೀದಿಸಿರುವ ತೋಟ (4)
18.ಮುಚ್ಚಿಡಬೇಕಾದ್ದು ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1.ಪ್ರಜ್ಞೆಯಲ್ಲೇ ಮಾಡಿದ ಶಪಥ (3)
2.ನಗುವಿನಿಂದ ಕೂಡಿದ ವದನ (4)
3.ಸಂಗಾತಿ ತಿಳಿಸಿರುವ ವಿಷಯ (3)
5.ಜಾಗರ ನೋಡಲು ದೊರೆತ ಸೂಟಿ (2)
7.ಮಾಡಬೇಕಾದ ಕೆಲಸ (3)
9.ಜನ್ಮವಿಲ್ಲಿ ವಿರಳವಾಗಿ ಬಂದಿದೆ (3)
10.ಶಿವನ ಬಳಿಯಿರಿಸಿದ ಮಣ್ಣಿನ ಬಾನಿ (3)
12.ದೇವತೆ ಹಾಗೂ ರಾಕ್ಷಸರು ಒಟ್ಟಿಗಿದ್ದಾರೆ (4)
14.ಗೋಳದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಎಳೆದಿರುವ ಗೆರೆ (3)
15.ಉತ್ತರದವರ ಚಿಕ್ಕಪ್ಪ (2)
16.ಮನೋಹರತೆಯಿಂದ ಕೂಡಿದುದು (3)



4608ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿಶ್ವವಿದ್ಯಾಲಯ 4.ತಿರಿಕುಳಿ 5.ಸನಾದಿ 7.ಪರಾಕು 9.ಯಥಾರ್ಥ 12.ಚುಕ್ಕಾಣಿ 13.ಮೃಗಜಲ 15.ಲೋಕವ್ಯವಹಾರ
ಮೇಲಿಂದ ಕೆಳಕ್ಕೆ: 1.ವಿಧ್ವಂಸಕ 2.ಯತಿ 3.ಹೋಳಿಗೆ 6.ದಿಗ್ವಿಜಯ 7.ಪದಾರ್ಥ 8.ಕುಡಿಮಿಂಚು 10.ಮಣಿಸರ 11.ಅಮೃತ 14.ಲಲೋ

ಸುಡೊಕು 4995

		7		8			2	
	3						7	8
6		5		9		4		
	2		6				3	
5		3	2		1	8		9
	1				9		4	2
	6			2				4
3		8	9				5	
	5				4			1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4994 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಆಡಳಿತಾಧಿಕಾರಿ ಪ್ರಫುಲ್ ಪಟೇಲ್ ನೀತಿಗಳಿಗೆ ವಿರೋಧ • ವಾಪಸ್ ಕರೆಸಿಕೊಳ್ಳಲು ಕಾಂಗ್ರೆಸ್, ಎಡಪಕ್ಷಗಳ ಒತ್ತಾಯ

ಲಕ್ಷದ್ವೀಪದಲ್ಲಿ ಭುಗಿಲೆದ್ದ ರಾಜಕೀಯ ಅಲೆ

ಕೊಚ್ಚಿ (ಪಿಟಿಐ): ಲಕ್ಷದ್ವೀಪದ ಆಡಳಿತಾಧಿಕಾರಿ ಪ್ರಫುಲ್ ಕೆ. ಪಟೇಲ್ ಅವರು ಈಚೆಗೆ ಜಾರಿ ಮಾಡಿರುವ ನೀತಿಗಳಿಗೆ ತೀವ್ರ ವಿರೋಧ ವ್ಯಕ್ತವಾಗಿದ್ದು, ಆಡಳಿತಾಧಿಕಾರಿಯನ್ನು ವಾಪಸ್ ಕರೆಯಿಸಿಕೊಳ್ಳಬೇಕು ಮತ್ತು ಹೊಸ ನೀತಿಗಳನ್ನು ರದ್ದುಪಡಿಸಬೇಕು ಎಂದು ಕಾಂಗ್ರೆಸ್, ಸಿಪಿಎಂ ಸೇರಿದಂತೆ ಎಲ್ಲಾ ವಿರೋಧಪಕ್ಷಗಳು ಒತ್ತಾಯಿಸಿವೆ.

‘ಲಕ್ಷದ್ವೀಪದ ಜನರ ಜೀವನ, ಸಂಸ್ಕೃತಿಯ ಮೇಲೆ ನಿರ್ಬಂಧಗಳನ್ನು ಹೇರುವುದನ್ನು ಒಪ್ಪಲಾಗದು. ಕೇರಳವು ಲಕ್ಷದ್ವೀಪದ ಜತೆಗೆ ಅವಿನಾ ಭಾವ ಸಂಬಂಧ ಹೊಂದಿದೆ. ಇದನ್ನು ಹಾಳು ಮಾಡುವ ಪ್ರಯತ್ನಗಳು ನಡೆಯುತ್ತಿದೆ. ಇದು ಖಂಡನೀಯ’ ಎಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟ್ವೀಟ್ ಮಾಡಿದ್ದಾರೆ.

‘ಪಟೇಲ್ ಅವರು ಜಾರಿಮಾಡಿರುವ ನೀತಿಗಳು ಜನವಿರೋಧಿ ಮತ್ತು ಸರ್ವಾಧಿಕಾರಿ ಮನೋಭಾವದವುಗಳು. ಕೇಂದ್ರ ಸರ್ಕಾರವು ತನ್ನ ಹಿಂದುತ್ವ ಕಾರ್ಯಸೂಚಿಯನ್ನು ಜಾರಿ ಮಾಡಲು ರಾಜ್ಯಪಾಲರೂ ಸೇರಿದಂತೆ ಸಾಂವಿಧಾನಿಕ ಹುದ್ದೆಗಳ ದುರುಪಯೋಗ ಮಾಡುತ್ತಿದೆ’ ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಆರೋಪಿಸಿದ್ದಾರೆ.

ಪಟೇಲ್ ಅವರ ನೀತಿಗಳನ್ನು ಕಾಂಗ್ರೆಸ್ ಪಕ್ಷವೂ ತೀವ್ರವಾಗಿ ವಿರೋಧಿಸಿದೆ. ‘ಆಡಳಿತಾಧಿಕಾರಿಯು ದ್ವೀಪದ ಶಾಂತಿ ಮತ್ತು ಸಂಸ್ಕೃತಿಯನ್ನು ನಾಶಪಡಿಸುತ್ತಿರುವುದು ಮಾತ್ರವಲ್ಲದೆ, ಏಕಪಕ್ಷೀಯ ನಿರ್ಬಂಧಗಳನ್ನು ವಿಧಿಸುವ ಮೂಲಕ ಜನರಿಗೆ ಕಿರುಕುಳ ನೀಡುತ್ತಿದ್ದಾರೆ’ ಎಂದು ಕಾಂಗ್ರೆಸ್‌ನ ಕಾರ್ಯದರ್ಶಿ ಹಾಗೂ ವಕ್ತಾರ ಅಜಯ್ ಮಾಕನ್ ಹೇಳಿದ್ದಾರೆ.

‘ದ್ವೀಪ ಸಮೂಹದಲ್ಲಿ ಆಡಳಿತದ ದುರುಪಯೋಗವನ್ನು ತಪ್ಪಿಸಬೇಕು, ಆಡಳಿತಾಧಿಕಾರಿ ಪಟೇಲ್ ಅವರನ್ನು ಹಿಂದಕ್ಕೆ ಕರೆಯಿಸಿಕೊಳ್ಳ ಬೇಕು’ ಎಂದು ಒತ್ತಾಯಿಸಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಸಿಪಿಐ ಪತ್ರ ಬರೆದಿದೆ. ಸಿಪಿಎಂ ಸಂಸದ ಎಳಮರಂ ಕರೀಮ್, ಕಾಂಗ್ರೆಸ್ ಮುಖಂಡರಾದ ರಮೇಶ್ ಚೆನ್ನಿತ್ತಲ, ಕೆ.ಸಿ. ವೇಣು ಗೋಪಾಲ್ ಮುಂತಾದವರೂ ರಾಷ್ಟ್ರಪತಿಗೆ ಪತ್ರ ಬರೆದಿದ್ದಾರೆ.

ಅಭಿಯಾನ ಆರಂಭ: ಪಟೇಲ್ ಅವರು ಹೊಸ ನೀತಿಗಳನ್ನು ಜಾರಿ ಮಾಡುತ್ತಿದ್ದಂತೆಯೇ ಸಾಮಾಜಿಕ ಜಾಲತಾಣಗಳಲ್ಲಿ ‘ಸೇವ್ ಲಕ್ಷದ್ವೀಪ್’ ಎಂಬ ಅಭಿಯಾನ ಆರಂಭವಾಗಿದೆ. ‘ಈಕೂಡಲೇ ಕಾರ್ಯಪ್ರವೃತ್ತರಾಗದಿದ್ದರೆ ಪರಿಸ್ಥಿತಿ ನಮ್ಮ ಕೈಮೀರುವುದು’ ಎಂದು ಅನೇಕರು ಆತಂಕ ವ್ಯಕ್ತಪಡಿಸಿದ್ದಾರೆ.

ಈನಡುವೆ, ನ್ಯಾಯಾಲಯಕ್ಕೆ ಹಾಜರಾಗುವ ಬದಲು, ವಿವಿಧ ಸರ್ಕಾರಿ ಕಚೇರಿಗಳಲ್ಲಿ ಬಾಕಿ ಉಳಿದಿರುವ ಕಾನೂನು ಕೆಲಸಗಳಿಗೆ ಆದ್ಯತೆ ನೀಡುವಂತೆ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಅವರಿಗೆ ಆಡಳಿತವು ನೀಡಿದ ಆದೇಶಕ್ಕೆ ಕೇರಳ ಹೈಕೋರ್ಟ್ ಮಂಗಳವಾರ ತಡೆಯಾಜ್ಞೆ ನೀಡಿದೆ. ಲಕ್ಷದ್ವೀಪದ ಮೊಹಮ್ಮದ್ ಸಲೀಮ್ ಎಂಬುವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ ಈ ಆದೇಶ ನೀಡಿದೆ.



ಲಕ್ಷದ್ವೀಪ ಆಡಳಿತಾಧಿಕಾರಿ ಪ್ರಫುಲ್ ಪಟೇಲ್ ಅವರ ಪ್ರತಿಕೃತಿ ದಹಿಸಿ ಕೇರಳದ ಕೋಯಿಕ್ಕೋಡ್‌ನಲ್ಲಿ ಎಲ್‌ಜೆಡಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ —ಪಿಟಿಐ ಚಿತ್ರ

ಸಮರ್ಥಿಸಿಕೊಂಡ ಬಿಜೆಪಿ

ಆಡಳಿತಾಧಿಕಾರಿ ಪಟೇಲ್ ಅವರ ಕ್ರಮವನ್ನು ಬಿಜೆಪಿಯ ಲಕ್ಷದ್ವೀಪ ಘಟಕವು ಸಮರ್ಥಿಸಿಕೊಂಡಿದೆ. ‘ಕೇಂದ್ರ ಸರ್ಕಾರವನ್ನು ವಿರೋಧಿಸುವ ನೀತಿಯ ಭಾಗವಾಗಿ ವಿರೋಧಪಕ್ಷಗಳು ಪಟೇಲ್ ವಿರುದ್ಧ ಸುಳ್ಳು ಪ್ರಚಾರಾಂದೋಲನ ನಡೆಸುತ್ತಿವೆ’ ಎಂದು ಘಟಕ ಹೇಳಿದೆ.

‘ಲಕ್ಷದ್ವೀಪದ ವಿಚಾರದಲ್ಲೂ ‘ಟೂಲ್‌ಕಿಟ್’ ಅಭಿಯಾನವನ್ನು ವಿರೋಧ ಪಕ್ಷಗಳು ಆರಂಭಿಸಿವೆ’ ಎಂದು ಬಿಜೆಪಿ ಕೇರಳ ಘಟಕದ ಅಧ್ಯಕ್ಷ ಸುರೇಂದ್ರನ್ ಆರೋಪಿಸಿದ್ದಾರೆ.

ಆದರೆ, ಪಕ್ಷದ ಕೆಲವು ಹಿರಿಯ ಮುಖಂಡರು ಪಟೇಲ್ ಅವರ ಕ್ರಮ ಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ದ್ದಾರೆ. ‘ಅಭಿವೃದ್ಧಿ ಯೋಜನೆಗಳನ್ನು ನಾವು ವಿರೋಧಿಸುವುದಿಲ್ಲ. ಆದರೆ ಜನರ ಮನಸ್ಸನ್ನು ಗೆದ್ದ ನಂತರವೇ ಅವುಗಳನ್ನು ಜಾರಿಮಾಡಬೇಕು ಎಂದು ಬಯಸುತ್ತೇವೆ’ ಎಂದು ಬಿಜೆಪಿ ಲಕ್ಷದ್ವೀಪ ಘಟಕದ ಮುಖ್ಯಸ್ಥ ಎಚ್.ಕೆ. ಮೊಹಮ್ಮದ್ ಕಾಸಿಂ ಹೇಳಿದ್ದಾರೆ.

ವಿವಾದ ಯಾಕೆ?

ಮುಸ್ಲಿಂ ಸಮುದಾಯವೇ ಹೆಚ್ಚಾಗಿರುವ ಈ ದ್ವೀಪ ಸಮೂಹದಲ್ಲಿ ಪಟೇಲ್ ಅವರು ಕೆಲವು ಹೊಸ ನೀತಿಗಳನ್ನು ಜಾರಿ ಮಾಡಿದರು. ಅವುಗಳಲ್ಲಿ ಭಾರಿ ವಿವಾದಕ್ಕೆ ಕಾರಣವಾದವುಗಳೆಂದರೆ...

- ಅಭಿವೃದ್ಧಿ ಯೋಜನೆಗಳಿಗಾಗಿ ಖಾಸಗಿಯವರಿಂದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ನಿಯಮ
- ಸಮಾಜವಿರೋಧಿ ಚಟುವಟಿಕೆ ತಡೆ (ಪಿಎಸ್‌ಎ) ಕಾಯ್ದೆ ಜಾರಿಮಾಡಿದ್ದು
- ಲಕ್ಷದ್ವೀಪ ಅಭಿವೃದ್ಧಿ ನಿಯಂತ್ರಣ ಪ್ರಾಧಿಕಾರ –2021 ರಚನೆ
- ಲಕ್ಷದ್ವೀಪದಲ್ಲಿ ಮದ್ಯ ಮಾರಾಟಕ್ಕೆ ಇದ್ದ ನಿಷೇಧವನ್ನು ತೆರವುಗೊಳಿಸಿದ್ದು
- ಗೋಮಾಂಸದ ಉತ್ಪನ್ನಗಳ ಮೇಲೆ ನಿಷೇಧ
- ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದಲ್ಲಿ ಮಾಂಸಾಹಾರ ನಿಷೇಧ
- ಕರಾವಳಿಯಲ್ಲಿ ಮೀನುಗಾರರು ನಿರ್ಮಿಸಿದ್ದ ಶೆಡ್‌ಗಳ ತೆರವು
- ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವವರು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬಾರದು ಎಂಬ ನಿಯಮ

ರಾಜಕೀಯ ಹಿನ್ನೆಲೆ

ಲಕ್ಷದ್ವೀಪದ ಆಡಳಿತಾಧಿಕಾರಿ ಯಾಗಿದ್ದ ದಿನೇಶ್ವರ ಶರ್ಮಾ ಅವರ ನಿಧನಾನಂತರ, ಕಳೆದ ಡಿಸೆಂಬರ್‌ನಲ್ಲಿ ದಾದ್ರಾ ಮತ್ತು ನಗರ್‌ಹವೇಲಿ ಹಾಗೂ ದಿಯು–ದಾಮನ್‌ನ ಆಡಳಿತಾಧಿಕಾರಿಯಾಗಿದ್ದ ಪ್ರಫುಲ್ ಪಟೇಲ್ ಅವರಿಗೆ ಲಕ್ಷದ್ವೀಪದ ಹೊಣೆಗಾರಿಕೆಯನ್ನೂ ನೀಡಲಾಗಿತ್ತು.

ಗುಜರಾತ್ ಮೂಲದವರಾದ ಪಟೇಲ್, ಅಲ್ಲಿ ಹಿಂದೆ ಗೃಹಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ರಾಜಕೀಯ ಹಿನ್ನೆಲೆಯ ವ್ಯಕ್ತಿಯನ್ನು ಈ ಹುದ್ದೆಗೆ ನೇಮಿಸಿದ್ದೇ ವಿವಾದಕ್ಕೆ ಕಾರಣವಾಗಿದೆ.

‘ಸಾಮಾನ್ಯವಾಗಿ ಅಧಿಕಾರಿಗಳು ಅಥವಾ ನಿವೃತ್ತ ಅಧಿಕಾರಿಗಳನ್ನು ಲಕ್ಷದ್ವೀಪದ ಆಡಳಿತಾಧಿಕಾರಿಯಾಗಿ ನೇಮಕ ಮಾಡಲಾಗುತ್ತದೆ. ಆದರೆ, ಇದೇ ಮೊದಲಬಾರಿಗೆ ರಾಜಕಾರಣಿಯೊಬ್ಬರನ್ನು ಈ ಹುದ್ದೆಗೆ ನೇಮಕ ಮಾಡಲಾಗಿದೆ. ಗೃಹಸಚಿವ ಅಮಿತ್ ಶಾ ಅವರೇ ನೇರವಾಗಿ ಈ ನೇಮಕ ಮಾಡಿದ್ದಾರೆ’ ಎಂದು ಅಜಯ್ ಮಾಕನ್ ಆರೋಪಿಸಿದ್ದರೆ.

ಕೇಂದ್ರ ಸರ್ಕಾರದ ವಿರುದ್ಧ ವಾಟ್ಸ್‌ಆ್ಯಪ್ ದಾವೆ

ಒಂದನೇ ಪುಟದಿಂದ...

ನಿಯಮ ಜಾರಿ: ಹೊಸ ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮೀಡಿಯಾ ನೀತಿ ಸಂಹಿತೆ) ನಿಯಮಗಳು, 2021 ಅನ್ನು ಫೆಬ್ರುವರಿ 25ರಂದು ಸರ್ಕಾರ ಘೋಷಿಸಿತ್ತು. ಮೇ 25ರಿಂದ ಇದು ಕಾರ್ಯರೂಪಕ್ಕೆ ಬರಲಿದೆ ಎಂದು ತಿಳಿಸಿತ್ತು. ಕೇಂದ್ರ ಸರ್ಕಾರ ರೂಪಿಸಿರುವ ಡಿಜಿಟಲ್ ನಿಯಮಗಳು ಜಾರಿಗೆ ಬಂದ ತಕ್ಷಣವೇ ವಾಟ್ಸ್‌ಆ್ಯಪ್ ಕೋರ್ಟ್ ಮೊರೆ ಹೋಗಿದೆ. ಈ ನಿಯಮಗಳನ್ನು ಜಾರಿಗೊಳಿಸದಿದ್ದಲ್ಲಿ, ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ಯೂಟ್ಯೂಬ್, ಇನ್‌ಸ್ಟಾಗ್ರಾಮ್ ಮತ್ತು ವಾಟ್ಸ್‌ಆ್ಯಪ್ ಕಂಪನಿಗಳಿಗೆ ಇರುವ ಕಾನೂನಿನ ರಕ್ಷಣೆಗೆ ಮೊಟಕುಗೊಳ್ಳುತ್ತದೆ. ಸರ್ಕಾರದ ಹೊಸ ನಿಯಮಗಳನ್ನು ಪಾಲಿಸದಿದ್ದಲ್ಲಿ ಈ ಸಾಮಾಜಿಕ ಜಾಲತಾಣಗಳು ತಮಗಿರುವ ‘ಮಧ್ಯವರ್ತಿ ಸ್ಥಾನಮಾನ’ವನ್ನು ಕಳೆದುಕೊಳ್ಳುತ್ತವೆ. ಅಲ್ಲದೇ, ತಮ್ಮ ವೇದಿಕೆಗಳಲ್ಲಿ ಯಾವುದೇ ಮೂರನೇ ವ್ಯಕ್ತಿಯು ಹಂಚಿಕೊಂಡ ಮಾಹಿತಿ ಮತ್ತು ದತ್ತಾಂಶಗಳಿಗೆ ಕಂಪನಿಗಳು ಇನ್ನುಮುಂದೆ ಹೊಣೆಗಾರರಾಗಿರುತ್ತವೆ. ಈ ವಿಚಾರದಲ್ಲಿ ಇಷ್ಟು ದಿನ ಇದ್ದ ವಿನಾಯಿತಿ ಕೊನೆಯಾಗಲಿದೆ.

ದ್ವಂದ್ವ ನಿಲುವಿಗೆ ಪೈ ಟೀಕೆ

ವಾಟ್ಸ್‌ಆ್ಯಪ್ ಕಂಪನಿಯ ನಡೆಯನ್ನು ದ್ವಿಮುಖ ನೀತಿ ಎಂದು ಐ.ಟಿ. ಉದ್ಯಮಿ ಟಿ.ವಿ. ಮೋಹನ್‌ದಾಸ್ ಪೈ ಟೀಕಿಸಿದ್ದಾರೆ. ಸರ್ಕಾರವು ಮೂಲ ಸಂದೇಶವನ್ನು ಹುಡುಕಿಕೊಡಿ ಎಂದು ಹೇಳಿದೆ. ಇದು ಖಾಸಗಿತನದ ಉಲ್ಲಂಘನೆ ಎಂದು ವಾಟ್ಸ್‌ಆ್ಯಪ್ ವಾದಿಸಿದೆ. ‘ಕೋಟ್ಯಂತರ ಜನರು ಬಳಕೆ ಮಾಡುತ್ತಿರುವ ಕಾರಣ ಸಾಮಾಜಿಕ ಜಾಲತಾಣಗಳು ಸಾರ್ವಜನಿಕ ತಾಣಗಳಾಗಿ ಮಾರ್ಪಟ್ಟಿವೆ. ನಮ್ಮ ದತ್ತಾಂಶಗಳು ಸುರಕ್ಷಿತವಾಗಿಲ್ಲ. ಈ ಕಂಪನಿಗಳು ಅಮೆರಿಕದ ಕಾನೂನಿಗೆ ಬದ್ಧವಾಗಿವೆ. ಅಲ್ಲಿನ ಭದ್ರತಾ ಸಂಸ್ಥೆಗಳು ನಮ್ಮ ದತ್ತಾಂಶಗಳನ್ನು ಖಂಡಿತವಾಗಿ ನೋಡಬಹುದು. ಖಾಸಗಿತನ ಎಂಬುದು ಎಲ್ಲಿದೆ? ನಮ್ಮ ಸರ್ಕಾರ ಮತ್ತು ನಮ್ಮ ಕಾನೂನುಗಳು ಖಾಸಗಿತನವನ್ನು ವ್ಯಾಖ್ಯಾನಿಸಬೇಕೇ ಹೊರತು ವಾಟ್ಸ್‌ಆ್ಯಪ್‌ನಂತಹ ಸಂಸ್ಥೆಗಳಲ್ಲ’ ಎಂದು ಮೋಹನ್‌ದಾಸ್ ಪೈ ಹೇಳಿದ್ದಾರೆ.

ನಿಯಮಗಳು ಏನು ಹೇಳುತ್ತವೆ?

- ಭಾರತದ ಸಾರ್ವಭೌಮತ್ವ, ರಾಜ್ಯದ ಭದ್ರತೆ ಅಥವಾ ಸಾರ್ವಜನಿಕ ಸುವ್ಯವಸ್ಥೆಯನ್ನು ಹಾಳುಮಾಡುವ ಮಾಹಿತಿಯ ‘ಮೂಲ’ವನ್ನು ಸಾಮಾಜಿಕ ಜಾಲತಾಣ ಕಂಪನಿಗಳು ಪತ್ತೆಹಚ್ಚಬೇಕು
- ಪ್ರತಿಯೊಂದು ಸಾಮಾಜಿಕ ಜಾಲತಾಣದಲ್ಲಿ ಪ್ರಕಟವಾಗುವ ಯಾವುದೇ ಸಂದೇಶವನ್ನು ಅಳಿಸುವಂತೆ ಸರ್ಕಾರದ ಅಧಿಕಾರಿಗಳು ಸೂಚನೆ ನೀಡಿದ 36 ಗಂಟೆಯೊಳಗೆ ಆಯಾ ಕಂಪನಿಗಳು ಅದನ್ನು ಕಾರ್ಯಗತಗೊಳಿಸಬೇಕು
- ಈ ಕುರಿತ ದೂರುಗಳಿಗೆ ಸ್ಪಂದಿಸುವ ವ್ಯವಸ್ಥೆಯನ್ನು ಕಂಪನಿಗಳು ರೂಪಿಸಬೇಕು
- ಅಶ್ಲೀಲತೆಗೆ ಸಂಬಂಧಿಸಿದ ಪೋಸ್ಟ್‌ಗಳನ್ನು ತೆಗೆದುಹಾಕಲು ಸ್ವಯಂಚಾಲಿತ ವ್ಯವಸ್ಥೆ ಜಾರಿಗೊಳಿಸಬೇಕು
- ಮುಖ್ಯ ದೂರು ಅಧಿಕಾರಿ, ನೋಡಲ್ ಅಧಿಕಾರಿ ಮತ್ತು ಕುಂದುಕೊರತೆ ನಿವಾರಣೆ ಅಧಿಕಾರಿಗಳನ್ನು ಕಂಪನಿಗಳು ಭಾರತದಲ್ಲಿ ನೇಮಿಸಿಕೊಳ್ಳಬೇಕು

ಖಾಸಗಿತನದ ವಿರುದ್ಧ ಅಲ್ಲ: ಸರ್ಕಾರ

ಸಾಮಾಜಿಕ ಜಾಲತಾಣ ಬಳಕೆದಾರರ ಖಾಸಗಿತನವನ್ನು ಗೌರವಿಸುವುದಾಗಿ ಕೇಂದ್ರ ಸರ್ಕಾರ ಬುಧವಾರ ಸ್ಪಷ್ಟಪಡಿಸಿದೆ. ಭಾರತದ ಸಾರ್ವಭೌಮತ್ವ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ‘ಅತ್ಯಂತ ಗಂಭೀರವಾದ ಅಪರಾಧಗಳ’ ತಡೆಗಟ್ಟುವಿಕೆ ಮತ್ತು ತನಿಖೆ ವಿಷಯದಲ್ಲಿ ಮಾತ್ರ ಸಂದೇಶಗಳ ಮೂಲವನ್ನು ಕಂಡುಹಿಡಿಯಲಾಗುವುದು ಎಂದು ತಿಳಿಸಿದೆ.

ಕೊನೆಯ ಕ್ಷಣದಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಿದ ವಾಟ್ಸ್‌ಆ್ಯಪ್‌ನ ಕ್ರಮವು ದುರದೃಷ್ಟಕರ ಎಂದು ಐ.ಟಿ ಸಚಿವಾಲಯ ಹೇಳಿದೆ. ‘ಬ್ರಿಟನ್, ಅಮೆರಿಕ, ನ್ಯೂಜಿಲೆಂಡ್, ಕೆನಡಾದಂತಹ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಜಾರಿಗಳಿಸಿರುವ ನಿಯಮಗಳು ತೀವ್ರತರವಾಗಿಲ್ಲ. ಹೊಸ ನಿಯಮಗಳು ಖಾಸಗಿತನ ಉಲ್ಲಂಘಿಸುತ್ತವೆ ಎಂಬುದಾಗಿ ವಾಟ್ಸ್‌ಆ್ಯಪ್ ಬಿಂಬಿಸುತ್ತಿದ್ದು, ಜನರ ದಾರಿ ತಪ್ಪಿಸುತ್ತಿದೆ’ ಎಂದು ಆರೋಪಿಸಿದೆ.

‘ಜನರ ಖಾಸಗಿತನ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಇದೇ ವೇಳೆ ರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ಕಾನೂನು ಮತ್ತು ಸುವ್ಯವಸ್ಥೆಯನ್ನು ನೋಡಿಕೊಳ್ಳಬೇಕಾದದ್ದು ಸರ್ಕಾರದ ಕರ್ತವ್ಯ. ಸರ್ಕಾರ ಜಾರಿಗೊಳಿಸಿರುವ ಯಾವುದೇ ನಿಯಮವು ವಾಟ್ಸ್‌ಆ್ಯಪ್‌ನ ಸಾಮಾನ್ಯ ಪ್ರಕ್ರಿಯೆಗೆ ಅಥವಾ ಬಳಕೆದಾರರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ಸಚಿವ ರವಿಶಂಕರ್ ಪ್ರಸಾದ್ ಸ್ಪಷ್ಟಪಡಿಸಿದ್ದಾರೆ.

ಸರ್ಕಾರದ ಮಾರ್ಗಸೂಚಿಗೆ ಫೇಸ್‌ಬುಕ್, ಗೂಗಲ್ ಪ್ರತಿಕ್ರಿಯೆ

ಸರ್ಕಾರದ ನೂತನ ಮಾರ್ಗ ಸೂಚಿಗಳ ಅನ್ವಯ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂಬುದಾಗಿ ಗೂಗಲ್ ಹಾಗೂ ಫೇಸ್‌ಬುಕ್ ಮಂಗಳವಾರ ತಿಳಿಸಿವೆ. ನೂತನ ನೀತಿಗಳು ಜಾರಿಯಾಗುವ ಕೆಲವೇ ಗಂಟೆಗಳ ಮೊದಲು ಈ ಪ್ರತಿಕ್ರಿಯೆ ನೀಡಿವೆ.

‘ಕಾನೂನುಬಾಹಿರ ವಿಷಯವನ್ನು ಪರಿಣಾಮಕಾರಿ ಮತ್ತು ನ್ಯಾಯಯುತ ರೀತಿಯಲ್ಲಿ ಎದುರಿಸಲು ಕಂಪನಿ ಬದ್ಧವಾಗಿದೆ. ಸ್ಥಳೀಯ ಕಾನೂನುಗಳನ್ನು ಅನುಸರಿಸಲು ಕಂಪನಿಯ ನೀತಿಯಲ್ಲಿ ಮಾರ್ಪಾಡು ಮಾಡಿಕೊಳ್ಳಲಾಗಿದೆ’ ಎಂದು ಗೂಗಲ್ ವಕ್ತಾರರು ತಿಳಿಸಿದ್ದಾರೆ.

ಮೂಲಗಳ ಪ್ರಕಾರ, ಫೇಸ್‌ಬುಕ್ ಸಂಸ್ಥೆಯು ಸ್ವಯಂಪ್ರೇರಿತ ಪರಿಶೀಲನೆ, ‘ಅಶ್ಲೀಲ’ ವಿಡಿಯೊ, ಚಿತ್ರ ತೆಗೆದುಹಾಕಲು 24 ಗಂಟೆಗಳ ಕಾಲಮಿತಿ ನಿಗದಿಪಡಿಸಿದೆ. ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಜಾರಿಗೊಳಿಸುತ್ತಿದೆ. ಸರ್ಕಾರದ ಸೂಚನೆಯಂತೆ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆಯೂ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ. ಭಾರತದ ಮೈಕ್ರೊಬ್ಲಾಗಿಂಗ್ ತಾಣ ‘ಕೂ’, ಸರ್ಕಾರದ ನಿಯಮಾವಳಿಗಳನ್ನು ಜಾರಿಗೆ ತಂದಿರುವುದಾಗಿ ಕಳೆದ ವಾರವೇ ತಿಳಿಸಿತ್ತು.

ಜೆಇಇ ಪರೀಕ್ಷೆ ಮುಂದೂಡಿಕೆ

ನವದೆಹಲಿ (ಪಿಟಿಐ): ಜುಲೈ 3ರಂದು ನಿಗದಿಯಾಗಿದ್ದ ಜೆಇಇ (ಅಡ್ವಾನ್ಸ್ಡ್) ಪರೀಕ್ಷೆಯನ್ನು ಕೋವಿಡ್ ಕಾರಣಕ್ಕೆ ಮುಂದೂಡಲಾಗಿದೆ. ಪರಿಷ್ಕೃತ ದಿನಾಂಕವನ್ನು ಬಳಿಕ ತಿಳಿಸಲಾಗುವುದು ಎಂದು ತಿಳಿಸಲಾಗಿದೆ.

ಮೇಕೆದಾಟು ಯೋಜನೆ: ಇಂದು ಸಿ.ಎಂ ನೇತೃತ್ವದಲ್ಲಿ ತಜ್ಞರ ಸಭೆ

ಬೆಂಗಳೂರು: ‘ಮೇಕೆದಾಟು ಯೋಜನೆಗಾಗಿ ಕಾನೂನು ಹೋರಾಟ ಮುಂದುವರಿಸುವ ಬಗ್ಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಕಾನೂನು ತಜ್ಞರ ಸಭೆ ಗುರುವಾರ (ಮೇ 27) ನಡೆಯಲಿದೆ’ ಎಂದು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪತ್ರಿಕೆಯೊಂದರ ವರದಿ ಆಧರಿಸಿ ಚೆನ್ನೈನ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ಎನ್‌ಜಿಟಿ) ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ, ಸಮಿತಿ ರಚಿಸಿದೆ. ಮೇಕೆದಾಟು ಯೋಜನೆಯಿಂದ ಪರಿಸರಕ್ಕೆ ಹಾನಿ ಹಾಗೂ ನಿಯಮ ಉಲ್ಲಂಘನೆ ಯಾಗಿವೆಯೇ? ಎಂಬುದನ್ನು ಪರಿಶೀಲಿಸಲು ಸೂಚಿಸಿದೆ. ಆದರೆ, ಯಾವುದೇ ದೂರು ಅಧಿಕೃತವಾಗಿ ದಾಖಲಾಗಿಲ್ಲ’ ಎಂದರು.

ನೀರಾವರಿ ಉದ್ದೇಶಕ್ಕೆ ಕೈಗಾರಿಕಾ ತ್ಯಾಜ್ಯ ಬಳಕೆ

ಮಾರ್ಗಸೂಚಿ ಜಾರಿಗೆ ಎನ್‌ಜಿಟಿ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೈಗಾರಿಕೆಗಳ ದ್ರವತ್ಯಾಜ್ಯವನ್ನು ನೀರಾವರಿ ಉದ್ದೇಶಕ್ಕೆ ಬಳಸಿಕೊಳ್ಳುವ ಸಂಬಂಧ ಮಾರ್ಗಸೂಚಿ ಜಾರಿಗೊಳಿಸುವಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ನಿರ್ದೇಶನ ನೀಡಿದೆ.

ಈ ಕುರಿತು 2019ರ ಸೆಪ್ಟೆಂಬರ್‌ನಲ್ಲಿ ತಾನು ನೀಡಿರುವ ನಿರ್ದೇಶನವನ್ನು ಕಾರ್ಯರೂಪಕ್ಕೆ ತರುವಂತೆಯೂ ನ್ಯಾಯಮೂರ್ತಿ ಆದರ್ಶಕುಮಾರ್ ಗೋಯೆಲ್ ನೇತೃತ್ವದ ಹಸಿರು ಪೀಠವು ಮಂಡಳಿಗೆ ಸೂಚಿಸಿದೆ.

ಅಂತರ್ಜಲದ ಗುಣಮಟ್ಟದ ಮೇಲೆ ಸಾಕಷ್ಟು ಪರಿಣಾಮ ಉಂಟು ಮಾಡುವ ಕೈಗಾರಿಕೆಗಳ ಸಂಸ್ಕರಿಸಿದ ತ್ಯಾಜ್ಯವನ್ನು ನೀರಾವರಿ ಉದ್ದೇಶಕ್ಕಾಗಿ ಕೃಷಿ ಹಾಗೂ ತೋಟಗಾರಿಕೆ ಜಮೀನಿಗೆ ಹರಿಸಲು ಸಾಕಷ್ಟು ಭೂಮಿ ಹೊಂದಿರದ ಯಾವುದೇ ಕೈಗಾರಿಕೆಗೂ ಅನುಮತಿ ಇಲ್ಲ ಎಂದು ತಿಳಿಸಿದ್ದ ಪೀಠವು, ಈ ಅಂಶ ಗಮನದಲ್ಲಿ ಇರಿಸಿಕೊಂಡು, ನಿಗದಿತ ಮಾನದಂಡಗಳಿಗೆ ಅನು ಗುಣವಾಗಿಯೇ ಮಾರ್ಗಸೂಚಿ ಹೊರಡಿಸುವಂತೆ ಸೂಚಿಸಿದೆ.

ಮಾರ್ಗಸೂಚಿ ಜಾರಿಗ ಮುನ್ನ ಕೇಂದ್ರ ಮಂಡಳಿಯು ಆಯಾ ರಾಜ್ಯಗಳ ಮಂಡಳಿಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ಕಾನೂನಿಗೆ ಅನುಸಾರ ಕ್ರಮ ಕೈಗೊಳ್ಳಬಹುದು ಎಂದೂ ತಿಳಿಸಲಾಗಿದೆ.

ಉತ್ತರ ಪ್ರದೇಶದಲ್ಲಿನ ಕೆಲವು ಕಸಾಯಿ ಖಾನೆಗಳ ದ್ರವ ತ್ಯಾಜ್ಯವನ್ನು ಚರಂಡಿಗೆ ಹಾಗೂ ಕೃಷಿ, ತೋಟಗಾರಿಕೆ ಜಮೀನಿಗೆ ಹರಿಬಿಡುವ ಮೂಲಕ ಪರಿಸರ ನಿಯಮಗಳನ್ನು ಉಲ್ಲಂಘಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಲಾದ ಆದೇಶದ ಜಾರಿ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿ ಹಸಿರು ಪೀಠವು ಈ ಆದೇಶ ನೀಡಿದೆ.

ಯಸ್ ಚಂಡಮಾರುತದ ಪರಿಣಾಮ: ವಿದ್ಯುತ್ ಕಂಬಗಳು, ಮರಗಳು ಧರೆಗೆ • ಪರಿಹಾರ ಕಾರ್ಯಾಚರಣೆ ಚುರುಕು

ನಿಲ್ಲದ ಮಳೆ: ಉಕ್ಕೇರಿದ ನದಿಗಳು

ಕೋಲ್ಕತ್ತ (ಪಿಟಿಐ): ಯಸ್ ಚಂಡಮಾರುತದ ಪರಿಣಾಮ ಒಡಿಶಾ ಹಾಗೂ ಪಶ್ಚಿಮ ಬಂಗಾಳದ ಕೆಲ ಭಾಗಗಳಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ ಭಾರಿ ಮಳೆಯಾಗಿದೆ. ಭದ್ರಕ ಜಿಲ್ಲೆಯ ಚಾಂದ್‌ಬಾಲಿಯಲ್ಲಿ 288.3 ಮಿ.ಮೀ. ಮಳೆಯಾಗಿದೆ ಎಂದು ಭುವನೇಶ್ವರದಲ್ಲಿರುವ ಹವಾಮಾನ ಕೇಂದ್ರ ತಿಳಿಸಿದೆ.

ರಾಜ್ಯದ ಒಟ್ಟು 314ರಲ್ಲಿ 36 ತಾಲ್ಲೂಕುಗಳಲ್ಲಿ ಕನಿಷ್ಠ 110 ಮಿ.ಮೀ.ನಿಂದ ಗರಿಷ್ಠ 304 ಮಿ.ಮೀ.ನಷ್ಟು ಮಳೆಯಾಗಿದೆ. 37 ತಾಲ್ಲೂಕುಗಳಲ್ಲಿ 50ರಿಂದ 100 ಮಿ.ಮೀ. ನಷ್ಟು ಮಳೆಯಾಗಿದೆ ಎಂದು ಒಡಿಶಾದ ವಿಶೇಷ ಪರಿಹಾರ ಆಯುಕ್ತ ಪಿ.ಕೆ. ಜೇನ ತಿಳಿಸಿದ್ದಾರೆ. ಮುಂದಿನ 48 ಗಂಟೆಗಳ ಅವಧಿಗೆ ಒಂಬತ್ತು ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ.

ತೆರವು ಕೆಲಸ ಆರಂಭ: ಒಡಿಶಾ ಮತ್ತು ಪಶ್ಚಿಮ ಬಂಗಾಳದಲ್ಲಿ ಸಾವಿರಾರು ಮರಗಳು ಹಾಗೂ ವಿದ್ಯುತ್ ಕಂಬಗಳು ನೆಲಸಮಗೊಂಡಿದ್ದು, ಅವುಗಳನ್ನು ತೆರವುಗೊಳಿಸುವ ಕೆಲಸ ಆರಂಭವಾಗಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.



ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ಭಾರಿ ಮಳೆಯ ಸಂದರ್ಭದಲ್ಲಿ ಜನರು ತಳ್ಳು ಗಾಡಿಯೊಂದರಲ್ಲಿ ಆಶ್ರಯ ಪಡೆದರು –ಪಿಟಿಐ ಚಿತ್ರ

'ರಸ್ತೆ ಸಂಚಾರ ಸೇರಿದಂತೆ ಸಂಪರ್ಕ ವ್ಯವಸ್ಥೆಯನ್ನು ಸಮಸ್ಥಿತಿಗೆ ತರಲು ಶ್ರಮಿಸಲಾಗುತ್ತಿದೆ. ಚಂಡಮಾರುತ ಪೀಡಿತ ಪ್ರದೇಶಗಳನ್ನು ಮತ್ತೆ ಸಾಮಾನ್ಯ ಸ್ಥಿತಿಗೆ ತರಲು ಅವಿರತವಾಗಿ ಕೆಲಸ ನಡೆಯುತ್ತಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಳಿಯ ರಭಸಕ್ಕೆ ಸಿಲುಕಿ ಲಕ್ಷಾಂತರ ಮನೆಗಳು ಕುಸಿದಿವೆ. ಮನೆಗಳಲ್ಲಿ ಸಿಲುಕಿದದ ನೂರಾರು ಜನರನ್ನು ಎನ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಿಸಿದ್ದಾರೆ.

ಮನೆಗಳಿಗೆ ನುಗ್ಗಿದ ನೀರು: ಚಂಡಮಾರುತದ ಪರಿಣಾಮ ಸಮುದ್ರದಲ್ಲಿ ಭಾರಿ ಅಲೆಗಳೆದ್ದು, ನೀರು ಉಕ್ಕಿ ಹರಿದ ಪರಿಣಾಮ ಪಶ್ಚಿಮ ಬಂಗಾಳದಲ್ಲಿ ಸಮುದ್ರ ತೀರದ ಅನೇಕ ರಸ್ತೆಗಳಲ್ಲಿ ಹಲವು ಅಡಿಗಳಷ್ಟು ನೀರು ನಿಂತಿದೆ. ಪೂರ್ವ ಮೇದಿನಿಪುರದ ಕೆಲವು ಭಾಗಗಳಲ್ಲಿ ಭಾರಿ ಮಳೆಯಿಂದಾಗಿ ಮನೆಗಳಿಗೆ ನೀರು ನುಗ್ಗಿದೆ.

ಕೆಲವೆಡೆ ಎದೆಯ ಮಟ್ಟದಲ್ಲಿ ನೀರಿನಿಂದ ತುಂಬಿದ್ದ ರಸ್ತೆಗಳಲ್ಲೇ ಜನರು ನಡೆದುಕೊಂಡು ಸುರಕ್ಷಿತ ಸ್ಥಳಗಳಿಗೆ ತಲುಪಿದ್ದಾರೆ. ಪೂರ್ವ ಮೇದಿನಿಪುರದ ಕೆಲವು ಭಾಗಗಳಲ್ಲಿ ಸೇನೆಯ ಯೋಧರು ಧಾವಿಸಿ, ಸ್ಥಳೀಯರನ್ನು ರಕ್ಷಿಸಿದ್ದಾರೆ. ಶಂಕರಪುರ ಕರಾವಳಿಯಲ್ಲಿದ್ದ ಒಂದು ಶಾಲೆಯೇ ಕೊಚ್ಚಿಹೋಗಿದೆ. ಬೀದಿ ನಾಯಿಗಳು, ಜಾನುವಾರುಗಳು ನೀರಿನಲ್ಲಿ ಕೊಚ್ಚಿಹೋಗುವುದು, ವಾಹನಗಳು ಉರುಳಿರುವುದೇ ಮುಂತಾದ ದೃಶ್ಯಗಳು ಬುಧವಾರ ಕಾಣಿಸಿವೆ.

ಒಡಿಶಾದ ಅನೇಕ ಜಿಲ್ಲೆಗಳಲ್ಲಿ ಭಾರಿ ಮಳೆಯಿಂದಾಗಿ ನದಿಗಳು ಅಪಾಯ ಮಟ್ಟದಲ್ಲಿ ಹರಿಯುತ್ತಿವೆ. ಆದ್ದರಿಂದ ಜನರನ್ನು ಸ್ಥಳಾಂತರಿಸುವ ಕೆಲಸ ಬುಧವಾರವೂ ನಡೆದಿತ್ತು. ಗುರುವಾರವೂ ಸಮುದ್ರದಲ್ಲಿ ಭಾರಿ ಅಲೆಗಳು ಕಾಣಿಸಲಿವೆ ಮತ್ತು ಕೆಲವು ಪ್ರದೇಶಗಳಲ್ಲಿ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಕಟ್ಟೆಚ್ಚರ

ರಾಂಚಿ (ಪಿಟಿಐ): ಪಕ್ಕದ ಒಡಿಶಾ ಹಾಗೂ ಪಶ್ಚಿಮ ಬಂಗಾಳದಲ್ಲಿ ಭಾರಿ ಮಳೆ ಸುರಿಸುತ್ತಿರುವ ಯಸ್ ಚಂಡಮಾರುತವು ಬುಧವಾರ ಮಧ್ಯರಾತ್ರಿ ಹೊತ್ತಿಗೆ ಜಾರ್ಖಂಡ್ ರಾಜ್ಯವನ್ನು ಪ್ರವೇಶಿಸುವ ಸಾಧ್ಯತೆಯಿದೆ. ಹೀಗಾಗಿ ತಗ್ಗು ಪ್ರದೇಶದ ಜನರನ್ನು ತೆರವುಗೊಳಿಸಲಾಗುತ್ತಿದ್ದು, ರಾಜ್ಯದಲ್ಲಿ ತೀವ್ರ ಕಟ್ಟೆಚ್ಚರ ವಹಿಸಲಾಗಿದೆ.

ಚಂಡಮಾರುತದ ಪ್ರಭಾವ ಹೆಚ್ಚಾಗಿರುವ ಪೂರ್ವ ಮತ್ತು ಪಶ್ಚಿಮ ಸಿಂಹಭೂಮ ಪ್ರದೇಶ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಸೂಕ್ಷ್ಮ ಪ್ರದೇಶಗಳಲ್ಲಿ ಸಮರೋಪಾದಿಯಲ್ಲಿ ಕೆಲಸಗಳು ನಡೆಯುತ್ತಿವೆ ಎಂದು ವಿಪತ್ತು ನಿರ್ವಹಣಾ ಕಾರ್ಯದರ್ಶಿ ಅಮಿತಾಭ್ ಕೌಶಾಲ್ ತಿಳಿಸಿದ್ದಾರೆ.

'ವೇಗದ ಗಾಳಿ ಬೀಸುತ್ತಿದ್ದು, ಮರಗಳು ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿವೆ. ಶಿಥಿಲ ಮನೆಗಳಲ್ಲಿ ವಾಸಿಸುತ್ತಿದ್ದ 6 ಸಾವಿರಕ್ಕೂ ಹೆಚ್ಚು ಜನರನ್ನು ತೆರವು ಮಾಡಿದ್ದೇವೆ. ಅವರಿಗೆ ಸುರಕ್ಷಿತ ಜಾಗದಲ್ಲಿ ನೆಲೆ ಒದಗಿಸಲಾಗಿದೆ' ಎಂದು ಪೂರ್ವ ಸಿಂಹಭೂಮದ ಜಿಲ್ಲಾಧಿಕಾರಿ ಸೂರಜ್ ಕುಮಾರ್ ತಿಳಿಸಿದ್ದಾರೆ.

ವಿದ್ಯುತ್ ಸೌಲಭ್ಯ ಕಡಿತವಾಗುವ ಸಾಧ್ಯತೆಯಿದ್ದು, ನಕ್ಸಲ್‌ಪೀಡಿತ ಪ್ರದೇಶ ಪೊಲೀಸ್ ಠಾಣೆಗಳಿಗೆ ಸ್ಯಾಟಲೈಟ್ ಫೋನ್‌ಗಳನ್ನು ಒದಗಿಸಲಾಗಿದೆ ಎಂದು ಡಿಜಿಪಿ ನೀರಜ್ ಸಿನ್ಹಾ ತಿಳಿಸಿದ್ದಾರೆ. ಪರಿಸ್ಥಿತಿ ಎದುರಿಸಲು ಸಜ್ಜಾಗಿದ್ದು, ಪರಿಹಾರ ತಂಡಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ ಎಂದು ತಿಳಿಸಿದ್ದಾರೆ.

'ಕಪ್ಪು ಶಿಲೀಂಧ್ರ ಹಿಮ್ಮೆಟ್ಟಿಸಲು ಸ್ವಚ್ಛತೆಯೇ ಮಂತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಪ್ಪು ಶಿಲೀಂಧ್ರ ಅಪಾಯದಿಂದ ಪಾರಾಗಲು ವ್ಯಕ್ತಿಗತ ಮತ್ತು ಸಾರ್ವಜನಿಕ ಸ್ವಚ್ಛತೆಯೇ ಏಕೈಕ ಮಂತ್ರ' ಎನ್ನುತ್ತಾರೆ ಪುಣೆಯ 'ಸೋಂಕು ರೋಗಗಳ ಸಂಸ್ಥೆ'ಯ ನಿರ್ದೇಶಕ ಹಾಗೂ ಐಸಿಎಂಆರ್ ಕೋವಿಡ್–19 ಕಾರ್ಯಪಡೆಯ ಸದಸ್ಯ ಡಾ.ಸಂಜಯ್ ಪೂಜಾರಿ.

'ಇದೊಂದು ಪಕ್ಕಾ ಅವಕಾಶವಾದಿ ಶಿಲೀಂಧ್ರ, ರೋಗ ನಿರೋಧಕ ಶಕ್ತಿ ಕಳೆದುಕೊಂಡ ವ್ಯಕ್ತಿಯನ್ನು ಪ್ರವೇಶಿಸುವ ಅವಕಾಶಕ್ಕಾಗಿ ಹೊಂಚು ಹಾಕಿಕೊಂಡಿರುತ್ತದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಈ ಶಿಲೀಂಧ್ರಗಳನ್ನು (ಮ್ಯೂಕರ್ ಮೈಕೋಸಿಸ್) ಬಣ್ಣದ ಹೆಸರಿನಲ್ಲಿ ಕರೆಯುವುದು ಸರಿಯಲ್ಲ. ಕೋವಿಡ್ ರೋಗಿಗಳಲ್ಲಿ ಸ್ಟೆರಾಯ್ಡ್ ಬಳಕೆಯಿಂದ ರಕ್ತದಲ್ಲಿ ಅನಿಯಂತ್ರಿತ ಪ್ರಮಾಣದಲ್ಲಿ ಸಕ್ಕರೆ ಅಂಶ ಅಧಿಕವಾಗಿರುತ್ತದೆಯೋ ಅವರಲ್ಲಿ ಕಾಣಿಸಿಕೊಳ್ಳುತ್ತದೆ. ಸ್ಟೆರಾಯ್ಡ್ ಸಾಕಷ್ಟು ಜನರ ಜೀವ ಉಳಿಸುತ್ತದೆ. ಆದರೆ,



ಡಾ.ಸಂಜಯ್ ಪೂಜಾರಿ

ವೈದ್ಯರ ಸಲಹೆ ಪಡೆಯದೇ ತೆಗೆದುಕೊಳ್ಳುವುದು ಅಥವಾ ವೈದ್ಯರ ನೀಡುವ ಡೋಸೇಜ್‌ನಲ್ಲಿ ಏರುಪೇರಾದರೆ ಶಿಲೀಂಧ್ರಕ್ಕೆ ರತ್ನ ಕಂಬಳಿ ಹಾಸಿದಂತೆ ಎಂದು ಸಂಜಯ್ ಹೇಳಿದರು.

ಇವುಗಳ ಆವಾಸ ಸ್ಥಾನ ಎಲ್ಲಿ: ಅಸ್ವಚ್ಛ ತಾಣಗಳು, ಕೊಳೆಯುವ ವಸ್ತುಗಳು, ಪ್ರಾಣಿಗಳ ಮಲ, ನಿರ್ಮಾಣ ಸ್ಥಳಗಳಲ್ಲಿ ಇವು ಇರುತ್ತವೆ. ಇಂತಹ ಕಡೆಗಳಲ್ಲಿ ಉಸಿರಾಡಿದಾಗ ಶಿಲೀಂಧ್ರ ದೇಹದೊಳಗೆ ಪ್ರವೇಶಿಸುತ್ತವೆ. ಆರೋಗ್ಯವಂತ ವ್ಯಕ್ತಿಯಲ್ಲಿ ಇವು ರೋಗಕ್ಕೆ ಕಾರಣವಾಗುವುದಿಲ್ಲ. ರಕ್ತದ ಕ್ಯಾನ್ಸರ್, ರಕ್ತ ಮರು ಪೂರಣಕ್ಕೆ ಒಳಗಾಗುವ ವ್ಯಕ್ತಿಗಳು, ಅನಿಯಂತ್ರಿತ ಮಧುಮೇಹ ಮತ್ತು ಪದೇ ಪದೇ ಸ್ಟೆರಾಯ್ಡ್ ಬಳಕೆ ಮಾಡುವವರಲ್ಲಿ ತನ್ನ ಕರಾಮತ್ತು ತೋರಿಸುತ್ತದೆ. ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಇದು ಹರಡುವುದಿಲ್ಲ.

ಸಾವಿರಾರು ಪ್ರಾಣ ಕಸಿಯುವ ಕಪ್ಪು ಶಿಲೀಂಧ್ರ • ಮೂಲ ಪತ್ತೆಗೆ ಅಧ್ಯಯನ

ಪ್ರಾಣ ಹಿಂಡುವ ಹೊಸ ಮಾರಿ

• ಎಸ್. ರವಿಪ್ರಕಾಶ್

ಬೆಂಗಳೂರು: ವಿಜ್ಞಾನಿಗಳು, ವೈದ್ಯರು ಮತ್ತು ಸರ್ಕಾರಕ್ಕೆ ಸವಾಲಾಗಿರುವ 'ಕಪ್ಪುಶಿಲೀಂಧ್ರ' ಈಗ ಕೋವಿಡ್ ಸೋಂಕು ಇಲ್ಲದ ವ್ಯಕ್ತಿಗಳಲ್ಲೂ ಹಬ್ಬುತ್ತಿದೆ. ಇದರ ಮೂಲವನ್ನು ಪತ್ತೆ ಮಾಡಿ ನಿಯಂತ್ರಣಕ್ಕೆ ತಕ್ಷಣವೇ ಕ್ರಮ ತೆಗೆದುಕೊಳ್ಳದಿದ್ದರೆ ಭವಿಷ್ಯದಲ್ಲಿ ವರ್ಷಕ್ಕೆ ಸಾವಿರಾರು ಜನ ಪ್ರಾಣ ಕಳೆದುಕೊಳ್ಳುವ ಅಪಾಯ ಇದೆ.

'ಮ್ಯೂಕರ್‌ಮೈಕೋಸಿಸ್' ಎಂದೇ ಕರೆಯಲಾಗುವ ಈ ಶಿಲೀಂಧ್ರಗಳ ಪಾಲಿಗೆ ಕೋವಿಡ್ ಎರಡನೇ ಅಲೆಯ ಪ್ರಾಣವಾಯುವನ್ನೇ ಕೊಟ್ಟಂತಾಗಿದೆ. ಸ್ವಚ್ಛತೆ ಇಲ್ಲದ ಜಾಗಗಳನ್ನು ಇವು ಸಂವರ್ಧನೆಯ ತಾಣ ಮಾಡಿಕೊಳ್ಳುತ್ತವೆ. ಹೀಗಾಗಿ ಕೋವಿಡ್ ಇಲ್ಲದವರಲ್ಲೂ ಕಾಣಿಸಿಕೊಳ್ಳಲಾರಂಭಿಸಿವೆ.

ಕಳಪೆ ಗುಣಮಟ್ಟದ ಆಮ್ಲಜನಕ, ಸ್ವಚ್ಛತೆ ಕಾಪಾಡದ ಆಸ್ಪತ್ರೆಗಳು, ಕೊರೊನಾ ವೈರಾಣು ತಡೆಯಲು ಬಳಸುವ ಮುಖಗವುಸು ಮತ್ತು ಕೋವಿಡ್ ರೋಗಿಗಳು ಬಳಸಿ ಬಿಸಾಡಿದ ತ್ಯಾಜ್ಯದಿಂದ ಕಪ್ಪು ಶಿಲೀಂಧ್ರಗಳು ಹರಡುತ್ತಿವೆ.

'ಪ್ರಜಾವಾಣಿ' ಜತೆ ಮಾತನಾಡಿದ ರಾಜ್ಯ ಕಪ್ಪು ಶಿಲೀಂಧ್ರ ನಿರ್ವಹಣೆ ಸಮಿತಿಯ ಸದಸ್ಯ ಹಾಗೂ ಇಎನ್‌ಟಿ, ಕುತ್ತಿಗೆ, ತಲೆ ಬುರುಡೆ ಸರ್ಜನ್

> **ಕಪ್ಪು ಶಿಲೀಂಧ್ರ ತಕ್ಷಣಕ್ಕೆ ಹೊರಟು ಹೋಗುವುದಿಲ್ಲ, ಹಲವು ವರ್ಷಗಳವರೆಗೆ ಬಾಧಿಸುತ್ತಲೇ ಇರುತ್ತದೆ. ಸಾಕಷ್ಟು ಸಾವುಗಳಿಗೂ ಕಾರಣವಾಗಬಹುದು**
> **ಡಾ.ಸಂಪತ್ ಚಂದ್ರ ಪ್ರಸಾದ್ ರಾವ್**
> ಕಪ್ಪು ಶಿಲೀಂಧ್ರ ನಿರ್ವಹಣೆ ಸಮಿತಿ ಸದಸ್ಯ

ಡಾ.ಸಂಪತ್ ಚಂದ್ರ ಪ್ರಸಾದ್ ರಾವ್, ಸಮಸ್ಯೆ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಮೂಲ ಪತ್ತೆ ಆಗಲೇಬೇಕು: 'ಕಪ್ಪು ಶಿಲೀಂಧ್ರ ಮೊದಲಿಗೆ ಎಲ್ಲಿಂದ ಹೊರಬಿದ್ದಿದೆ. ಮಾನವನ ದೇಹದೊಳಗೆ ಪ್ರವೇಶ ಪಡೆದಿದ್ದು ಹೇಗೆ ಎಂಬುದನ್ನು ಪತ್ತೆ ಮಾಡುವ ರಯತ್ನ ನಡೆದಿಲ್ಲ. ಕರ್ನಾಟಕದಲ್ಲಿ ಇದರ ಪತ್ತೆ ಕಾರ್ಯ ಆರಂಭಿಸಿದ್ದೇವೆ' ಎಂದು ಡಾ.ಸಂಪತ್ ಚಂದ್ರ ಹೇಳಿದರು.

ಸರ್ವವ್ಯಾಪಿಯಾದ ಇವು ಮನುಷ್ಯನ ದೇಹ ಪ್ರವೇಶಿಸಲು ಕಾಯುತ್ತಿರುತ್ತವೆ. ರೋಗ ನಿರೋಧಕ ಶಕ್ತಿ ಇರುವ ವ್ಯಕ್ತಿಗಳಲ್ಲಿ ಪ್ರವೇಶಿಸುವುದಿಲ್ಲ. ನಿರೋಧಕ ಶಕ್ತಿ ಕುಸಿಯುತ್ತಿದ್ದಂತೆ ಪ್ರವೇಶಿಸುತ್ತವೆ. ಈ ಶಿಲೀಂಧ್ರವು ಮೂಗಿನ ಮೂಲಕ ಕಣ್ಣಿಗೆ, ಬಳಿಕ ಮೆದುಳಿನ ಮೇಲೆ ದಾಳಿ ಮಾಡುತ್ತವೆ ಎಂದು ವಿವರಿಸಿದರು.

'ಕೋವಿಡ್‌ಗೆ ಮುನ್ನ ಇಡೀ ದೇಶದಲ್ಲಿ ವರ್ಷಕ್ಕೆ 2–3 ಪ್ರಕರಣಗಳನ್ನು ನೋಡುತ್ತಿದ್ದೆವು. ವಿದೇಶಗಳಲ್ಲಿ 5–6 ವರ್ಷಗಳಿಗೆ 2–3 ಪ್ರಕರಣಗಳು ವರದಿಯಾಗುತ್ತಿದ್ದವು. ಇದು ತೀರಾ ಅಪರೂಪದ ಕಾಯಿಲೆ. ವಿದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಶೇ 40 ರಷ್ಟು ಪ್ರಕರಣಗಳು ಹೆಚ್ಚು ಇದ್ದವು. ಆದರೆ, ಕಳೆದ ಮೂರು ತಿಂಗಳಲ್ಲಿ ದೇಶದಲ್ಲಿ 10,000 ಪ್ರಕರಣಗಳ ಕಾಣಿಸಿಕೊಂಡಿವೆ. ಈ ಬೆಳವಣಿಗೆ ವೈದ್ಯಲೋಕಕ್ಕೂ ಅಚ್ಚರಿ ಮೂಡಿಸಿದೆ' ಎಂದರು.

ಕೋವಿಡ್ ರೋಗಿಗಳಲ್ಲಿ ಸ್ಟೆರಾಯ್ಡ್ ಕೊಟ್ಟಾಗ ಸಕ್ಕರೆ ಅಂಶ ಅತ್ಯಧಿಕವಾಗಿ ಒಂದು ಬಗೆಯ ಆಮ್ಲ ಸೃಷ್ಟಿಯಾಗುತ್ತದೆ. ಇದು ಕಬ್ಬಿಣ ಅಂಶದ ಬಿಡುಗಡೆ ಕಾರಣವಾಗುತ್ತದೆ. ಈ ಕ್ರಿಯೆಯ ಪರಿಣಾಮ ಶಿಲೀಂಧ್ರ ವಾಸಕ್ಕೆ ಮನುಷ್ಯನ ದೇಹ ಯೋಗ್ಯವೆನಿಸುತ್ತದೆ ಎಂದು ವಿವರಿಸಿದರು.

ಕಪ್ಪು ಶಿಲೀಂಧ್ರ 'ಸಂವರ್ಧನ' ಸ್ಥಳಗಳಿವು!

- **ಆಸ್ಪತ್ರೆಗಳು:** ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾದವರಲ್ಲಿ ಸ್ವಚ್ಛತೆ ಕಾಪಾಡದ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆ ಪಡೆದವರೇ ಹೆಚ್ಚು. ಬ್ಯಾಕ್ಟೀರಿಯಾ, ವೈರಾಣು ಮತ್ತು ಫಂಗಸ್‌ಗಳು ವೃದ್ಧಿಯಾಗಲು ಅವಕಾಶ ನೀಡದಂತೆ ಸ್ವಚ್ಛ ಮಾಡಬೇಕು. ಕೆಲವು ಆಸ್ಪತ್ರೆಗಳನ್ನು ಹೊರತುಪಡಿಸಿದರೆ, ಉಳಿದ ಕಡೆಗಳಲ್ಲಿ ಸ್ವಚ್ಛತೆ ಕಾಪಾಡಲು, ಒತ್ತಡಗಳ ಕಾರಣದಿಂದ ಸಾಧ್ಯವಾಗುತ್ತಿಲ್ಲ. ಅಲ್ಲದೆ, ಆಸ್ಪತ್ರೆಗಳಲ್ಲಿ ಆಮ್ಲಜನಕ ಪೂರೈಕೆಗೆ ಬಳಸುವ ಕೊಳವೆಗಳು, ಸಿಲಿಂಡರ್‌ಗಳ ಮೂಲಕ ಶಿಲೀಂಧ್ರ ದೇಹವನ್ನು ಪ್ರವೇಶಿಸುತ್ತಿವೆ.
- **ಆಮ್ಲಜನಕ ಪೂರೈಕೆ ಜಾಲ:** ಕೈಗಾರಿಕಾ ವಲಯ ಉತ್ಪಾದಿಸುವ ಆಮ್ಲಜನಕದ ವೈದ್ಯಕೀಯ ಗುಣಮಟ್ಟದ ಬಗ್ಗೆ ಸಂದೇಹವಿದೆ. ಅಲ್ಲದೇ, ವರ್ಷಗಟ್ಟಲೆ ಬಳಸದೇ ಬಿಟ್ಟ ಸಿಲಿಂಡರ್‌ಗಳನ್ನು ಉಪಯೋಗಿಸಲಾಗುತ್ತಿದೆ. ವೈದ್ಯಕೀಯ ಆಮ್ಲಜನಕ ತಯಾರಿಕೆಯ ಶಿಷ್ಟಾಚಾರ ಪಾಲಿಸುತ್ತಿರುವವರು ತೀರಾ ಕಡಿಮೆ. ಇದು ಕೂಡ ಕಪ್ಪುಶಿಲೀಂಧ್ರ ಹರಡಲು ಕಾರಣ.
- **ಸಮುದಾಯ ವರ್ತನೆ:** ಕೋವಿಡ್ ರೋಗಿಗಳು ಬಳಸಿಬಿಟ್ಟ ವಸ್ತುಗಳನ್ನು ಎಲ್ಲೆಂದರಲ್ಲಿ ಎಸೆಯುತ್ತಿದ್ದು ಈ ತ್ಯಾಜ್ಯಗಳೇ ಕಪ್ಪು ಶಿಲೀಂಧ್ರಕ್ಕೆ ಆವಾಸ ಸ್ಥಾನ. ಅಲ್ಲಿಂದ ಮನೆಗಳಿಗೂ ಪ್ರವೇಶಿಸುತ್ತವೆ.
- **ಮುಖ ಗವುಸು:** ಹಲವು ದಿನಗಳ ಕಾಲ ಸ್ವಚ್ಛ ಮಾಡದೇ ಮುಖಗವಸು ಬಳಸುವುದರಿಂದಲೂ ಕಪ್ಪು ಶಿಲೀಂಧ್ರ ಪ್ರವೇಶಿಸುತ್ತದೆ.

ಸೂಪರ್ ಮೂನ್



'ಸೂಪರ್ ಮೂನ್' (ಬೃಹತ್ ಚಂದ್ರ) ಮತ್ತು ಪೂರ್ಣ ಚಂದ್ರ ಗ್ರಹಣಗಳು ಒಟ್ಟಾಗಿ ಕಾಣಿಸಿಕೊಳ್ಳುವ ವಿರಳ ಖಗೋಳ ವಿದ್ಯಮಾನಕ್ಕೆ ಖಗೋಲಾಸಕ್ತರು ಬುಧವಾರ ಸಾಕ್ಷಿಯಾದರು. ಈ ವರ್ಷದ ಏಕೈಕ ಮತ್ತು 2019ರ ಜನವರಿ ನಂತರದ ಮೊದಲ ಪೂರ್ಣ ಚಂದ್ರಗ್ರಹಣವು ಬುಧವಾರ ಉಂಟಾಯಿತು. ಚಂದ್ರನು ಭೂಮಿಗೆ ಅತ್ಯಂತ ಸಮೀಪದಲ್ಲಿ ಇರುವ ಕಾರಣ ಭೂಮಿಯಿಂದ ನೋಡುವವರಿಗೆ ಚಂದ್ರನು ಬೃಹತ್ ಗಾತ್ರದಲ್ಲಿ ಕಾಣಿಸಿದ್ದಾನೆ. ಭೂಮಿಗೆ ಚಂದ್ರನು ಅತ್ಯಂತ ಹತ್ತಿರ ಬಂದಾಗ ಅಂತರವು 3,60,000 ಕಿ.ಮೀ. ಇರುತ್ತದೆ. ಅತ್ಯಂತ ದೂರದಲ್ಲಿರುವಾಗ ಈ ಅಂತರವು 4,05,000 ಕಿ.ಮೀ. ಆಗಿರುತ್ತದೆ. ಪೂರ್ಣ ಚಂದ್ರಗ್ರಹಣ ಆಗುವುದರಿಂದ ಸೂರ್ಯನ ಬೆಳಕು ಚಂದ್ರನ ಮೇಲೆ ನೇರವಾಗಿ ಬೀಳುವುದಿಲ್ಲ. ಭೂಮಿಯ ವಾತಾವರಣವನ್ನು ದಾಟಿಕೊಂಡು ಸ್ವಲ್ಪ ಬೆಳಕು ಮಾತ್ರ ಚಂದ್ರನ ಮೇಲೆ ಬೀಳುತ್ತದೆ. ಹಾಗಾಗಿ, ಚಂದ್ರ ಕೆಂಪಾಗಿ ಕಾಣಿಸುತ್ತಾನೆ. ಪೆಸಿಫಿಕ್ ಪ್ರದೇಶದ ಹಲವು ದೇಶಗಳಲ್ಲಿ ಇದು ಕಾಣಿಸಿಕೊಂಡಿದೆ. 2033ಕ್ಕೆ ಮುಂದಿನ 'ಸೂಪರ್ ರಕ್ತ ಚಂದಿರ' ಕಾಣಿಸಿಕೊಳ್ಳಲಿದ್ದಾನೆ.

ನಾಯಕತ್ವ ಬದಲಾವಣೆಯ 'ಸಂಚಲನ'

ಪ್ರಜಾವಾಣಿ ವಾರ್ತೆ

ಒಂದನೇ ಪುಟದಿಂದ...

ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್, ಶಾಸಕ ಅರವಿಂದ ಬೆಲ್ಲದ ಅವರು ದೆಹಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಜೂನ್ 7 ರಂದು ಶಾಸಕಾಂಗ ಪಕ್ಷದ ಸಭೆ ಕರೆಯಲು ಪಕ್ಷದ ವರಿಷ್ಠರು ಸೂಚಿಸಿರುವುದರಿಂದಾಗಿ ನಾಯಕತ್ವ ಬದಲಾವಣೆ ಚರ್ಚೆ ಮುನ್ನೆಲೆಗೆ ಬಂದಿದೆ.

ಬೆಳವಣಿಗೆ ಸತ್ಯ: 'ನಾಯಕತ್ವ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಸಚಿವರು ಮತ್ತು ಶಾಸಕರು ಭಾಗಿಯಾಗಿದ್ದಾರೆ. ದೆಹಲಿಯಲ್ಲಿ ಕೆಲವು ಸಚಿವರು ಮತ್ತು ಶಾಸಕರು ಇರುವುದು ನಿಜ. ಇನ್ನು ಕೆಲವರು ಪ್ರತ್ಯೇಕ ಸಭೆ ನಡೆಸಿರುವುದು ನನ್ನ ಗಮನಕ್ಕೆ ಬಂದಿದೆ. ನಾಯಕತ್ವ ಬದಲಾವಣೆ ಬಗ್ಗೆ ಬೆಳವಣಿಗೆ ಆಗುತ್ತಿರುವುದಂತೂ ಸತ್ಯ' ಎಂದು ಅಶೋಕ ಹೇಳಿರುವುದು, ಮುಖ್ಯಮಂತ್ರಿ ಬದಲಾವಣೆಯ ವಿದ್ಯಮಾನಕ್ಕೆ ಸಾಕ್ಷಿ ಒದಗಿಸಿದೆ.

ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಎಚ್ಚರಿಕೆಯ ಪ್ರತಿಕ್ರಿಯೆ ನೀಡಿದ್ದು, 'ಯಡಿಯೂರಪ್ಪ ನಮ್ಮ ನಾಯಕರು ಮತ್ತು ಮುಖ್ಯಮಂತ್ರಿ. ಅವರ ನೇತೃತ್ವದಲ್ಲಿ ಕೋವಿಡ್ ನಿರ್ವಹಣೆ ನಡೆಯುತ್ತಿದೆ. ಶಾಸಕರು ದೆಹಲಿಗೆ ಹೋಗಿರುವ ವಿಚಾರ ನನಗೆ ಗೊತ್ತಿಲ್ಲ. ಪ್ರತಿ ಸಲ ಮುಖ್ಯಮಂತ್ರಿ ರೇಸ್ ಸುದ್ದಿಗಳಲ್ಲಿ ನನ್ನ ಹೆಸರು ಬರುತ್ತಿದೆ. ಅದಕ್ಕೆ ಮಹತ್ವ ನೀಡಬೇಕಾಗಿಲ್ಲ' ಎಂದರು.

ಕೇವಲ ಊಹಾಪೋಹ: 'ಮುಖ್ಯಮಂತ್ರಿ ಬದಲಾವಣೆ ಕೇವಲ ಊಹಾಪೋಹ. ಮುಖ್ಯಮಂತ್ರಿ ಬದಲಾವಣೆ ಯಾಕೆ? ಸಮರ್ಥ ವ್ಯಕ್ತಿ ಇರುವಾಗ ಪದೇ ಪದೇ ಈ ಪ್ರಶ್ನೆ ಏಕೆ ಕೇಳಿಬರುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಬಿ.ಎಸ್. ಯಡಿಯೂರಪ್ಪ ಅವರೇ ಅವಧಿ ಪೂರೈಸಲಿದ್ದಾರೆ ಎಂದು ಹೈಕಮಾಂಡ್ ಸ್ಪಷ್ಟವಾಗಿ ಹೇಳಿದೆ' ಎಂದು ಇನ್ನೊಬ್ಬ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅಥಣಿಯಲ್ಲಿ ಹೇಳಿದ್ದಾರೆ.

'ಮುಖ್ಯಮಂತ್ರಿ ಬದಲಾವಣೆ ಕೇವಲ ಗಾಳಿ ಸುದ್ದಿ. ಯಡಿಯೂರಪ್ಪ ಅವರ ನಾಯಕತ್ವದಲ್ಲಿ ಸರ್ಕಾರ ಅವಧಿ ಪೂರೈಸಲಿದೆ. ಯಾವುದೇ ಗೊಂದಲಗಳಿಲ್ಲ' ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ಕುಂದಾಪುರದಲ್ಲಿ ಹೇಳಿದರು.

'ಮುಖ್ಯಮಂತ್ರಿ ಸೀಟು ಖಾಲಿ ಇಲ್ಲ. ಇದ್ದಿದ್ದರೆ ಮಾತನಾಡಬಹುದಿತ್ತು. ಮುಂದಿನ ಚುನಾವಣೆಯನ್ನು ಅವರ ನೇತೃತ್ವದಲ್ಲೇ ಎದುರಿಸುತ್ತೇವೆ' ಎಂದು ಗಣಿ ಸಚಿವ ಮುರುಗೇಶ ನಿರಾಣಿ ಪ್ರತಿಕ್ರಿಯಿಸಿದ್ದಾರೆ.

'ನಾಯಕತ್ವ ಬದಲಾವಣೆ ಸುದ್ದಿ ಊಹಾಪೋಹ. ಅದಕ್ಕೆಲ್ಲ ಪ್ರತಿಕ್ರಿಯೆ ಬೇಕಿಲ್ಲ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಬೆಂಬಲಕ್ಕೆ ನಿಂತ ಶಾಸಕರು: ಶಾಸಕರಾದ ಎಸ್.ಆರ್.ವಿಶ್ವನಾಥ್, ಎಂ.ಪಿ. ರೇಣುಕಾಚಾರ್ಯ, ಮಾಡಾಳ್ ವಿರೂಪಾಕ್ಷಪ್ಪ, ನಿರಂಜನ್ ಕುಮಾರ್ ಮತ್ತು ದೆಹಲಿಯಲ್ಲಿ ಕರ್ನಾಟಕದ ಪ್ರತಿನಿಧಿಯಾಗಿರುವ ಶಂಕರ ಗೌಡ ಪಾಟೀಲ ಅವರು 'ಯಡಿಯೂರಪ್ಪ ಅವಧಿ ಪೂರೈಸಲಿದ್ದಾರೆ' ಎಂದು ಹೇಳಿದ್ದಾರೆ.

ಭೇಟಿಗೆ ಬಿಜೆಪಿ ವರಿಷ್ಠರ ನಕಾರ

ಪ್ರವಾಸೋದ್ಯಮ ಸಚಿವ ಸಿ.ಪಿ.ಯೋಗೇಶ್ವರ್ ಮತ್ತು ಶಾಸಕ ಅರವಿಂದ ಬೆಲ್ಲದ ಅವರನ್ನು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಭೇಟಿಯಾಗಲು ನಿರಾಕರಿಸಿದ ಕಾರಣ ಇಬ್ಬರೂ ರಾಜ್ಯಕ್ಕೆ ವಾಪಾಸಾಗಿದ್ದಾರೆ.

'ನಾಯಕತ್ವ ಬದಲಾವಣೆ ಬಗ್ಗೆ ಚರ್ಚಿಸಲು ಬರುವ ಅಗತ್ಯವಿಲ್ಲ. ಏನೇ ಬದಲಾವಣೆ ಇದ್ದರೂ ಮುಂಚಿತವಾಗಿಯೇ ತಿಳಿಸುತ್ತೇವೆ' ಎಂದು ಅರುಣ್ ಸಿಂಗ್ ಅವರು ಇಬ್ಬರಿಗೂ ಸಂದೇಶ ಮುಟ್ಟಿಸಿದರು ಎಂದು ಮೂಲಗಳು ಹೇಳಿವೆ.

ಭೇಟಿಗೆ ನಡ್ಡಾ ಅವರು ಸಮಯ ನೀಡದ ಕಾರಣ ಸಚಿವ ಮುರುಗೇಶ್ ನಿರಾಣಿ ದೆಹಲಿಗೆ ಪ್ರವಾಸ ರದ್ದುಗೊಳಿಸಿದರು ಎಂದು ಮೂಲಗಳು ತಿಳಿಸಿವೆ.

ಕಪ್ಪು ಶಿಲೀಂಧ್ರ: ಇಬ್ಬರು ಸಾವು

ಮಹಾಲಿಂಗಪುರ: ಕಪ್ಪು ಶಿಲೀಂಧ್ರ ಸೋಂಕು ತಗುಲಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇಲ್ಲಿನ ಇಬ್ಬರು ಬುಧವಾರ ಮೃತರಾಗಿದ್ದಾರೆ.

ಮಹಾಲಿಂಗಪುರದ ಕೆಂಗೇರಿಮಡ್ಡಿ 36 ವರ್ಷದ ಮಹಿಳೆ ಕೋವಿಡ್‌ನಿಂದ ಗುಣಮುಖರಾಗಿದ್ದರು. ನಂತರ ಕಣ್ಣಿನಲ್ಲಿ ನೋವು ಕಾಣಿಸಿಕೊಂಡು ಕಪ್ಪು ಶಿಲೀಂಧ್ರ ಸೋಂಕು ದೃಢಪಟ್ಟಿದ್ದರಿಂದ ಮೇ 17ರಂದು ಕಿಮ್ಸ್‌ಗೆ ದಾಖಲಾಗಿದ್ದರು.

ಸಮೀಪದ ಮಾರಾಪುರ ಗ್ರಾಮದ 52 ವರ್ಷದ ಪುರುಷ ಕೋವಿಡ್‌ನಿಂದ ಗುಣಮುಖರಾಗಿ ಹೋಂ ಐಸೋಲೇಷನ್‌ನಲ್ಲಿದ್ದರು. ಕಪ್ಪು ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದರು.

ಕಪ್ಪುಶಿಲೀಂಧ್ರ: ರಾಜ್ಯಕ್ಕೆ 1,221 ವಯಲ್ಸ್ ಔಷಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಸೋಂಕಿನ ಚಿಕಿತ್ಸೆಗೆ ರಾಜ್ಯಕ್ಕೆ ಕೇಂದ್ರ ಸರ್ಕಾರ ಬುಧವಾರ 1,221 ವಯಲ್ಸ್ ಆ್ಯಂಫೋಟೆರಿಸಿನ್ ಔಷಧ ಹಂಚಿಕೆ ಮಾಡಿದೆ.

ಇಡೀ ದೇಶದಲ್ಲಿ ಮಂಗಳವಾರ ರಾತ್ರಿ 9.30ರ ವೇಳೆಯ ಮಾಹಿತಿ ಪ್ರಕಾರ 11,717 ಕಪ್ಪು ಶಿಲೀಂಧ್ರ ಪ್ರಕರಣಗಳು ಪತ್ತೆಯಾಗಿದೆ. ಈ ಮಾಹಿತಿ ಆಧರಿಸಿ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಒಟ್ಟು 29,250 ವಯಲ್ಸ್ ಕೇಂದ್ರ ಸರ್ಕಾರ ಹಂಚಿಕೆ ಮಾಡಿದೆ. ಸೋಂಕು ಪ್ರಕರಣಗಳನ್ನು ಪರಿಗಣಿಸಿ, ಈ ಔಷಧವನ್ನು ಹಂಚಿಕೆ ಮಾಡಲಾಗಿದೆ ಎಂದು ಔಷಧ ಖಾತೆಯನ್ನೂ ಹೊಂದಿರುವ ಕೇಂದ್ರ ರಾಸಾಯನಿಕ ಸಚಿವ ಡಿ.ವಿ. ಸದಾನಂದ ಗೌಡ ಟ್ವೀಟ್ ಮಾಡಿದ್ದಾರೆ. ಅತೀ ಹೆಚ್ಚು ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳು ಗುಜರಾತ್ ರಾಜ್ಯದಲ್ಲಿ 2,859 ಪತ್ತೆಯಾಗಿದೆ. ಆ ರಾಜ್ಯಕ್ಕೆ 7,260 ವಯಲ್ಸ್ ಹಂಚಿಕೆ ಮಾಡಲಾಗಿದೆ.

ಕಡಿಮೆಯಾದರೂ ಕೊರೊನಾ ಏರಲಿದೆ ಮರಣ ಪ್ರಮಾಣ


ಮುಂದಿನ ಎರಡು ವಾರದಲ್ಲಿ ಏರಿಕೆ ಸಾಧ್ಯತೆ: ವೈದ್ಯಕೀಯ ತಜ್ಞರ ಕಳವಳ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿನ ಕೊರೊನಾ ಸೋಂಕಿತರಲ್ಲಿ ಸದ್ಯ ಮೂರು ಸಾವಿರಕ್ಕೂ ಅಧಿಕ ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಹತ್ತು ಸಾವಿರಕ್ಕೂ ಅಧಿಕ ಮಂದಿ ವೈದ್ಯಕೀಯ ಆಮ್ಲಜನಕದ ಸಂಪರ್ಕದಲ್ಲಿದ್ದಾರೆ. ಇದರಿಂದಾಗಿ ಇನ್ನೂ ಎರಡು ವಾರ ಮರಣ ಪ್ರಮಾಣ ದರ ಏರುಗತಿಯಲ್ಲಿಯೇ ಇರಲಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷಾಂತ್ಯಕ್ಕೆ ನಿಯಂತ್ರಣಕ್ಕೆ ಬಂದಿದ್ದ ಕೋವಿಡ್, ಎರಡನೇ ಅಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾವು–ನೋವಿಗೆ ಕಾರಣವಾಗಿದೆ. 2020ರ ಮಾ.8ರಂದು ಕಾಣಿಸಿಕೊಂಡಿದ್ದ ಸೋಂಕು, ಜೂನ್ ಬಳಿಕ ವೇಗ ಪಡೆದುಕೊಂಡಿತ್ತು. ಅಕ್ಟೋಬರ್ ಬಳಿಕ ಸೋಂಕು ದೃಢ ಪ್ರಮಾಣ ದರ ಹಾಗೂ ಮರಣ ಪ್ರಮಾಣ ದರ ಇಳಿಮುಖ ಕಂಡಿತ್ತು. ಡಿಸೆಂಬರ್ ಅಂತ್ಯಕ್ಕೆ ಸೋಂಕು ದೃಢ ಪ್ರಮಾಣ ಶೇ 0.82 ಹಾಗೂ ಮರಣ ಪ್ರಮಾಣ ಶೇ 0.94ರಷ್ಟಿತ್ತು. ಆ ವೇಳೆಗೆ 12,090 ಮಂದಿ ಮೃತಪಟ್ಟಿದ್ದರು. ಒಟ್ಟು ಸೋಂಕಿತರ ಸಂಖ್ಯೆ 9.19 ಲಕ್ಷದಷ್ಟಿತ್ತು.


ಮೊದಲ ಅಲೆಯಲ್ಲಿ 60 ವರ್ಷ ಮೇಲ್ಪಟ್ಟವರು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗಿ, ಅಸ್ವಸ್ಥರಾಗಿದ್ದರು. ಎರಡನೇ ಅಲೆಯಲ್ಲಿ ಮಧ್ಯಮ ವಯಸ್ಕರು ಅಧಿಕ ಸಂಖ್ಯೆಯಲ್ಲಿದ್ದಾರೆ.ಈಗ ಮೃತಪಡುತ್ತಿರುವವರಲ್ಲಿ ಅರ್ಧದಷ್ಟು ಮಂದಿ 50 ವರ್ಷದೊಳಗಿನವರಾಗಿದ್ದಾರೆ. ತಡವಾಗಿ ಆಸ್ಪತ್ರೆ ಸೇರುವಿಕೆ, ಹಾಸಿಗೆ ಸಿಗದೆಯೇ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ, ಆಮ್ಲಜನಕ ಪೂರೈಕೆಯಲ್ಲಿನ ವ್ಯತ್ಯಯ ಸೇರಿದಂತೆ ವಿವಿಧ ಕಾರಣಗಳಿಂದ ಏಪ್ರಿಲ್ ಬಳಿಕ ಕೋವಿಡ್‌ಗೆ ಮರಣ ಹೊಂದರುವವರ ಸಂಖ್ಯೆ ಗಣನೀಯ ಏರುಗತಿ ಪಡೆದಿದೆ.



> **ಜೂನ್ ಮೊದಲ ಅಥವಾ ಎರಡನೇ ವಾರದಲ್ಲಿ ಸೋಂಕು ದೃಢ ಪ್ರಮಾಣ ಹಾಗೂ ಮರಣ ಪ್ರಮಾಣ ದರ ಕಡಿಮೆ ಆಗಲಿದೆ. ಆದರೆ, ಈ ವರ್ಷ ಪೂರ್ತಿ ಮುನ್ನೆಚ್ಚರಿಕೆ ವಹಿಸಬೇಕು**
> **ಡಾ.ಸಿ.ಎನ್. ಮಂಜುನಾಥ್,**
> ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಈ ವರ್ಷ ಐದು ತಿಂಗಳೊಳಗೆ 14,309 ಮಂದಿ ಸಾವಿಗೀಡಾಗಿದ್ದಾರೆ. ಇವರಲ್ಲಿ ಬಹುತೇಕರು ತೀವ್ರ ಉಸಿರಾಟದ ಸಮಸ್ಯೆ ಎದುರಿಸಿ, ಆಮ್ಲಜನಕ ಪ್ರಮಾಣ ಕುಸಿತು ಕಂಡು ಮೃತಪಟ್ಟವರಾಗಿದ್ದಾರೆ. ಮೇ ತಿಂಗಳಲ್ಲಿಯೇ (ಮೇ 25ರವರೆಗೆ) 10,876 ಮಂದಿ ಮರಣ ಹೊಂದಿದ್ದಾರೆ. ಮರಣ ಪ್ರಮಾಣ ದರವು ಶೇ 3ರ ಗಡಿಗೆ ಸಮೀಪಿಸಿದೆ.

ಚಿಕಿತ್ಸೆ ವಿಳಂಬದ್ದೇ ಸಮಸ್ಯೆ: 'ಎರಡು ಮೂರು ವಾರಗಳ ಹಿಂದಿನ ಪ್ರಕರಣಗಳಲ್ಲಿ ಗಂಭೀರವಾಗಿ ಅಸ್ವಸ್ಥರಾದವರು ಐಸಿಯು ದಾಖಲಾತಿ ಪಡೆದು, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ ಕೆಲವರು ಚಿಕಿತ್ಸೆಗೆ ಸ್ಪಂದಿಸದೆಯೇ ಮೃತಪಡುತ್ತಿದ್ದಾರೆ. ಅದೇ ರೀತಿ, ಮನೆ ಆರೈಕೆಗೆ ಒಳಗಾದವರು ಕೂಡ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಶೇ 80 ಅಥವಾ ಅದಕ್ಕಿಂತ ಕೆಳಗೆ ಇಳಿಕೆಯಾದಾಗ ಆಸ್ಪತ್ರೆಗೆ ಬರುತ್ತಿದ್ದಾರೆ. ಇದರಿಂದ ಕೂಡ ಮರಣ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ' ಎಂಬುದು ವೈದ್ಯಕೀಯ ತಜ್ಞರ ಅಭಿಮತ.



> **ಕೆಲ ದಿನಗಳ ಹಿಂದೆ ಸೋಂಕಿತರಾಗಿ, ಐಸಿಯು ದಾಖಲಾದವರು ಹೆಚ್ಚಿನ ಸಂಖ್ಯೆಯಲ್ಲಿ ಮೃತಪಡುತ್ತಿದ್ದಾರೆ. ವಾರದ ಬಳಿಕ ಮರಣ ಪ್ರಮಾಣ ದರ ಕೂಡ ಇಳಿಕೆಯಾಗಲಿದೆ**
> **ಡಾ.ಸಿ. ನಾಗರಾಜ್,** ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ

'ಸೋಂಕು ದೃಢ ಪ್ರಮಾಣ ಕಡಿಮೆಯಾದರೂ ಇನ್ನೂ 8ರಿಂದ 10 ದಿನಗಳು ಮರಣ ಪ್ರಮಾಣದರ ಅಧಿಕ ಇರಲಿದೆ. ಮೂರು ವಾರದ ಹಿಂದೆ ಸೋಂಕಿತರಾಗಿ, ಐಸಿಯುನಲ್ಲಿ ಇರುವವರಲ್ಲಿ ಕೆಲವರು ಮೃತಪಡುತ್ತಿದ್ದಾರೆ. ಕೋವಿಡ್‌ನಂತಹ ಕಾಯಿಲೆಗಳಲ್ಲಿ ಸೋಂಕು ದೃಢ ಪ್ರಮಾಣವು ಪ್ರಾರಂಭದಲ್ಲಿ ಜಾಸ್ತಿ ಇರಲಿದ್ದು, ಮರಣ ಪ್ರಮಾಣ ದರ ಕಡಿಮೆ ಇರಲಿದೆ. ಬಳಿಕ ಸೋಂಕು ದೃಢ ಪ್ರಮಾಣ ಇಳಿಕೆಯಾಗಿ, ಮರಣ ಪ್ರಮಾಣ ದರ ಹೆಚ್ಚಳವಾಗುತ್ತದೆ. ಬಳಿಕ ಎರಡೂ ಕಡಿಮೆ ಆಗಲಿದೆ' ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಅಧಿಕ ಮರಣ ಪ್ರಮಾಣ ದರವಿರುವ ಜಿಲ್ಲೆಗಳು (ಕಳೆದ ಒಂದು ವಾರದ ಮರಣ ಪ್ರಕರಣಗಳನ್ನು ಆಧರಿಸಿ)

ಜಿಲ್ಲೆ	ಮರಣ ಪ್ರಮಾಣ ದರ %
ಬೆಂಗಳೂರು ಗ್ರಾ.	4.49
ಬೀದರ್	3.73
ಕಲಬುರ್ಗಿ	3.29
ಬೆಂಗಳೂರು ನಗರ	2.86
ಹಾವೇರಿ	2.65
ಶಿವಮೊಗ್ಗ	2.07
ಕೊಪ್ಪಳ	1.76
ಬಳ್ಳಾರಿ	1.51
ಚಾಮರಾಜನಗರ	1.48
ಉತ್ತರ ಕನ್ನಡ	1.47

ರಾಜ್ಯದಲ್ಲಿ ಮರಣ ಪ್ರಮಾಣ ದರ ಏರಿಳಿತ

ದಿನಾಂಕ	ಮರಣ ಪ್ರಮಾಣ ದರ (ಶೇ)
ಅ.26, 2020	1.34
ನ.30	1.30
ಡಿ.31, 2020	0.94
ಜ.31, 2020	0.76
ಫೆ.28	0.95
ಮಾ.31	0.61
ಏ.30	0.44
ಮೇ 15	0.83
ಮೇ 25	2.58

ಕೋವಿಡ್ 3ನೇ ಅಲೆ: ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ ಸಮಿತಿ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನ ಸಂಭಾವ್ಯ ಮೂರನೇ ಅಲೆ ಎದುರಿಸಲು ಮತ್ತು ಸೋಂಕು ನಿಯಂತ್ರಿಸುವ ಸಂಬಂಧ ಸಲಹೆ ನೀಡಲು ಹೃದ್ರೋಗ ತಜ್ಞ ಡಾ. ದೇವಿ ಪ್ರಸಾದ್ ಶೆಟ್ಟಿ ನೇತೃತ್ವದಲ್ಲಿ ಮಕ್ಕಳ ತಜ್ಞರನ್ನು ಒಳಗೊಂಡ 13 ಸದಸ್ಯರ ಉನ್ನತಮಟ್ಟದ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸಿದೆ.


ಸಮಿತಿಯಲ್ಲಿ ನಿಮ್ಹಾನ್ಸ್ ನಿರ್ದೇಶಕ ಡಾ. ಸತೀಶ್ ಗಿರಿಮಾಜಿ, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಜಿ.ವಿ. ಬಸವರಾಜ್ , ವಿಶ್ವ ಆರೋಗ್ಯ ಸಂಸ್ಥೆಯ ಪ್ರಾದೇಶಿಕ ತಂಡದ ನಾಯಕ ಡಾ. ಆಶೀಷ್ ಸತಪತಿ, ಎಚ್‌ಸಿಜಿ ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ. ಅಜಯ್‌ಕುಮಾರ್, ಮಕ್ಕಳ ತಜ್ಞರಾದ ಡಾ. ಅರವಿಂದ ಶೆಣೈ, ಡಾ. ರಘುನಾಥ್ ಯು (ಸಾಗರ್ ಆಸ್ಪತ್ರೆ), ಡಾ. ಜಗದೀಶ್ ಚಿನ್ನಪ್ಪ (ಮಣಿಪಾಲ್ ಆಸ್ಪತ್ರೆ). ಡಾ. ಶ್ರೀಕಾಂತ್ ಜೆ.ಟಿ (ಆಸ್ಟರ್ ಆಸ್ಪತ್ರೆ), ಡಾ.ವೈ.ಸಿ. ಯೋಗಾನಂದ ರೆಡ್ಡಿ (ಐಎಂಎ ಮಾಜಿ ಅಧ್ಯಕ್ಷ), ಡಾ. ವಿನೋದ್ ಎಚ್. ರಟಗೇರಿ (ಹುಬ್ಬಳ್ಳಿಯ ಕಿಮ್ಸ್), ಸಾಂಕ್ರಾಮಿಕ ರೋಗ ತಜ್ಞ ಡಾ. ಪ್ರೇಮ್ ಕೆ. ಮೋನಿ (ಸೇಂಟ್ ಜೋನ್ಸ್ ಆಸ್ಪತ್ರೆ) ಸದಸ್ಯರಾಗಿದ್ದಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕ ಡಾ.ಪಿ.ಜಿ. ಗಿರೀಶ್ ಅವರು ಸಮಿತಿಗೆ ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.

ರಾಮ್‌ದೇವ್ ವಿರುದ್ಧ ಮಾನನಷ್ಟ ಮೊಕದ್ದಮೆ

ಡೆಹ್ರಾಡೂನ್ (ಪಿಟಿಐ): ಯೋಗಗುರು ಬಾಬಾ ರಾಮ್‌ದೇವ್ ಹೇಳಿಕೆ ವಿರುದ್ಧ ಭಾರತೀಯ ವೈದ್ಯಕೀಯ ಸಂಘ (ಐಎಂಎ) ₹ 1,000 ಕೋಟಿ ಮಾನನಷ್ಟ ಮೊಕದ್ದಮೆ ನೋಟಿಸ್ ಜಾರಿ ಮಾಡಿದೆ.

'ಅಲೋಪಥಿಯೊಂದು ಮೂರ್ಖ ವಿಜ್ಞಾನ' ಎಂಬ ಹೇಳಿಕೆಗೆ ಕ್ಷಮೆ ಯಾಚಿಸಿ ಸಾಮಾಜಿಕ ತಾಣಗಳಲ್ಲಿ ಪೋಸ್ಟ್ ಮಾಡಬೇಕು. 15 ದಿನಗಳ ಒಳಗೆ ಲಿಖಿತ ರೂಪದಲ್ಲಿಯೂ ಅಲೋಪಥಿ ವೈದ್ಯರ ಕ್ಷಮೆ ಕೇಳಬೇಕು ಎಂದು ಐಎಂಎ ಆಗ್ರಹಿಸಿದೆ.

ವೇಟ್‌ಲಿಫ್ಟಿಂಗ್: ಅಚಿಂತಗೆ ಬೆಳ್ಳಿ


ಅಚಿಂತ ಶೆವುಲಿ

ತಾಷ್ಕೆಂಟ್ (ಪಿಟಿಐ): ವೈಯಕ್ತಿಕ ಶ್ರೇಷ್ಠ ಸಾಮರ್ಥ್ಯ ತೋರಿದ ಭಾರತದ ಅಚಿಂತ ಶೆವುಲಿ ಇಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಬೆಳ್ಳಿ ಪದಕಕ್ಕೆ ಮುತ್ತಿಟ್ಟಿದ್ದಾರೆ.

73 ಕೆಜಿ ವಿಭಾಗದಲ್ಲಿ ಭಾಗವಹಿಸಿದ್ದ 19 ವರ್ಷದ ಅಚಿಂತ ಒಟ್ಟು 313 ಕೆಜಿ (ಸ್ನ್ಯಾಚ್‌ನಲ್ಲಿ 141 ಮತ್ತು ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ 172) ಭಾರ ಎತ್ತಿದರು.

ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತರಾಗಿರುವ ಅಚಿಂತ, ಕಳೆದ ತಿಂಗಳು ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ 309 ಕೆಜಿ (139 +170) ತೂಕ ಎತ್ತಿದ್ದರು. ಇದು ಅವರ ಇದುವರೆಗಿನ ಶ್ರೇಷ್ಠ ಸಾಧನೆಯಾಗಿತ್ತು.

ಇಂಡೊನೇಷ್ಯಾದ ಜುನೈನ್‌ಶಾಹ್ ರಿಜ್ಕಿ ಅವರು 349 ಕೆಜಿ (155+194) ಸಾಧನೆ ಮಾಡುವ ಮೂಲಕ ಚಿನ್ನ ಗೆದ್ದರು. ಅಲ್ಲದೆ ಅವರು ಎಲ್ಲ ಮೂರೂ ವಿಭಾಗಗಳಲ್ಲೂ ಇದ್ದ ಜೂನಿಯರ್ ವಿಶ್ವದಾಖಲೆ ಮುರಿದರು. ರಷ್ಯಾದ ಸೆರೊಬಿಯನ್ ಗೆವೊರ್‌ಜಿ (ಒಟ್ಟು 308 ಕೆಜಿ, 143+165) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಕ್ರಿಕೆಟ್: ಬಾಂಗ್ಲಾ ತಂಡಕ್ಕೆ ಸರಣಿ

ಢಾಕಾ (ಎಪಿ): ಮುಷ್ಫಿಕುರ್ ರಹೀಂ ಗಳಿಸಿದ ಶತಕದ (125) ನೆರವಿನಿಂದ ಶ್ರೀಲಂಕಾ ತಂಡವನ್ನು103 ರನ್‌ಗಳಿಂದ ಮಣಿಸಿದ ಬಾಂಗ್ಲಾದೇಶ, ಏಕದಿನ ಕ್ರಿಕೆಟ್ ಸರಣಿಯನ್ನು ತನ್ನದಾಗಿಸಿಕೊಂಡಿತು. ಬುಧವಾರ ನಡೆದ 2ನೇ ಪಂದ್ಯದಲ್ಲಿ ಆತಿಥೇಯ ತಂಡ ಡಕ್ವರ್ಥ್ ಲೂಯಿಸ್ ನಿಯಮದಡಿ ಗೆದ್ದು ಶ್ರೀಲಂಕಾ ಎದುರು ಮೊದಲ ಬಾರಿ ಸರಣಿ ಜಯದ ಸಿಹಿ ಸವಿಯಿತು.

ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ಭಾನುವಾರ ಬಾಂಗ್ಲಾ 33 ರನ್‌ಗಳಿಂದ ಗೆದ್ದಿತ್ತು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ: 48.1 ಓವರ್‌ಗಳಲ್ಲಿ 246 (ಮುಷ್ಫಿಕುರ್ ರಹೀಂ 125, ಮುಹಮದುಲ್ಲಾ 41; ದುಷ್ಮಂತ ಚಮೀರ 44ಕ್ಕೆ 3, ಲಕ್ಷಣ ಸಂಡಕನ್ 54ಕ್ಕೆ 3). **ಶ್ರೀಲಂಕಾ:** 40 ಓವರ್‌ಗಳಲ್ಲಿ 9ಕ್ಕೆ 141 (ಧನುಷ್ಕ ಗುಣತಿಲಕ 24, ಪಥುಮ್ ನಿಸ್ಸಂಕ 20; ಮುಸ್ತಫಿಜುರ್ ರಹಮಾನ್ 16ಕ್ಕೆ 3, ಮೆಹಿದಿ ಹಸನ್ 28ಕ್ಕೆ 3). ಫಲಿತಾಂಶ: ಬಾಂಗ್ಲಾ ತಂಡಕ್ಕೆ ಡಕ್ವರ್ಥ್ ಲೂಯಿಸ್ ನಿಯಮದಡಿ 103 ರನ್‌ಗಳ ಜಯ.

ಏಷ್ಯನ್ ಚಾಂಪಿಯನ್‌ಷಿಪ್: ಮುಂದುವರಿದ ಭಾರತದ ಬಾಕ್ಸರ್‌ಗಳ ಪ್ರಾಬಲ್ಯ

ನಾಲ್ಕರ ಘಟ್ಟಕ್ಕೆ ಸಿಮ್ರನ್‌ಜೀತ್

ದುಬೈ (ಪಿಟಿಐ): ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಬಾಕ್ಸರ್‌ಗಳು ಅದ್ಭುತ ಸಾಮರ್ಥ್ಯ ಮುಂದುವರಿಸಿದ್ದಾರೆ. ಹಾಲಿ ಚಾಂಪಿಯನ್ ಅಮಿತ್ ಪಂಘಲ್, ಸಿಮ್ರನ್‌ಜೀತ್ ಕೌರ್, ವಿಕಾಸ್ ಕೃಷ್ಣನ್ ಹಾಗೂ ವರಿಂದರ್ ಸಿಂಗ್ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಬುಧವಾರ ನಡೆದ 52 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಪಂಘಲ್ 3–2ರಿಂದ ಮಂಗೋಲಿಯಾದ ಖಾರ್ಖು ಎಂಕ್‌ಮಂದಾಕ್ ಅವರನ್ನು ಪರಾಭವಗೊಳಿಸಿದರು. ಮಂಗೋಲಿಯಾ ಆಟಗಾರ ಭಾರಿ ಪೈಪೋಟಿ ನೀಡಿದರೂ ಪಂಘಲ್ ಗೆಲುವನ್ನು ತಪ್ಪಿಸಲಾಗಲಿಲ್ಲ.

ಎಂಟರಘಟ್ಟದಲ್ಲಿ ವಿಕಾಸ್ (69 ಕೆಜಿ) ಅವರು 4–1ರಿಂದ ಇರಾನ್‌ನ ಮೊಸ್ಲೆಮ್ ಮೊಗಸೌದಿ ಮಾಲ್ ಅಮಿರ್ ಅವರಿಗೆ ಸೋಲಿನ ಪಂಚ್ ನೀಡಿದರೆ, ವರಿಂದರ್ ಸಿಂಗ್ (60 ಕೆಜಿ) 5–0ಯಿಂದ ಫಿಲಿಪಿನೊ ಜೆರೆ ಸಾಮ್ಯುಯೆಲ್ ಡೆಲಾ ಕ್ರೂಜ್ ಎದುರು ಜಯದ ನಗೆ ಬೀರಿದರು

ಮಹಿಳೆಯರ 60 ಕೆಜಿ ವಿಭಾಗದಲ್ಲಿ ಮಂಗಳವಾರ ಸಿಮ್ರನ್‌ಜೀತ್ ಅವರು 4–1ರಿಂದ ಉಜ್ಬೆಕಿಸ್ತಾನದ ರಾಯಖೊನಾ ಕೋದಿರೋವಾ ಅವರನ್ನು ಸೋಲಿಸಿದ್ದರು. ಸೆಮಿಫೈನಲ್ ಬೌಟ್‌ನಲ್ಲಿ ಅವರಿಗೆ ಕಜಕಸ್ತಾನದ ರಿಮ್ಮಾ ವೊಲೊಸೆಂಕೊ ಸವಾಲು ಎದುರಾಗಿದೆ.


ಜಯದ ಸಂತಸದಲ್ಲಿ ಸಿಮ್ರನ್‌ಜೀತ್ ಕೌರ್ (ಬಲ)– ಟ್ವಿಟರ್ ಚಿತ್ರ


ಅಮಿತ್ ಪಂಘಲ್

ಸಂಜೀತ್ (ಪುರುಷರ 91 ಕೆಜಿ ವಿಭಾಗ), ಸಾಕ್ಷಿ (ಮಹಿಳೆಯರ 54 ಕೆಜಿ ವಿಭಾಗ), ಜೈಸ್ಮಿನ್ (ಮಹಿಳೆಯರ 57 ಕೆಜಿ) ಕೂಡ ಮಂಗಳವಾರ ನಾಲ್ಕರ ಘಟ್ಟ ತಲುಪಿದರು.

ಇಂಡಿಯಾ ಓಪನ್ ಚಿನ್ನ ಪದಕ ವಿಜೇತ ಸಂಜೀತ್ ಅವರು ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ 5–0ಯಿಂದ ಜಾಸುರ್ ಒರ್ಬೊನೊಯ್ ಸವಾಲು ಮೀರಿದರು. ಮುಂದಿನ ಬೌಟ್‌ನಲ್ಲಿ ಅವರು ಉಜ್ಬೆಕಿಸ್ತಾನದ ಸಂಜಾರ್ ತುರ್ಸನೊವ್ ಅವರನ್ನು ಎದುರಿಸುವರು. ಸಾಕ್ಷಿ 5–0ಯಿಂದ ತಜಿಕಿಸ್ತಾನದ ರುಹಾಫ್ಜೊ ಹಗಜರೊವಾ ಅವರನ್ನು ಮಣಿಸಿದ್ದು, ನಾಲ್ಕರ ಘಟ್ಟದಲ್ಲಿ ಕಜಕಸ್ತಾನ ದಿನಾ ಜೊಲೊಮನ್ ಅವರಿಗೆ ಮುಖಾಮುಖಿಯಾಗಲಿದ್ದಾರೆ.

ಜೈಸ್ಮಿನ್ 4–1ರಿಂದ ಮಂಗೋಲಿಯಾದ ಓಯುಂಟ್ಸೆತ್ಸೆಗ್ ಯೇಸುಜೆನ್ ಅವರ ಸವಾಲು ಮೀರಿದ್ದು, ಮುಂದಿನ ಹಣಾಹಣಿಯಲ್ಲಿ ಕಜಕಸ್ತಾನದ ವ್ಲಾಡಿಸ್ಲಾವಾ ಕುಖ್ತಾ ಅವರನ್ನು ಎದುರಿಸುವರು.

ಸುದ್ದಿ 2 ನಿಮಿಷ

ಅಥ್ಲೀಟ್‌ಗಳಿಗೆ ಲಸಿಕೆ: ಮಾಹಿತಿ ಕೇಳಿದ ಐಒಎ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ತೆರಳಲು ಸಿದ್ಧರಾಗಿರುವ ಎಷ್ಟು ಅಥ್ಲೀಟ್‌ಗಳು ಮತ್ತು ಅಧಿಕಾರಿಗಳು ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದಾರೆ ಎಂಬುದರ ಕುರಿತು ವಿವರ ನೀಡುವಂತೆ ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ರಾಷ್ಟ್ರೀಯ ಫೆಡರೇಷನ್‌ಗಳನ್ನು ಸೂಚಿಸಿದೆ.

ಅಥ್ಲೀಟ್‌ಗಳು ಲಸಿಕೆ ಪಡೆದುಕೊಂಡ ಮಾಹಿತಿಯನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಗೆ (ಐಒಸಿ) ಸಲ್ಲಿಸಬೇಕಾಗಿದೆಯೆಂದು ಐಒಎ ಅಧ್ಯಕ್ಷ ನರಿಂದರ್ ಬಾತ್ರಾ ಮತ್ತು ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ತಿಳಿಸಿದ್ದಾರೆ.



ಭಾರತದ 90ಕ್ಕೂ ಹೆಚ್ಚು ಕ್ರೀಡಾಪಟುಗಳು ಇದುವರೆಗೆ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಲಸಿಕೆ ಪಡೆದ ಅಥ್ಲೀಟ್‌ಗಳ ಕುರಿತು ಎಂಟು ಪ್ರಶ್ನೆಗಳಿಗೆ ಉತ್ತರಿಸುವಂತೆ ಐಒಎ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ಸೂಚಿಸಿದೆ. ಲಸಿಕೆ ತೆಗೆದುಕೊಂಡಿರುವ ಅಥ್ಲೀಟ್‌ಗಳು ಮತ್ತು ಅಧಿಕಾರಿಗಳ ಸಂಖ್ಯೆ, ಮೊದಲ ಡೋಸ್ ಮತ್ತು ಎರಡನೇ ಡೋಸ್ ಪಡೆದ ದಿನಗಳು ಮತ್ತು ಯಾವ ಲಸಿಕೆ ಎಂಬುದರ ಕುರಿತು ವಿವರ ನೀಡುವಂತೆ ಕೇಳಿದೆ.

ಟೋಕಿಯೊ ಕೂಟಕ್ಕೆ ತೆರಳುವ ಮೊದಲು ಕೋವಿಡ್ ತಡೆ ನಿಯಮಾವಳಿಗಳ ಕುರಿತು ಅಥ್ಲೀಟ್‌ಗಳಿಗೆ ಅರಿವು ಮೂಡಿಸುವಂತೆಯೂ ಐಒಎ ಫೆಡರೇಷನ್‌ಗಳಿಗೆ ಸೂಚನೆ ನೀಡಿದೆ.

ಭಾರಿ ಮೊತ್ತದ ದಂಡ ತೆತ್ತ ಉಮರ್ ಅಕ್ಮಲ್

ಕರಾಚಿ (ಪಿಟಿಐ): ಭ್ರಷ್ಟಾಚಾರ ತಡೆ ಪುನಶ್ಚೇತನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ಪಾಕಿಸ್ತಾನ ಕ್ರಿಕೆಟಿಗ ಉಮರ್ ಅಕ್ಮಲ್ ಅವರು ಪಾಕ್ ಕ್ರಿಕೆಟ್ ಮಂಡಳಿಗೆ ₹ 45 ಲಕ್ಷ ದಂಡ ಕಟ್ಟಿದ್ದಾರೆ.

‘ಭ್ರಷ್ಟಾಚಾರ ನಿಗ್ರಹ ಘಟಕದ ಪುನಶ್ಚೇತನದ ಕಾರ್ಯಕ್ರಮದಲ್ಲಿ ಭಾಗಿಯಾಗಲು ಅಕ್ಮಲ್ ಅವರು ದಂಡ ಕಟ್ಟಿದ್ದಾರೆ. ಈಗ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಪುನಶ್ಚೇತನ ಕಾರ್ಯಕ್ರಮದಲ್ಲಿ ಅವರ ಸಾಧನೆಯು ತೃಪ್ತಿಕರವಾಗಿದ್ದರೆ ಕ್ರಿಕೆಟ್ ಮೈದಾನಕ್ಕೆ ಮರಳುವ ಅವಕಾಶ ಗಿಟ್ಟಿಸಬಹುದು. ಆದರೆ ಅದಕ್ಕೆ ಇನ್ನೂ ಬಹಳ ಸಮಯ ಇದೆ’ ಎಂದೂ ಮೂಲಗಳು ತಿಳಿಸಿವೆ.

ಭ್ರಷ್ಟಾಚಾರ ತಡೆ ನಿಯಮ ಉಲ್ಲಂಘಿಸಿದ್ದಕ್ಕಾಗಿ ಅಕ್ಮಲ್ ಅವರ ಮೇಲೆ 2020ರ ಫೆಬ್ರುವರಿಯಿಂದ ಕ್ರಿಕೆಟ್ ಆಡದಂತೆ ನಿಷೇಧ ಹೇರಲಾಗಿತ್ತು.

ಟೆನಿಸ್: ಸೋತ ಅಂಕಿತಾ ರೈನಾ

ಪ್ಯಾರಿಸ್ (ಪಿಟಿಐ): ಭಾರತದ ಅಂಕಿತಾ ರೈನಾ ಅವರು ಫ್ರೆಂಚ್ ಓಪನ್ ಟೆನಿಸ್ ಅರ್ಹತಾ ಟೂರ್ನಿಯಿಂದ ನಿರ್ಗಮಿಸಿದ್ದಾರೆ. ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬುಧವಾರ ಎರಡನೇ ಸುತ್ತಿನ ಪಂದ್ಯದಲ್ಲೂ ಅವರು ನಿರಾಸೆ ಅನುಭವಿಸಿದರು.

ಜರ್ಮನಿಯ ಗ್ರೀಟ್ ಮಿನ್ನೆನ್ ಎದುರು ಕಣಕ್ಕಿಳಿದಿದ್ದ ಅಂಕಿತಾ, ಪಂದ್ಯದಲ್ಲಿ ಕೇವಲ ಎರಡು ಗೇಮ್‌ಗಳನ್ನು ಮಾತ್ರ ಗೆಲ್ಲುವಲ್ಲಿ ಸಾಧ್ಯವಾಯಿತು. ಒಂದು ತಾಸು 21 ನಿಮಿಷಗಳಲ್ಲಿ ಮುಗಿದ ಹಣಾಹಣಿಯಲ್ಲಿ ಭಾರತದ ಆಟಗಾರ್ತಿ 2-6, 0–6ರಿಂದ ಸೋಲನುಭವಿಸಿದರು.

ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಸಿಂಗಲ್ಸ್ ವಿಭಾಗದ ಮುಖ್ಯ ಸುತ್ತು ಪ್ರವೇಶಿಸಲು ಅಂಕಿತಾ ಅವರು ನಡೆಸಿದ ಏಳನೇ ಪ್ರಯತ್ನ ಇದಾಗಿತ್ತು.

ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ರಾಮಕುಮಾರ್ ರಾಮನಾಥನ್ ಕೂಡ ಸೋಲು ಕಂಡರು. ಅವರು 1–6, 2–6ರಿಂದ ಉಜ್ಬೆಕಿಸ್ತಾನದ ಡೆನಿಸ್ ಇಸ್ತೊಮಿನ್ ಎದುರು ಸೋತರು. ಸದ್ಯ ಸುಮಿತ್ ನಗಾಲ್ ಮಾತ್ರ ಸ್ಪರ್ಧೆಯಲ್ಲಿ ಉಳಿದುಕೊಂಡಿದ್ದಾರೆ.

ರ‍್ಯಾಂಕಿಂಗ್: 2ನೇ ಸ್ಥಾನದಲ್ಲಿ ಕೊಹ್ಲಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಮತ್ತು ಉಪನಾಯಕ ರೋಹಿತ್ ಶರ್ಮಾ ಅವರು ಐಸಿಸಿ ಏಕದಿನ ರ‍್ಯಾಂಕಿಂಗ್ ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳನ್ನು ಕಾಯ್ದುಕೊಂಡಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಜಸ್‌ಪ್ರೀತ್ ಬೂಮ್ರಾ 5ನೇ ಕ್ರಮಾಂಕದಲ್ಲೇ ಉಳಿದಿದ್ದಾರೆ. ಆಲ್‌ರೌಂಡರ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ರವೀಂದ್ರ ಜಡೇಜಾ ಒಂಬತ್ತನೇ ಸ್ಥಾನದಲ್ಲಿದ್ದಾರೆ.


ವಿರಾಟ್ ಕೊಹ್ಲಿ– ಪಿಟಿಐ ಚಿತ್ರ

ಏಕದಿನ ರ‍್ಯಾಂಕಿಂಗ್ ಪಟ್ಟಿಯನ್ನು ಬುಧವಾರ ಪ್ರಕಟಿಸಲಾಗಿದ್ದು, 865 ರೇಟಿಂಗ್ ಪಾಯಿಂಟ್ಸ್ ಹೊಂದಿರುವ ಪಾಕಿಸ್ತಾನದ ಬ್ಯಾಟ್ಸ್‌ಮನ್ ಬಾಬರ್ ಆಜಮ್ ಮೊದಲ ಸ್ಥಾನದಲ್ಲಿದ್ದಾರೆ. ಕೊಹ್ಲಿ ಮತ್ತು ಶರ್ಮಾ ಬಳಿ ಕ್ರಮವಾಗಿ 857 ಮತ್ತು 825 ಪಾಯಿಟ್‌ಗಳಿವೆ.

690 ಪಾಯಿಂಟ್ಸ್ ಹೊಂದಿರುವ ಬೂಮ್ರಾ ಬೌಲಿಂಗ್ ವಿಭಾಗದಲ್ಲಿ ಐದನೇ ರ‍್ಯಾಂಕ್ ಉಳಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ. ನ್ಯೂಜಿಲೆಂಡ್‌ನ ಟ್ರೆಂಟ್ ಬೌಲ್ಟ್ (737) ಅಗ್ರಸ್ಥಾನದಲ್ಲಿದ್ದಾರೆ.

ಮಿಲ್ಖಾಸಿಂಗ್ ಪತ್ನಿಗೆ ನ್ಯುಮೋನಿಯಾ

ಚಂಡೀಗಡ (ಪಿಟಿಐ): ಕೋವಿಡ್ ಸೋಂಕಿನಿಂದ ಬಳಲಿ ಆಸ್ಪತ್ರೆಗೆ ದಾಖಲಾಗಿರುವ ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಅವರ ಆರೋಗ್ಯ ಸ್ಥಿರವಾಗಿದೆ.

ಬುಧವಾರ ಅವರನ್ನು ತುರ್ತು ನಿಗಾ ಘಟಕದಿಂದ ವಾರ್ಡ್‌ಗೆ ಸ್ಥಳಾಂತರಿಸಲಾಗಿದೆ. ಅವರಿಗೆ ಕೋವಿಡ್ –ನ್ಯುಮೊನಿಯಾಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಆಮ್ಲಜನಕದ ನೆರವು ನೀಡಲಾಗಿದೆ.

ಸಿಂಗ್ ಅವರ ಪತ್ನಿ, ಭಾರತ ಮಹಿಳಾ ವಾಲಿಬಾಲ್ ತಂಡದ ಮಾಜಿ ನಾಯಕಿ ನಿರ್ಮಲ್ ಕೌರ್ ಅವರಿಗೂ ಕೋವಿಡ್ –ನ್ಯೂಮೊನಿಯಾ ಖಚಿತವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಸಿಂಗ್ ದಂಪತಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ನಿಗಾ ವಹಿಸಲಾಗಿದೆ. ಸಿಂಗ್ ಅವರ ಕುಟುಂಬದಲ್ಲಿ ಎಲ್ಲರನ್ನೂ ಪರೀಕ್ಷಿಸಿದಾಗ ನಿರ್ಮಲ್ ಅವರ ವರದಿ ಮಾತ್ರ ನೆಗೆಟಿವ್ ಇತ್ತು. ಆದರೆ ಇವತ್ತು ಅವರಿಗೆ ಕೋವಿಡ್ ನ್ಯುಮೊನಿಯಾ ಕಂಡುಬಂದಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಮೊಹಾಲಿಯ ಫೋರ್ಟಿಸ್ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಒಲಿಂಪಿಕ್ಸ್ ರದ್ದುಪಡಿಸಲು ಒತ್ತಾಯಿಸಿದ ‘ಅಸಾಹಿ ಶಿಂಬುನ್’

ಟೋಕಿಯೊ (ಎಪಿ): ಒಲಿಂಪಿಕ್ ಕ್ರೀಡಾಕೂಟವನ್ನು ರದ್ದುಪಡಿಸುವಂತೆ ದಿನೇ ದಿನೇ ಒತ್ತಡ ಹೆಚ್ಚುತ್ತಿದೆ.ಜಪಾನ್‌ನ ಪ್ರತಿಷ್ಠಿತ ಅಸಾಹಿ ಶಿಂಬುನ್ ದಿನಪತ್ರಿಕೆ ಈ ಒತ್ತಾಯಕ್ಕೆ ದನಿಗೂಡಿಸಿದೆ. ಕ್ರೀಡಾಕೂಟ ರದ್ದುಪಡಿಸುವಂತೆ ಒತ್ತಾಯಿಸಿದ ಜಪಾನ್‌ನ ಪ್ರಮುಖ ದಿನಪತ್ರಿಕೆಗಳಲ್ಲಿ ಇದು ಮೊದಲನೆಯದಾಗಿದೆ. ಹಲವು ಪ್ರಾದೇಶಿಕ ದಿನಪತ್ರಿಕೆಗಳು ಸಹ ಒಲಿಂಪಿಕ್ ಆಯೋಜಿಸದಂತೆ ಒತ್ತಾಯಿಸಿದ್ದವು.


‘ಈ ಬೇಸಿಗೆಯಲ್ಲಿ ಒಲಿಂಪಿಕ್ ಆಯೋಜಿಸುವುದು ಸಮಂಜಸವಲ್ಲ. ಪರಿಸ್ಥಿತಿಯನ್ನು ಅವಲೋಕಿಸಿ ಕ್ರೀಡಾಕೂಟವನ್ನು ರದ್ದುಪಡಿಸುವ ಬಗ್ಗೆ ಪ್ರಧಾನಿ ಸುಗಾ ನಿರ್ಧಾರ ಕೈಗೊಳ್ಳಬೇಕು’ ಎಂದು ಅಸಾಹಿ ಶಿಂಬುನ್ ದಿನಪತ್ರಿಕೆಯ ಸಂಪಾದಕೀಯದಲ್ಲಿ ಬರೆಯಲಾಗಿದೆ.

ತಂಪು ವಾತಾವರಣ ನ್ಯೂಜಿಲೆಂಡ್‌ಗೆ ಅನುಕೂಲ: ಪ್ಯಾಟ್ ಕಮಿನ್ಸ್

ಸಿಡ್ನಿ (ಎಎಫ್‌ಪಿ): ಇಂಗ್ಲೆಂಡ್‌ನಲ್ಲಿ ಸದ್ಯ ಇರುವ ತಂಪು ವಾತಾವರಣ ಹೀಗೆಯೇ ಮುಂದುವರಿದರೆ ಜೂನ್ 18ರಂದು ನಡೆಯುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡಕ್ಕೆ ಅನುಕೂಲವಾಗಲಿದೆ ಎಂದು ಆಸ್ಟ್ರೇಲಿಯಾದ ವೇಗದ ಬೌಲರ್ ಪ್ಯಾಟ್ ಕಮಿನ್ಸ್ ಅಭಿಪ್ರಾಯಪಟ್ಟಿದ್ದಾರೆ.

‘ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ ನಡುವಣ ಈ ಪಂದ್ಯ ಪೈಪೋಟಿಯಿಂದ ಕೂಡಿರಲಿದೆ. ಇಂಗ್ಲೆಂಡ್‌ನಲ್ಲಿ ಬಹಳಷ್ಟು ಮಳೆ ಸುರಿಯುತ್ತಿದೆ ಎಂದು ಕೇಳಿದ್ದೇನೆ. ಈ ವಾತಾವರಣವು ಬಹುತೇಕ ನ್ಯೂಜಿಲೆಂಡ್ ವಾತಾವರಣಕ್ಕೆ ಹೊಂದುತ್ತದೆ’ ಎಂದು ಕಮಿನ್ಸ್ ಯೂಟ್ಯೂಬ್ ಸಂವಾದವೊಂದರಲ್ಲಿ ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,208
ಇಂದಿನ ಅಂತ್ಯ	15,301
▲	92
ದಿನದ ಗರಿಷ್ಠ	15,320

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹547

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1490 (1490)
ಸೋಯಾ (ರಿಫೈಂಡ್)	₹1415 (1415)
ಸೂರ್ಯಕಾಂತಿ(ರಿಫೈಂಡ್)	₹1650 (1650)
ಪಾಮೋಲಿನ್	₹1305 (1305)

ಚಿನ್ನದ ಬೆಲೆ ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 527ರಷ್ಟು ಹೆಚ್ಚಾಗಿ, ₹ 48,589ಕ್ಕೆ ತಲುಪಿದೆ. ಬೆಳ್ಳಿಯ ಬೆಲೆಯಲ್ಲಿಯೂ ಹೆಚ್ಚಳವಾಗಿದೆ. ಕೆ.ಜಿ. ಬೆಳ್ಳಿ ದರವು ₹ 1,043ರಷ್ಟು ಜಾಸ್ತಿಯಾಗಿ ₹ 71,775ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಹೆಚ್ಚಳವಾದ ಪರಿಣಾಮವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಬೆಲೆ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಕರ್ಣಾಟಕ ಬ್ಯಾಂಕ್‌ಗೆ ₹ 482.57 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್ 2020-21ರಲ್ಲಿ ₹ 482.57 ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ಆರ್ಥಿಕ ವರ್ಷದಲ್ಲಿ ₹ 431.78 ಕೋಟಿ ಲಾಭ ಗಳಿಸಿತ್ತು.

ಈ ವರ್ಷದ 4ನೇ ತ್ರೈಮಾಸಿಕದ ಅಂತ್ಯಕ್ಕೆ ₹ 31.36 ಕೋಟಿಗಳ ನಿವ್ವಳ ಲಾಭ ಪಡೆಯುವ ಮೂಲಕ ಕಳೆದ ವರ್ಷದ ನಾಲ್ಕನೇ ತ್ರೈಮಾಸಿಕಕ್ಕಿಂತ ಶೇಕಡ 14.83ರಷ್ಟು ಹೆಚ್ಚು ಪ್ರಗತಿ ಸಾಧಿಸಿದೆ.

ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ ಬುಧವಾರ ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಹಣಕಾಸು ವರದಿ ಅಂಗೀಕರಿಸಲಾಗಿದ್ದು, ಪ್ರತಿ ಷೇರಿಗೆ ₹ 1.8ರಷ್ಟು ಲಾಭಾಂಶ ನೀಡಲು ಶಿಫಾರಸು ಮಾಡಲಾಯಿತು.


ಮಹಾಬಲೇಶ್ವರ್ ಎಂ.ಎಸ್.

ಈ ವರ್ಷದಲ್ಲಿ ಬ್ಯಾಂಕಿನ ಒಟ್ಟು ವ್ಯವಹಾರವು ₹ 1.27 ಲಕ್ಷ ಕೋಟಿಗೆ ತಲುಪಿದೆ. ಬ್ಯಾಂಕಿನ ಠೇವಣಿಗಳು ₹ 75,654.86 ಕೋಟಿ ಇದ್ದು, ₹ 51,693.70 ಕೋಟಿ ಸಾಲ ವಿತರಿಸಲಾಗಿದೆ.

‘ಕೋವಿಡ್ ಸಂಕಷ್ಟದಲ್ಲೂ ನಾವು ಉತ್ತಮ ನಿರ್ವಹಣೆಯಿಂದ ಸಾರ್ವಕಾಲಿಕ ದಾಖಲೆಯ ₹ 482.57 ಕೋಟಿ ನಿವ್ವಳ ಲಾಭ ಘೋಷಿಸಲು ಸಾಧ್ಯವಾಗಿದೆ’ ಎಂದು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಮಹಾಬಲೇಶ್ವರ ಎಂ.ಎಸ್. ಹೇಳಿದ್ದಾರೆ.


ಕೊರೊನಾ ಹೊಡೆತಕ್ಕೆ ನಲುಗಿರುವ ಸಣ್ಣ ಉದ್ಯಮಗಳ ಚೇತರಿಕೆ ಹೇಗೆ?

ಕೊರೊನಾ ಹೊಡೆತ: ಸಣ್ಣ ಉದ್ಯಮಗಳ ಸಂಕಷ್ಟ

ಬೆಂಗಳೂರು: ರಾಜ್ಯದ ಆರ್ಥಿಕತೆಗೆ ಸಣ್ಣ ಉದ್ಯಮಗಳು ಹೆಚ್ಚಿನ ಕೊಡುಗೆ ನೀಡುತ್ತಿವೆ. ರಾಜ್ಯದಲ್ಲಿ 8.72 ಲಕ್ಷಕ್ಕೂ ಅಧಿಕ ಸಣ್ಣ ಕೈಗಾರಿಕೆಗಳಿದ್ದು, ಸುಮಾರು 2.62 ಕೋಟಿ ಜನರಿಗೆ ಜೀವನಾಧಾರವಾಗಿವೆ. ಇಂತಹ ಉದ್ಯಮಗಳು ಕೋವಿಡ್ ಸಾಂಕ್ರಾಮಿಕದ ಹೊಡೆತಕ್ಕೆ ಸಿಲುಕಿ ತತ್ತರಿಸಿವೆ.

ಸಣ್ಣ ಉದ್ಯಮಗಳನ್ನು ಮುಚ್ಚುವ ಅಪಾಯದಿಂದ ಪಾರುಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಆದರೆ ಇದುವರೆಗೂ ಸೂಕ್ತ ಸ್ಪಂದನೆ ಬಂದಿಲ್ಲ ಎಂದು ರಾಜ್ಯದ ವಾಣಿಜ್ಯ ಸಂಘಟನೆಗಳು ಅಸಮಾಧಾನ ತೋಡಿಕೊಂಡಿವೆ. ಕೊರೊನಾದಿಂದಾಗಿ ಸಣ್ಣ ಉದ್ಯಮಗಳು ಯಾವ ಸಮಸ್ಯೆ ಎದುರಿಸುತ್ತಿವೆ, ಸರ್ಕಾರದಿಂದ ನಿರೀಕ್ಷಿಸುತ್ತಿರುವ ಪರಿಹಾರ ಕ್ರಮಗಳು ಯಾವುವು ಎನ್ನುವ ಕುರಿತು ‘ಪ್ರಜಾವಾಣಿ’ ಬುಧವಾರ ನಡೆಸಿದ ಫೇಸ್‌ಬುಕ್ ಸಂವಾದದಲ್ಲಿ ಮೂವರು ಅತಿಥಿಗಳು ಹಂಚಿಕೊಂಡಿರುವ ಅಭಿಪ್ರಾಯದ ಸಂಕ್ಷಿಪ್ತ ರೂಪ ಇಲ್ಲಿದೆ.

‘ಸಣ್ಣ ಉದ್ಯಮಕ್ಕೂ ಅವಕಾಶ ಕೊಡಿ’



ದೊಡ್ಡ ಕೈಗಾರಿಕೆಗಳಿಗೆ ಅಗತ್ಯವಾದ ಉತ್ಪನ್ನ ಪೂರೈಕೆ ಮಾಡುವುದೇ ಎಂಎಸ್‌ಎಂಇಗಳು. ಆದರೆ ರಾಜ್ಯದಲ್ಲಿ ಎಂಎಸ್‌ಎಂಇಗಳಿಗೆ ಚಟುವಟಿಕೆ ನಡೆಸಲು ಅನುಮತಿ ಇಲ್ಲ. ದೊಡ್ಡ ಕೈಗಾರಿಕೆಗಳಿಗೆ ಮಾತ್ರವೇ ಅವಕಾಶ ನೀಡಲಾಗಿದೆ. ಇದು ರಾಜ್ಯ ಸರ್ಕಾರದ ತಪ್ಪು ನಿರ್ಧಾರ. ಸರ್ಕಾರದ ಈಗಿನ ನಿರ್ಧಾರದಿಂದಾಗಿ ದೊಡ್ಡ ಕೈಗಾರಿಕೆಗಳು ಬೇರೆ ರಾಜ್ಯಗಳಿಂದ ಉತ್ಪನ್ನ ತರಿಸಿಕೊಳ್ಳಲು ಆರಂಭಿಸಿವೆ. ಹೀಗಾದರೆ ರಾಜ್ಯದಲ್ಲಿನ ಸಣ್ಣ ಉದ್ಯಮಗಳು ಬಾಗಿಲು ಮುಚ್ಚುವುದರಲ್ಲಿ ಸಂಶಯ ಇಲ್ಲ. ಹೀಗಾಗಿ, ಮುಚ್ಚುವುದಿದ್ದರೆ ಎಲ್ಲಾ ಕೈಗಾರಿಕೆಗಳನ್ನೂ ಮುಚ್ಚಿ, ಇಲ್ಲದಿದ್ದರೆ ಎಲ್ಲವನ್ನೂ ತೆರೆಯಲು ಅವಕಾಶ ನೀಡಿ.

ಕೆ.ಬಿ. ಅರಸಪ್ಪ, ಅಧ್ಯಕ್ಷ, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ

ಪ್ರಜಾವಾಣಿ ಸಂವಾದ

ಶೀಘ್ರವೇ ಪರಿಹಾರ ಬರಲಿದೆ



ಕಳೆದ ವರ್ಷ ಕೇಂದ್ರ ಸರ್ಕಾರವು ಎಂಎಸ್‌ಎಂಇ ವಲಯಕ್ಕೆ ₹ 3 ಲಕ್ಷ ಕೋಟಿ ಮೊತ್ತದ ತುರ್ತು ಸಾಲ ಖಾತರಿ ಯೋಜನೆ ಜಾರಿಗೊಳಿಸಿತ್ತು. ಎಲ್ಲಾ ಎಂಎಸ್‌ಎಂಇಗಳಿಗೂ ಇದರ ಪ್ರಯೋಜನ ದೊರೆತಿದೆ. ಒಬ್ಬ ಉದ್ಯಮಿಯಾಗಿ ನನಗೂ ₹ 4.3 ಕೋಟಿ ಬಂದಿದೆ. ಹೆಚ್ಚಿನ ನಷ್ಟಕ್ಕೆ ಒಳಗಾಗಿರುವ ವಲಯಗಳಿಗೆ ಕೆ.ವಿ. ಕಾಮತ್ ಸಮಿತಿಯ ಶಿಫಾರಸಿನ ಮೇರೆಗೆ ಸರ್ಕಾರವು ಈ ವರ್ಷವೂ ಪರಿಹಾರ ನೀಡಲಿದೆ.

ಪ್ರದೀಪ್ ಜಿ. ಪೈ, ಸಂಚಾಲಕ, ಬಿಜೆಪಿ ರಾಜ್ಯ ಕೈಗಾರಿಕಾ ಪ್ರಕೋಷ್ಠ

ವೈಜ್ಞಾನಿಕ ಚಿಂತನೆಯ ಕೊರತೆ



ವೈಜ್ಞಾನಿಕವಾಗಿ ಚಿಂತನೆ ನಡೆಸದೆಯೇ ರಾಜ್ಯ ಸರ್ಕಾರವು ಲಾಕ್‌ಡೌನ್ ನಿರ್ಧಾರ ತೆಗೆದುಕೊಂಡಿದ್ದೇ ದೊಡ್ಡ ಸಮಸ್ಯೆಯಾಗಿದೆ. ಲಾಕ್‌ಡೌನ್‌ನಿಂದಾಗಿ ಮಾರಾಟ ಮತ್ತು ಖರೀದಿಯ ನಡುವಿನ ಸಂಪರ್ಕ ಕಡಿತಗೊಂಡಿದೆ. ಇದರಿಂದಾಗಿ ಸಣ್ಣ ಉದ್ಯಮಗಳು ಹೆಚ್ಚಿನ ಸಂಕಷ್ಟ ಎದುರಿಸುತ್ತಿವೆ. ರಾಜಕೀಯ ಇಚ್ಛಾಶಕ್ತಿಯ ಕೊರತೆ, ವಾಣಿಜ್ಯ ಸಂಘಟನೆಗಳ ಸಲಹೆ, ಅಭಿಪ್ರಾಯ ಪಡೆಯದೇ ನಿರ್ಧಾರಗಳನ್ನು ತೆಗೆದುಕೊಂಡಿರುವುದು ಉದ್ಯಮಗಳ ಸಂಕಷ್ಟಕ್ಕೆ ಕಾರಣ. ಸರ್ಕಾರದ ಯೋಜನೆಗಳಿಗೆ ಬ್ಯಾಂಕ್‌ಗಳಿಂದ ಸೂಕ್ತ ಸ್ಪಂದನೆ ಸಿಗುತ್ತಿಲ್ಲ. ಕಳೆದ ವರ್ಷ ಘೋಷಿಸಿದ್ದ ತುರ್ತು ಸಾಲ ಖಾತರಿ ಯೋಜನೆಯು ನಿಜವಾಗಿಯೂ ಸಂಕಷ್ಟದಲ್ಲಿರುವ ಉದ್ಯಮಗಳನ್ನು ತಲುಪಿಯೇ ಇಲ್ಲ.

ಆರ್. ಶಿವಕುಮಾರ್, ಅಧ್ಯಕ್ಷ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆಗಳ ಒಕ್ಕೂಟ

51 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ತಂತ್ರಜ್ಞಾನ, ಹಣಕಾಸು ಮತ್ತು ಆಟೊಮೊಬೈಲ್ ವಲಯಗಳ ಷೇರುಗಳ ಖರೀದಿ ಭರಾಟೆ ಜೋರಾಗಿದ್ದ ಕಾರಣ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಬುಧವಾರ 379.99 ಅಂಶ ಏರಿಕೆ ದಾಖಲಿಸಿತು.

ದಿನದ ವಹಿವಾಟಿನ ಅಂತ್ಯಕ್ಕೆ 51,017 ಅಂಶಗಳಲ್ಲಿ ಕೊನೆಗೊಂಡಿತು. ಮಾರ್ಚ್ 10ರ ನಂತರ ಸೆನ್ಸೆಕ್ಸ್ 51 ಸಾವಿರದ ಗಡಿ ದಾಟಿರುವುದು ಇದೇ ಮೊದಲು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 93 ಅಂಶ ಏರಿಕೆ ಕಂಡಿತು.

ಬಜಾಜ್ ಫಿನ್‌ಸರ್ವ್, ಬಜಾಜ್ ಫೈನಾನ್ಸ್, ಇನ್ಫೊಸಿಸ್, ಮಾರುತಿ, ಎಚ್‌ಡಿಎಫ್‌ಸಿ, ಎಲ್‌ಆ್ಯಂಡ್‌ಟಿ, ಟೆಕ್ ಮಹೀಂದ್ರ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಷೇರುಗಳು ಉತ್ತಮ ಗಳಿಕೆ ಕಂಡವು. ಪವರ್ ಗ್ರಿಡ್, ಎನ್‌ಟಿಪಿಸಿ, ಒಎನ್‌ಜಿಸಿ, ಕೋಟಕ್ ಬ್ಯಾಂಕ್, ಡಾ ರೆಡ್ಡೀಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಟಿಸಿ ಮತ್ತು ಭಾರ್ತಿ ಏರ್‌ಟೆಲ್ ಷೇರುಗಳು ಕುಸಿತ ದಾಖಲಿಸಿದವು.



‘ಇನ್ನೊಂದು ಸುತ್ತಿನ ಪರಿಹಾರ ಕ್ರಮಗಳನ್ನು ಘೋಷಿಸಬಹುದು ಎಂಬ ನಿರೀಕ್ಷೆಯಲ್ಲಿ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ. ಪ್ರವಾಸೋದ್ಯಮ, ಆತಿಥ್ಯ ಮತ್ತು ಎಂಎಸ್‌ಎಂಇ ವಲಯಗಳನ್ನು ಗಮನದಲ್ಲಿ ಇರಿಸಿಕೊಂಡು ಇನ್ನೊಂದು ಸುತ್ತಿನ ಆರ್ಥಿಕ ಪ್ಯಾಕೇಜ್ ಘೋಷಿಸುವ ಸಾಧ್ಯತೆ ಇದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದರು.

ರಿಯಲ್ ಎಸ್ಟೇಟ್, ಮಾಹಿತಿ ತಂತ್ರಜ್ಞಾನ ವಲಯಗಳ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರು.

ಎಸ್‌ಬಿಐ ಎಟಿಎಂ ವಿತ್‌ಡ್ರಾ ಶುಲ್ಕ ಪರಿಷ್ಕರಣೆ

ಬೆಂಗಳೂರು: ಶೂನ್ಯ ಬ್ಯಾಲೆನ್ಸ್ ಖಾತೆ ಅಥವಾ ಸಾಮಾನ್ಯ ಉಳಿತಾಯ ಬ್ಯಾಂಕ್ ಠೇವಣಿ ಖಾತೆ (ಬಿಎಸ್‌ಬಿಡಿ) ಹೊಂದಿರುವ ಗ್ರಾಹಕರು ಎಟಿಎಂನಿಂದ, ಬ್ಯಾಂಕ್ ಶಾಖೆಗಳಿಂದ ಹಣ ಹಾಗೂ ಚೆಕ್ ಬುಕ್ ಪಡೆಯಲು ಕೊಡಬೇಕಿರುವ ಶುಲ್ಕಗಳನ್ನು ಎಸ್‌ಬಿಐ ಪರಿಷ್ಕರಿಸಿದೆ.

ಜುಲೈ 1ರಿಂದ ಪರಿಷ್ಕೃತ ನಿಯಮ ಜಾರಿಗೆ ಬರಲಿದೆ. ಎಟಿಎಂ ಮತ್ತು ಶಾಖೆಗಳಿಂದ ಶುಲ್ಕವಿಲ್ಲದೆ ತಿಂಗಳಿಗೆ ನಾಲ್ಕು ಬಾರಿ ಮಾತ್ರ ಹಣ ಪಡೆಯಬಹುದು. ಆ ಬಳಿಕ ಪ್ರತಿ ಬಾರಿ ಹಣ ಹಿಂಪಡೆದಾಗಲೂ ₹ 15 ಹಾಗೂ ಜಿಎಸ್‌ಟಿ ಪಾವತಿಸಬೇಕು. ಎಸ್‌ಬಿಐಯೇತರ ಬ್ಯಾಂಕ್‌ಗಳ ಎಟಿಎಂನಿಂದ ಹಣ ಪಡೆಯಲೂ ಇದು ಅನ್ವಯ.

ಸದ್ಯ ಹಣಕಾಸು ವರ್ಷವೊಂದರಲ್ಲಿ 10 ಚೆಕ್‌ಗಳಿರುವ ಬುಕ್ ಅನ್ನು ಎಸ್‌ಬಿಐ ಉಚಿತವಾಗಿ ನೀಡುತ್ತಿದೆ. ಇದಕ್ಕಿಂತ ಹೆಚ್ಚು ಬೇಕಿದ್ದಲ್ಲಿ, ಪರಿಷ್ಕೃತ ನಿಯಮದ ಪ್ರಕಾರ 10 ಚೆಕ್‌ಗಳ ಒಂದು ಚೆಕ್‌ಬುಕ್‌ಗೆ ₹ 40 ಶುಲ್ಕ, ಜಿಎಸ್‌ಟಿ ಪಾವತಿಸಬೇಕು. 25 ಚೆಕ್‌ಗಳಿರುವುದಕ್ಕೆ ₹ 75 ಶುಲ್ಕ, ಜಿಎಸ್‌ಟಿ ಪಾವತಿಸಬೇಕು. ತುರ್ತಾಗಿ ಚೆಕ್ ಬುಕ್ ಬೇಕಾದಲ್ಲಿ 10 ಚೆಕ್‌ಗಳಿರುವುದಕ್ಕೆ ₹ 50 ಶುಲ್ಕ, ಜಿಎಸ್‌ಟಿ ಪಾವತಿಸಬೇಕು. ಹಿರಿಯ ನಾಗರಿಕರು ಶುಲ್ಕ ಪಾವತಿಸಬೇಕೆಂದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	400
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40000
ಹಳತು	42500-50000
ಕಾರ್ಕಳ	
ಹೊಸತು	36000-40000
ಕುಂದಾಪುರ	
ಹೊಸಚಾಲಿ	35000-40000
ಯಲ್ಲಾಪುರ	
ಬಿಳಿಗೋಟು	27070-31040
ಚಾಲಿ	32220-36610
ರಾಶಿ	37880-40960
ತಟ್ಟಿಬೆಟ್ಟೆ	30510-34040
ಪುತ್ತೂರು	
ಹೊಸತು	28000-39500
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	225-320
ದ್ವಿತಳಿ (ಬಿ.ವಿ)	262-409

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10500	10400	10300	150.50 ಸೆಂಟ್ಸ್
ಎಸಿ	4425	4000	3925	
ಆರ್‌ಪಿ	5100	5050	5100	ಲಂಡನ್
ಆರ್‌ಸಿ	3100	2970	2940	1486 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

26-5-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	9350-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	1400 (1410)
ಪಾಮ್ ವಾರದ ಡೆಲಿವರಿ	1303 (1303)
ಸೂರ್ಯಕಾಂತಿ ಎಣ್ಣೆ ಕಚ್ಚಾ	1610 (1610)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,900 (48,400)
ಬೆಳ್ಳಿ ಕೆ.ಜಿ 71,700 (70,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ